ಕನ್ನಡ ವಿಶ್ವವಿದ್ಯಾಲಯ, ಹಂಪಿ

"ಸಾರಾ ಅಬೂಬಕ್ಕರ್‌ರವರ ಕಥೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು"

ಕಾವ್ಯಮಂಡಲದ ವತಿಯಿಂದ ಎಂ. ಫಿಲ್. ಪದವಿಗಾಗಿ ಹಂಪಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ನಿಬಂಧ

ಸಂಶೋಧನಾ ವಿದ್ಯಾರ್ಥಿನಿ
ನೂರ್‌ಜಹಾ ಎಸ್. ಎಫ್.
ನೋಂದಣಿ ಸಂಖ್ಯೆ: KVMBKS-00332

ಮಾರ್ಗದರ್ಶಕರು
ಡಾ|| ಡಿ. ಮಂಗಳಾ ಪ್ರಿಯದರ್ಶಿನಿ ಎಂ.ಎ., ಎಂ.ಫಿಲ್., ಪಿ.ಹೆಚ್.ಡಿ.
ಪ್ರಾಂಶುಪಾಲರು
ವಿ.ವಿ.ಎಸ್. ಪ್ರಥಮ ದರ್ಜೆ ಮಹಿಳಾ ಕಾಲೇಜು
ಬಸವೇಶ್ವರನಗರ, ಬೆಂಗಳೂರು.

ಕಾವ್ಯಮಂಡಲ
13/85, ರಾಷ್ಟ್ರೀಯ ವಿದ್ಯಾಲಯ ರಸ್ತೆ
ಬಸವನಗುಡಿ, ಬೆಂಗಳೂರು - 04

2009

783 (783)

ದೃಢೀಕರಣ ಪತ್ರ

ನೂರ್‌ಜಹಾ ಎಸ್.ಎಫ್. ರವರು ಎಂ.ಫಿಲ್. ಪದವಿಗಾಗಿ ಬರೆದು ಸಿದ್ಧಪಡಿಸಿರುವ **"ಸಾರಾ ಅಬೂಬಕ್ಕರ್‌ರವರ ಕಥೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು"** ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

ಡಿ. ಮಂಗಳಾ (signature)

ಮಾರ್ಗದರ್ಶಕರು

ಡಾ|| ಡಿ. ಮಂಗಳಾ ಪ್ರಿಯದರ್ಶಿನಿ

ಎಂ.ಎ., ಎಂ.ಫಿಲ್., ಪಿ.ಹೆಚ್.ಡಿ.

ಪ್ರಾಂಶುಪಾಲರು

ವಿ.ವಿ.ಎಸ್. ಪ್ರಥಮ ದರ್ಜೆ ಮಹಿಳಾ ಕಾಲೇಜು

ಬಸವೇಶ್ವರನಗರ, ಬೆಂಗಳೂರು.

ಸ್ಥಳ: ಬೆಂಗಳೂರು

ದಿನಾಂಕ: 22.09.2009

783

ಪ್ರಮಾಣ ಪತ್ರ

ಸಾರಾ ಅಬೂಬಕ್ಕರ್‌ರವರ ಕಥೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು ಎಂಬ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು **ಡಾ. ಮಂಗಳಾ ಪ್ರಿಯದರ್ಶಿನಿ** ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವಾಗಿ ಇದುವರೆವಿಗೂ ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ಸ್ಥಳ : ಬೆಂಗಳೂರು
ದಿನಾಂಕ : 22.9.2009

ನೂರ್‌ಜಹಾ. ಎಸ್.ಎಫ್
ಸಂಶೋಧನಾ ವಿದ್ಯಾರ್ಥಿ



ಪರಿವಿಡಿ

ಸಾರಾ ಅಬೂಬಕ್ಕರ್‌ರವರ ಕಥೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸ್ತ್ರೀ ಸಂವೇದನೆ ಎಂಬ ಮಾತು ಇತ್ತೀಚಿನದಾದರೂ ಸಂವೇದನೆ ಇತ್ತೀಚಿನದಲ್ಲ. ಸಂವೇದನೆಯ ಸ್ವರೂಪ ಕಾಲಕಾಲಕ್ಕೆ ಬೇರೆ ರೀತಿಯಾಗಿರಬಹುದು, ಬೇರೆ ಬೇರೆ ನೆಲೆಗಳಿಂದ ಪ್ರೇರಿತವಾಗಿರಬಹುದು. ಸ್ತ್ರೀ ಸಂವೇದನೆ ಇಂದು ನಾವು ಈಗ ಗುರುತಿಸುವ ಪರಿಭಾಷೆ ಮತ್ತು ಪರಿಕಲ್ಪನೆಗಳನ್ನು ಸ್ಪಷ್ಟಪಡಿಸಿಕೊಂಡು ಹಿಂದಿನ ಸಾಹಿತ್ಯ ಅಭಿವ್ಯಕ್ತಿಯನ್ನು ನೋಡಿದಾಗ ಇದಕ್ಕೆ ಒಪ್ಪದ ವಿಷಯಗಳು ಹೊರಬೀಳಬಹುದು.

ವಿಸ್ತೃತರೂಪ ಪಡೆದುಕೊಳ್ಳುತ್ತಿರುವಂತಹ ಆಧುನಿಕ ಸಂದರ್ಭದ ಕಥಾಸಾಹಿತ್ಯವು ನಿಜವಾಗಿ ಒಂದು ಹೊಸ ತಿರುವನ್ನು ಪಡೆದುಕೊಳ್ಳುತ್ತಿದೆ. ಇದರ ಜೊತೆ ಹಲವು ಸಂವೇದನೆಗಳನ್ನು ಒಳಗೊಂಡಿದೆ. ಇಂದು ನಮ್ಮ ಸಮಾಜದಲ್ಲಿ ಹಳೆಯ ವಿಚಾರಗಳು ಬದಲಾಗಿ ಹೊಸ ವಿಚಾರಗಳ ಆಗಮನವಾಗಿದೆ. ಆಧುನಿಕ ಯುಗದಲ್ಲಿ ಹೆಣ್ಣು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಬಲಳಾಗುತ್ತಾ ಬಂದಿದ್ದು ತನ್ನದೇ ಆದ ಆಲೋಚನೆಗಳನ್ನು ಹೊಂದಿದ್ದಾಳೆ. ಈ ರೀತಿಯ ಹೊಸ ಆಲೋಚನೆ, ಅನುಭವ, ಅನಿಸಿಕೆಗಳನ್ನು ಅಭಿವ್ಯಕ್ತಿಸಲು ಸೂಕ್ತವಾದ ಹೊಸ ಸಾಹಿತ್ಯ ಪ್ರಕಾರವನ್ನು ಕಂಡುಕೊಂಡಿದ್ದಾಳೆ. ಅದೇ ಸಣ್ಣಕಥಾಪ್ರಕಾರ. ಕನ್ನಡ ಸಾಹಿತ್ಯದಲ್ಲಿ ಸಣ್ಣಕಥಾ ಪ್ರಕಾರವೆಂದರೆ ಎಲ್ಲರ ಮನಸೆಳೆಯುವಂತದ್ದಾಗಿದೆ.

ಆಧುನಿಕ ಸಂದರ್ಭದಲ್ಲಿ ಕಥಾಸಾಹಿತ್ಯಕ್ಕೆ ಒಂದು ಹೊಸತಿರುವು ಬಂದಿದೆ. ಇದನ್ನು ನಾವು ನವೋದಯದ ಆರಂಭದಿಂದಲೂ ಗುರುತಿಸಬಹುದು. ಈ ಕಾಲದಲ್ಲಿ ಇದು ಸ್ತ್ರೀಸಂವೇದನೆಯ ಮುಖ್ಯಮಾರ್ಗವಾಗಿತ್ತು. ಇಲ್ಲಿ ಕಾಣಿಸಿಕೊಂಡ ಅನೇಕ ಲೇಖಕಿಯರು ಹೆಣ್ಣಿನ ಸಮಸ್ಯೆಗಳನ್ನು ಅವಳ ಜೀವನವನ್ನು ಕುರಿತು ಸೃಜನಶೀಲವಾಗಿ ಬರೆದರು. ಇವರು ಒಂದು ಮಾರ್ಗದರ್ಶನವನ್ನು ತೋರಿಸಿಕೊಟ್ಟವರು. ಮುಂದೆ ಬಂದ ಎಷ್ಟೋ ಲೇಖಕಿಯರು ಇದೇ ದಾಟಿಯಲ್ಲಿ ಸಾಗಿದ್ದಾರೆ. ನವ್ಯದ ಸಂದರ್ಭದಲ್ಲಿ ಅನೇಕ ಲೇಖಕಿಯರು ಸೃಜನಶೀಲರಾಗಿ, ಮಹತ್ವಕಾರಿಯಾಗಿ ಕತೆಗಳನ್ನು ರಚಿಸಿ ಹೊಸ ಹೊಸ ಸಂವೇದನೆಗಳನ್ನು ಮೂಡಿಸಿದವರು. ಹಾಗೆಯೇ ದಲಿತ ಮತ್ತು ಬಂಡಾಯದ

ಸಂದರ್ಭದಲ್ಲಿಯೂ ಹೊಸ ಹೊಸ ತಿರುವುಗಳನ್ನು ಪಡೆದುಕೊಳ್ಳುತ್ತಾ ಕಥಾಸಾಹಿತ್ಯವು ಬೆಳೆಯುತ್ತಾ ಬಂತು. ಇವರೆಲ್ಲರ ಕಥೆಗಳ ಮೂಲ ವಸ್ತು ಒಂದೇ ಆಗಿದ್ದರೂ ದೃಷ್ಟಿಕೋನ ಸಮಸ್ಯೆಗಳು, ಸಂದರ್ಭ, ಪರಿಸ್ಥಿತಿ ಬೇರೆ ಬೇರೆಯಾಗಿತ್ತು. ಈ ಹಿನ್ನೆಲೆಯಲ್ಲಿ ಕಥೆಗಳನ್ನು ರಚಿಸಿದವರಲ್ಲಿ ಸಾರಾ ಅಬೂಬಕ್ಕರವರನ್ನು ಪ್ರಮುಖವಾಗಿ ಗುರುತಿಸಬಹುದು.

ಸಾರಾ ಅಬೂಬಕ್ಕರ್ ಬಂಡಾಯದ ಘಟ್ಟದಲ್ಲಿ, ಬಂಡಾಯದ ನೆಲೆಯಲ್ಲಿ ಬರೆಯಲು ಪ್ರಾರಂಭಿಸಿದರು. ಇವರ ಕತೆಗಳಲ್ಲಿ ಸ್ತ್ರೀಸಂವೇದನೆಯ ಜೊತೆಗೆ ಮುಸ್ಲಿಂ ಸಂವೇದನೆಯನ್ನು ನೋಡಬಹುದು. ಹೊಸ ಹೊಸ ಸಂವೇದನೆಗಳ ಮೂಲಕ ಹೊಸ ಅಲೆಯನ್ನು ಎಬ್ಬಿಸಿದವರು ಸಾರಾರವರು. ಹೊಸ ರೀತಿಯ ಕತೆಗಾರಿಕೆ ಮತ್ತು ವಸ್ತುವನ್ನು ಕುರಿತ ವಿಭಿನ್ನ ಪರಿಭಾಷೆಯ ಮೂಲಕ ಕನ್ನಡ ಕಥಾಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದುಕೊಟ್ಟರು. ಸ್ವತಃ ಮುಸ್ಲಿಂ ಧರ್ಮದವರಾದ ಇವರು ತಮ್ಮ ಧರ್ಮದಲ್ಲಿರುವಂತ ಅಮಾನವೀಯ ಮೌಲ್ಯಗಳನ್ನು, ಆಚಾರ ಪದ್ಧತಿಗಳನ್ನು, ಪುರುಷನ ದೌರ್ಜನ್ಯವನ್ನು ಬಯಲಿಗೆಳೆದಿದ್ದಾರೆ. ಮುಸ್ಲಿಂ ಸಮಾಜದಲ್ಲಿರುವಂತಹ ತಲಾಖ್, ನಿಖಾ, ಘೋಷ, ಒಜ್ಜತ್ ಪದ್ಧತಿಗಳನ್ನು ಕುರಿತು ಹಾಗೂ ಪುರುಷರು ಇದನ್ನು ಒಂದು ಅಸ್ತ್ರವಾಗಿ ಬಳಸಿಕೊಳ್ಳುವಂತಹ ರೀತಿಯನ್ನು ಕುರಿತು ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ. ಇವರ ಉದ್ದೇಶ ತಮ್ಮ ಧರ್ಮದ ನ್ಯೂನತೆಗಳನ್ನು, ನಿಯಮಗಳನ್ನು ಬೇರೆಯವರಿಗೆ ತಿಳಿಸುವುದಷ್ಟೇ ಆಗಿರದೆ ಅರಿವು ಮೂಡಿಸುವುದೂ ಆಗಿತ್ತು. ಮುಸ್ಲಿಂ ಹೆಣ್ಣುಮಕ್ಕಳು ಶಿಕ್ಷಿತರಾಗುವುದು, ಜೊತೆಗೆ ಜಾಗ್ರತೆಗೊಳ್ಳುವುದೂ ಆಗಿತ್ತು. ಅನ್ಯಾಯಕ್ಕೊಳಗಾಗುತ್ತಿದ್ದ ಹೆಣ್ಣುಮಕ್ಕಳಲ್ಲಿ ಅರಿವು, ಜೊತೆಗೆ ಅನ್ಯಾಯಕ್ಕೆ ಒಳಗಾಗಿದ್ದ ಹೆಣ್ಣಿನ ಸ್ಥಿತಿಗತಿಯಪರಿಚಯವು ಮುಖ್ಯವಾಗಿತ್ತು. ಇಂತಹ ಎಲ್ಲಾ ವಿಷಯಗಳ ಹಾಗೂ ಪ್ರಮುಖ ಅಂಶಗಳ ಅಧ್ಯಯನವೇ ಈ ನಿಬಂಧದ ಉದ್ದೇಶವಾಗಿದೆ. ಜೊತೆಗೆ ಈ ನಿಬಂಧದಲ್ಲಿಮೇಲೆ ಹೇಳಿದ ವಿಷಯಗಳೆಲ್ಲವೂ ಸಾರಾರವರ ಕತೆಗಳಲ್ಲಿ ಹೇಗೆ ಮೂಡಿಬಂದಿದೆ ಎಂಬುದರ ಅಧ್ಯಯನವು ಮುಖ್ಯವಾಗಿವೆ. ಆದ್ದರಿಂದ ಈ ನಿಬಂಧದ ಮೂಲಕ ಇಂತಹ ಅಧ್ಯಯನದ ಮೇಲೆ ಬೆಳಕು ಹರಿಸಲಾಗಿದೆ.

ವಿಶೇಷವಾಗಿ ಈ ನಿಬಂಧವು ಮಹಿಳೆಯರ ಕಥಾಸಾಹಿತ್ಯದಲ್ಲಿ ಅದರಲ್ಲಿಯೂ ಸಾರಾರವರ ಕಥೆಗಳಲ್ಲಿ ಹೆಣ್ಣಿನ ಜೀವನ, ಸ್ಥಿತಿಗತಿ, ಸ್ಥಾನಮಾನ ವ್ಯಕ್ತಿತ್ವವನ್ನು ಓದುಗರ

ಮನಸ್ಸು ಮುಟ್ಟುವಂತೆ ರಚಿಸಿದ್ದಲ್ಲದೆ ಅವರ ವಿಚಾರಧಾರೆಗಳು ಹೆಣ್ಣಿನ ಮನಸ್ಥಿತಿ, ಆಕೆಯನ್ನು ಸಮಾಜ ನೋಡುವ ವಿಭಿನ್ನರೀತಿ, ಹಾಗೂ ಸ್ವೀಕರಿಸುವ ಮನೋಭಾವ ಎಂತಹದ್ದುಹೀಗೆ ಹಲವು ವಿಚಾರಗಳ ಶೋಧನೆ ನಡೆಯಬೇಕಾಗಿದೆ. ಆದ್ದರಿಂದ ಸಾರಾರವರ ಕಥೆಗಳಲ್ಲಿ ಸ್ತ್ರೀಸಂವೇದನೆಯ ನೆಲೆಗಳ ವಿಶ್ಲೇಷಣೆ ಹಾಗೂ ಅಧ್ಯಯನ ಅಗತ್ಯವಾಗಿದ್ದು ಅದನ್ನು ಈ ನಿಬಂಧದಲ್ಲಿ ಪ್ರಯತ್ನಿಸಲಾಗಿದೆ. ಇವರ ಕತೆಯಲ್ಲಿರುವಂತಹ ಸಂವೇದನೆಗಳನ್ನು ಹೊರತೆಗೆಯುವ ಪ್ರಯತ್ನ ಈ ಅಧ್ಯಯನದಲ್ಲಿದೆ. ಆದ್ದರಿಂದ ಕನ್ನಡ ಸಾಹಿತ್ಯ ಅಭಿವ್ಯಕ್ತಿಯಲ್ಲಿ ಸ್ತ್ರೀ ಮತ್ತು ಸ್ತ್ರೀಸಂವೇದನೆಗಳು ಕಾಣಿಸಿಕೊಂಡ ಕ್ರಮವನ್ನು ಗ್ರಹಿಸುವ, ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನವನ್ನು ಈ ಅಧ್ಯಯನ ಒಳಗೊಂಡಿದೆ.

ಅಧ್ಯಾಯ -೧

ಮಹಿಳಾ ಕಥಾಸಾಹಿತ್ಯ, ಆದರ ಸ್ವರೂಪ ಮತ್ತು ಲಕ್ಷಣ

ಹೆಣ್ಣು ತನ್ನನ್ನು ತಾನೇ ಕಲೆಯ ನೆಲೆಯಲ್ಲಿ ಅವಲೋಕಿಸಿಕೊಳ್ಳುವ ತನಗೆ ತಾನೇ ತನ್ನ ಸ್ಥಿತಿಗಳನ್ನು ವಿವರಿಸಿಕೊಳ್ಳುವ ಕ್ರಮದ ಚಿಂತನೆಯೇ ನಮ್ಮ ಸಾಹಿತ್ಯ ವ್ಯವಸ್ಥೆಯಲ್ಲಿ ಪ್ರಧಾನ ಸಂಸ್ಕೃತಿಯ ದೃಷ್ಟಿಯಲ್ಲಿ ಅತ್ಯಂತ ಪ್ರಗತಿಪರವಾದದ್ದು, ಕ್ರಾಂತಿಕಾರಿಯಾದದ್ದು, ಏಕೆಂದರೆ ನಮ್ಮ ಪಿತೃಪ್ರಧಾನ ವ್ಯವಸ್ಥೆ ಅವಳ ಸ್ವಂತ ಆಲೋಚನೆಗಳು ಮುಖ್ಯ ಎಂದು ಯಾವತ್ತೂ ಭಾವಿಸಲೇ ಇಲ್ಲ. ಹೀಗಿದ್ದ ಪರಿಸ್ಥಿತಿಯಲ್ಲಿ ಹೆಣ್ಣನ್ನು ನಾವು ಕಲೆಯ ನೆಲೆಯಲ್ಲಿ ನೋಡಲು ಸಾಧ್ಯವಾದದ್ದು ಕ್ರಿ.ಶ. ೧೨ನೇ ಶತಮಾನದಲ್ಲಿ ಜರುಗಿದ ವಚನಚಳುವಳಿಯಿಂದ. ಅಲ್ಲಿ ಕಾಣಿಸಿಕೊಂಡ ಹೆಣ್ಣು ತನ್ನ ಅನುಭವಗಳನ್ನು ಸಮಸ್ಯೆಗಳನ್ನು ತನ್ನ ಬರವಣಿಗೆಯ ಮೂಲಕ ಹೊರಚೆಲ್ಲಿರುವುದನ್ನು ನೋಡಬಹುದು. ಇವಳು ಸಮಾಜದ ಕಟ್ಟುಪಾಡುಗಳನ್ನು ಮುರಿದು, ಹೊರಬಂದು ಸ್ವಾತಂತ್ರ್ಯವಾಗಿ ನಿಂತು ಸ್ವತಂತ್ರವಾಗಿ ಯೋಚಿಸಲು ಪ್ರಾರಂಭಿಸಿದಳು. ಅಷ್ಟೇಅಲ್ಲದೆ ಸಾಹಿತ್ಯ ಲೋಕಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡಿದಳು

೧೨ನೆಯ ಶತಮಾನದಲ್ಲಿ ಜರುಗಿದ ವೀರಶೈವ ಕ್ರಾಂತಿಯ ಫಲವಾಗಿ ಹೆಣ್ಣು ಮೊದಲ ಬಾರಿಗೆ ಮೌನ ಮುರಿದು ಮಾತನಾಡಿದಳು. ಪುರುಷನಿಗೆ ಸರಿಸಮಾನವಾಗಿ ಚಿಂತನೆ ನಡೆಸಿದಳು. ವಚನಗಳ ಮೂಲಕ ಅನುಭವ, ಅನಾನುಭವಗಳನ್ನು ಪ್ರಕಟಿಸಿದಳು. ಹೀಗೆ ಮಾತನಾಡಲು ಪ್ರಾರಂಭಿಸಿದ ಹೆಣ್ಣು ಇಂದು ಸಾಕಷ್ಟು ಬೆಳೆದಿರುವುದನ್ನು ನೋಡಬಹುದು. ಅಷ್ಟೇ ಅಲ್ಲದೆ ಸಾಹಿತ್ಯಕ್ಷೇತ್ರ, ಹಾಗೂ ಕಲೆಯ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾಳೆ. ಸಾಹಿತ್ಯದ ಪ್ರಮುಖ ಹಾಗೂ ಜನಪ್ರಿಯ ಪ್ರಕಾರವಾದಂತಹ **'' ಸಣ್ಣಕಥಾ ಪ್ರಕಾರ''** ಕ್ಕೆ ಇವಳ ಕೊಡುಗೆ ಅಪಾರ. ಇದನ್ನು ನಾವು ೨೦ನೇ ಶತಮಾನದ ಪ್ರಾರಂಭದಿಂದ ಇಂದಿನವರೆಗೂ ಗುರುತಿಸಬಹುದು.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹೊಸಗನ್ನಡ ಸಾಹಿತ್ಯ ಪರಂಪರೆಯೂ ಒಂದು ಪ್ರಮುಖ ಘಟ್ಟ. ಸಾಮಾಜಿಕ ಜೀವನದಲ್ಲುಂಟಾದ ಸ್ಥಿತ್ಯಂತರಗಳು ಸಾಹಿತ್ಯದ ಮೇಲೆ ಪ್ರಭಾವವನ್ನುಂಟು ಮಾಡಿದವು. ಮುಖ್ಯವಾಗಿ ಅದು ಶಿಕ್ಷಣ, ಸಾಹಿತ್ಯ, ಕೈಗಾರಿಕೆಗಳ ಮೇಲೆ ಪ್ರಭಾವ ಬೀರಿತು. ಹಾಗೇ ಉಂಟಾದ ಪರಿಣಾಮಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳನ್ನುಂಟು ಮಾಡಿದವು. ಜೊತೆಗೆ 'ಇಂಗ್ಲೀಷಿನ ರೊಮ್ಯಾಂಟಿಕ್ ಸಾಹಿತ್ಯದ ಪ್ರಭಾವ' ಹೊಸಗನ್ನಡ ಸಾಹಿತ್ಯದ ಮೇಲೆ ಅನೇಕ ರೀತಿಗಳಲ್ಲಿ ಪ್ರಭಾವವನ್ನುಂಟುಮಾಡಿತು. ಇದರ ಜೊತೆಜೊತೆಗೆ ನಮ್ಮ ಬದುಕಿನ ಮೇಲೆ ರಾಷ್ಟ್ರೀಯ ಚಳುವಳಿ ತೀವ್ರವಾದ ಬದಲಾವಣೆಯನ್ನುಂಟು ಮಾಡಿತು. ಪಾಶ್ಚಾತ್ಯ ಸಂಪರ್ಕ ಸಾಮಾಜಿಕ ಚಿಂತನೆಗಳ ಪರಿಣಾಮದಿಂದ ಸಮಾಜದ ಮಧ್ಯಮವರ್ಗ ಬದಲಾಯಿತು. ಈ ವರ್ಗ ಹೊಸಶಿಕ್ಷಣದ ಕಾರಣಗಳಿಂದ ನಮ್ಮ ಅರ್ಥಪೂರ್ಣ ಹಳೆಯ ವಿಚಾರಗಳು ಉಳಿಸಿಕೊಳ್ಳುವುದರ ಜೊತೆಜೊತೆಗೆ ಚಿಕಿತ್ಸಕ ಮನೋಭಾವವನ್ನು ರೂಢಿಸಿಕೊಂಡಿತು. ಮುಖ್ಯವಾಗಿ ನಮ್ಮ ದೇಶೀ ಸಂಸ್ಕೃತಿ ಹಾಗೂ ವಿದೇಶಿ ಸಂಸ್ಕೃತಿ ಇವೆರಡರ ನಡುವಿನ ಆಯ್ಕೆಯಲ್ಲಿ ಘರ್ಷಣೆ ಹಾಗೂ ದ್ವಂದ್ವಗಳು ಕಾಣಿಸಿಕೊಂಡಿತು. ಈ ಯುಗದಲ್ಲಿ ಕಾಣಿಸಿಕೊಂಡ ಸಮಾಜಸುಧಾರಕರು, ಹಾಗೂ ಸಾಮಾಜಿಕ ಚಿಂತಕರು ಭಾರತೀಯ ಬದುಕಿನಲ್ಲಿ ಹೆಣ್ಣು ಹಾಗೂ ದಲಿತ ಇವರಿಬ್ಬರ ಸ್ಥಿತಿಗತಿಗಳನ್ನು ಸಹಾನುಭೂತಿಯಿಂದ ಗಮನಿಸುವ ಕಳಕಳಿ ತೋರಿದರು.

ಹೆಣ್ಣಿನ ಬಗ್ಗೆ ಕಳಕಳಿ ಹೊಂದಿದ ಪುರುಷರಾಗಲೀ ಅಥವಾ ತಮ್ಮ ಬಗೆಗೆ ತಾವೇ ಕಳಕಳಿ ಹೊಂದಿ ಮಹಿಳಾಪರ ಸಂವೇದನೆಗಳಿಂದಲೇ ಬರೆದ ಲೇಖಕಿಯರಾಗಲೀ ಭಾರತೀಯ ಸಂಸ್ಕೃತಿಯ ಚೌಕಟ್ಟಿನ ಒಳಗಡೆಯೇ ಅವಳ ಸ್ಥಿತಿಗತಿಗಳ ಬಗೆಗೆ ಚಿಂತಿಸಿದರು, ಚಿಂತಿಸಿ ತಮ್ಮ ಚಿಂತನೆಗಳಿಂದ ಹಲವು ವಿಚಾರಗಳಲ್ಲಿ ಬದಲಾವಣೆ ಹಾಗೂ ಬೆಳವಣಿಗೆಯನ್ನು ತಂದರು. ಅವರು ಮೊದಲು ತಮ್ಮ ಜೀವನದಲ್ಲಿ ಈ ರೀತಿಯ ಬದಲಾವಣೆಗಳನ್ನು ಅಳವಡಿಸಿಕೊಂಡು ಬರವಣಿಗೆಯಲ್ಲಿಯೂ ಇವೆಲ್ಲಾ ಅಂಶಗಳನ್ನುತಂದರು. ಅಷ್ಟೇ ಅಲ್ಲದೆ ಬೇರೆಯವರಿಗೂ ಇವರು ಮಾರ್ಗದರ್ಶಕರಾಗಿ ನಿಂತು ತಮ್ಮ ಮುಂದಿನವರೆಗೂ ಮಾರ್ಗದರ್ಶನವನ್ನು ನೀಡಿದರು. ಹೀಗೆ ಆದ ಬದಲಾವಣೆಗಳು ಹಲವು ಕಾಲಘಟ್ಟಗಳಲ್ಲಿ ಜರುಗಿರುವುದನ್ನು ಗಮನಿಸಬಹುದು.

ಮಹಿಳೆ ಮತ್ತು ಕಥೆಯ ಸಂಬಂಧ ಬರೀ ಈ ದಶಕದಲ್ಲ, ಭಾರತೀಯ ಪರಂಪರೆಯಲ್ಲಿ ಕಥೆಗೆ ದೈವೀ ನೆಲೆಯನ್ನು ಕಲ್ಪಿಸಲಾಗಿದೆ. ಕಥೆ ಹೇಳುವ ಕ್ರಿಯೆ ಮೊದಲು ಹುಟ್ಟಿದ್ದು ಮಹಿಳೆಯಿಂದಲೇ. ಕಥಾ ಪ್ರಕಾರವು ಇಂದು ೨೦ನೇ ಶತಮಾನದಲ್ಲಿ ಒಂದು ಗಂಭೀರ ಸಾಹಿತ್ಯ ಪ್ರಕಾರವೆಂದು ನೆಲೆಗೊಂಡಿದೆ. ಈ ಪರಂಪರೆಯ ನೆಲೆಗೆ ಲೇಖಕ-ಲೇಖಕಿಯರು ಇಬ್ಬರೂ ಕಾರಣರಾಗಿದ್ದಾರೆ. ಕಥೆ ಇಂದು ಸಾಮಾಜಿಕವಾಗಿ, ರಾಜಕೀಯವಾಗಿ ಹೆಚ್ಚು ವಿನ್ಯಾಸವನ್ನು ಪಡೆದಿವೆ. ಆರಂಭದಲ್ಲಿ ಇದು ಪೌರಾಣಿಕವಾದದ್ದು, ಧಾರ್ಮಿಕವಾದದ್ದೂ ಆಗಿತ್ತು. ಆದರೆ ಇಂದು ಹೊಸ ಹೊಸ ಸವಾಲುಗಳನ್ನು ಎದುರಿಸುತ್ತಿವೆ. ಹೊಸ ಸಾಧ್ಯತೆಗಳನ್ನು ಹುಡುಕುತ್ತಿವೆ. ಮಹಿಳೆಯರ ಕಥೆಗಳೂ ಕೂಡ ವೈಜ್ಞಾನಿಕ ತಿಳಿವು ಮತ್ತು ವೈಚಾರಿಕತೆಯ ಒಳನೋಟಗಳನ್ನು ಹೊಂದಿದ್ದು, ಸಣ್ಣ ಕಥೆಯ ಮಾಧ್ಯಮಕ್ಕೆ ಹೊಸ ಆಳವಿಸ್ತಾರಗಳನ್ನು ಒದಗಿಸುತ್ತಿವೆ. ಅವಳ ಬದುಕಿನ ಸಂಕೀರ್ಣತೆಯನ್ನು ಮೂರ್ತಗೊಳಿಸುವಲ್ಲಿ ಆಸಕ್ತಿ ತೋರಿಸಲಾಗಿದೆ. ಒಮ್ಮೆ ಹೆಣ್ಣಿನ ಆಳ-ಅಗಲಗಳನ್ನು ತಮ್ಮ ತಮ್ಮ ಕಥೆಗಳಲ್ಲಿ ಅರಿತುಕೊಳ್ಳಲು, ಅಭಿವ್ಯಕ್ತಗೊಳಿಸಲು ತೊಡಗಿದ್ದು ಮಹತ್ವದ ಬೆಳವಣಿಗೆ. ಪುರುಷರಂತೆ ಸ್ತ್ರೀಯರೂ ಸಹ ಕಥೆಯ ಕ್ಷೇತ್ರದಲ್ಲಿ ಪ್ರಯೋಗಶೀಲರಾಗಿರುವುದನ್ನು ನೋಡಬಹುದು.

೨೦ನೇ ಶತಮಾನದ ಆರಂಭದಿಂದ ಇಂದಿನವರೆಗೂ ಕಥೆ ಲೇಖಕಿಯರ ಪ್ರಿಯವಾದ ಅಭಿವ್ಯಕ್ತಿ ಪ್ರಕಾರವಾಗಿ ಬೆಳೆದುಬಂದಿದೆ. 'ಕಥನ ಕಲೆ' ಹೆಣ್ಣಿನ ಜನ್ಮ ಜಾತ ಗುಣ ಎಂದು ಹೇಳ ಬಹುದಷ್ಟು ಅದು ಆಕೆಗೆ ಕರಗತ. ಹಾಗೆ ನೋಡಿದರೆ ಕಥೆ ಬರೆದವರು ಮಾತ್ರವಲ್ಲ ಕಥೆ ಬರೆಯದವರೂ ಕತೆಗಾರ್ತಿಯರೆ. ಇದಕ್ಕೆ ನಿದರ್ಶನವಾಗಿ ಜನಪದ ಕಥೆಗಳನ್ನು ಹೇಳುವುದರಲ್ಲಿ ಸ್ತ್ರೀಯರೇ ಸಿದ್ಧಹಸ್ತರು ಎಂಬುದನ್ನು ಗಮನಿಸಬಹುದು. ಅಷ್ಟೇ ಅಲ್ಲದೆ ಹೆಂಗಸರೇ ಕಥೆಯ ವಸ್ತುವಾಗುವುದು ಕೂಡ ಕುತೂಹಲಕರ ವಿಷಯ. ಪ್ರತಿಯೊಬ್ಬ ಹೆಣ್ಣಿನ ಬದುಕು ಒಂದು ಬರೆದಿಡುವ ಕತೆಯಾಗಿರುತ್ತದೆ. 'ಬದುಕು ಒಂದು ಕತೆ ಯಾವಾಗ ಆಗುತ್ತದೆ ಎಂದರೆ ಅದರಲ್ಲಿ ಅನೇಕ ಅನಿರೀಕ್ಷಿತ ತಿರುವುಗಳು ಇದ್ದಾಗ'.[೧] ಹೆಣ್ಣಿನ ಬದುಕಿನ ಪ್ರತಿಯೊಂದು ಹಂತವೂ ಇಂತಹ

---

೧. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ. ಪುಟ-೫೭

ತಿರುವುಗಳನ್ನು ಪಡೆಯುತ್ತಿರುತ್ತವೆ. ಅವಳು ಮೌನಕ್ಕೆ ಕಾಲಿರಿಸಿರುವುದರೊಂದಿಗೆ ಇದು ಆರಂಭ. ಈ ರೀತಿಯಾಗಿ ಹಾಗೂ ಈ ನಿಲುವಿನಲ್ಲಿ ಕಥೆಯನ್ನು ಬರೆಯಲು ಪ್ರಾರಂಭಿಸಿದ ಹಲವು ಲೇಖಕಿಯರನ್ನು ಕಾಣಬಹುದು. ಅವರು ತಮ್ಮ ಕಥೆಗಳಲ್ಲಿ ತಮ್ಮ ಹಾಗೂ ಸುತ್ತಮುತ್ತಲಿನ ಅನುಭವಗಳನ್ನು ಚಿತ್ರಿಸಿದ್ದಾರೆ.

ಕನ್ನಡ ಸಾಹಿತ್ಯದ ಬೆಳವಣಿಗೆಯ ಸಂದರ್ಭದಲ್ಲಿ ನವೋದಯ ಸಂದರ್ಭ ಮಹಿಳೆಯರ ಬರವಣಿಗೆಗೆ ಒಂದು ವಿಶಿಷ್ಟವಾದ ಸಂದರ್ಭವಾಗಿದೆ. ಹೆಣ್ಣು ತನ್ನ ಮನೆ-ಕುಟುಂಬ-ಮಕ್ಕಳು ಹೀಗೆ ಈ ವಾತಾವರಣದಲ್ಲಿ ಬೆಚ್ಚಗಿದ್ದ ಸಂದರ್ಭದಲ್ಲಿ ನವೋದಯದ ತಾತ್ವಿಕ ನಂಬಿಕೆ, ಮನೋಭಾವ, ಆಲೋಚನೆಗಳು ಸ್ವಲ್ಪ ಮಟ್ಟಿಗಾದರೂ ಮನೆಯಿಂದ ಹೊರಬರುವ ಅವಕಾಶ ಕಲ್ಪಿಸಿಕೊಟ್ಟಿತು. ಇಲ್ಲಿ ಈ ಪ್ರಯತ್ನಕ್ಕೆ ಅವಳೇ ವಿಶೇಷವಾಗಿ ಪ್ರಯತ್ನಿಸದಿದ್ದರೂ ಅದು ನವೋದಯದ, ಉದಾರವಾದದ ಫಲವಾಯಿತು. ಈ ಕಾಲದ ಹೊಸ ಎಚ್ಚರದ ಸ್ತ್ರೀಯರು ತಮ್ಮ ಸಮಸ್ಯೆಗಳನ್ನು ತಾವೇ ವಿವರಿಸಿಕೊಳ್ಳಲು ಪ್ರಯತ್ನಿಸಿದ್ದನ್ನು ತಿರುಮಲಾಂಬ, ಕಲ್ಯಾಣಮ್ಮ, ಕೊಡಗಿನ ಗೌರಮ್ಮರಂತಹ ಮಹಿಳೆಯರ ಮೂಲಕ ಗಮನಿಸಬಹುದು. ಈ ಮಹಿಳೆಯರು ತಮ್ಮ ವೈಯಕ್ತಿಕ ಬದುಕಿನಲ್ಲಿ ನೊಂದವರಾಗಿದ್ದರು. ತಮ್ಮ ಚಿಂತನೆಗಳನ್ನು ಸಾಮಾಜಿಕ ನೆಲೆಯಲ್ಲಿ ಹಂಚಿಕೊಳ್ಳಲು ಇವರು ಬರವಣಿಗೆಯನ್ನು ಮಾಧ್ಯಮವಾಗಿಸಿಕೊಂಡರು. ಸ್ತ್ರೀಪರ ಕಾಳಜಿಗಳನ್ನು ಕೇಂದ್ರವಾಗಿರಿಸಿಕೊಂಡ ಪತ್ರಿಕೆಗಳನ್ನು ನಡೆಸಿದರು. ಸೃಜನಶೀಲ ನೆಲೆಯಲ್ಲಿ ಕಥೆ , ಕಾದಂಬರಿಗಳನ್ನು ರಚಿಸಿದರು.

ಈ ಕಾಲದ ಹೊಸ ಎಚ್ಚರದ ಮಹಿಳೆಯರು ಪತ್ರಿಕೆಗಳ ಮುಖಾಂತರವಾಗಲೀ, ಸೃಜನ ಶೀಲ ಸಾಹಿತ್ಯದ ಪ್ರಕಾರಗಳಾದ ಕತೆ, ಕಾದಂಬರಿಗಳ ಮುಖಾಂತರ ಸತತವಾಗಿ ತಮ್ಮ ನಿಲುವುಗಳನ್ನು ನಿಖರವಾಗಿ ದಾಖಲಿಸಿದ್ದುದು ಮಹತ್ವದ ಪ್ರಯತ್ನಗಳೇ. ಒಟ್ಟಿನಲ್ಲಿ ಸಮಕಾಲೀನ ಮಹಿಳಾ ಸಾಹಿತ್ಯವು ಈ ಹಿಂದಿನದಕ್ಕಿಂತ ಗಮನಾರ್ಹವಾಗಿದೆ. ಮಹಿಳೆಗೆ ಸಾಂಪ್ರದಾಯಿಕ, ಸಾಮಾಜಿಕ ಕಾರಣಗಳಿಂದ ಸಹಜವಾಗಿಯೇ ಅನೇಕ ಪರಿಮಿತಿಗಳಿವೆ. ಇದನ್ನು ಗಮನದಲ್ಲಿಟ್ಟುಕೊಂಡು 'ವಿಮರ್ಶಕರು ಮಹಿಳಾ ಸಾಹಿತ್ಯಕ್ಕೆ ರಿಯಾಯಿತಿ ಕೊಡಬೇಕು' ಎಂಬಂತಹ ಧ್ವನಿಯು ಹಿಂದಿನ ಲೇಖಕಿಯರಲ್ಲಿತ್ತು. ಇಂದಿನ

ಲೇಖಕಿಯರು 'ಮಹಿಳಾ ಸಾಹಿತ್ಯಕುರಿತಂತೆ ಪುರುಷ ವಿಮರ್ಶಕರ ದೃಷ್ಟಿಕೋನ ಬದಲಾಗಬೇಕಾಗಿದೆ' ಎಂದು ಒತ್ತಾಯಿಸುತ್ತಿರುವುದನ್ನು ಕಾಣಬಹುದು.

ನವೋದಯ ಸಾಹಿತ್ಯದ ಸಂದರ್ಭದಲ್ಲಿ ತಿರುಮಲಾಂಬರವರಿಂದ ಗುರುತಿಸುವಿಕೆ ಪ್ರಾರಂಭವಾಗಿ ಹಲವು ಲೇಖಕಿಯರ ಕೈಯಲ್ಲಿ ಕಥಾಸಾಹಿತ್ಯ ಪಳಗುತ್ತಾ ಬೆಳೆದಿರುವುದನ್ನು ನೋಡಬಹುದು. ಇದೇ ಸಂದರ್ಭದಲ್ಲಿ ಕಲ್ಯಾಣಮ್ಮ, ಕೊಡಗಿನ ಗೌರಮ್ಮ ರವರನ್ನು ಕಾಣಬಹುದು. ಇವರು ಹೆಣ್ಣಿನ ಸಮಸ್ಯೆಗಳನ್ನೇ ಮುಖ್ಯವಾಗಿಟ್ಟುಕೊಂಡು ಕತೆಗಳ ರಚನೆ ಮಾಡಿದರು. ಇವರು ಸ್ತ್ರೀ ಸುಧಾರಣೆಯ ಕಡೆಗೆ ಕಣ್ಣಿರಿಸಿಕೊಂಡರು. ಅದು ನಮ್ಮ ಸಂಸ್ಕೃತಿಯ ಸಾಂಪ್ರದಾಯಿಕ ನಂಬಿಕೆಗಳಿಗೆ, ಭಾವನೆಗಳಿಗೆ ಪೆಟ್ಟುಕೊಟ್ಟಂತಹ ಸುಧಾರಣೆಯ ನೆಲೆಗಳಾಗಿದ್ದವು. ಸ್ತ್ರೀಯರಿಗೆ ಶಿಕ್ಷಣ ಅಗತ್ಯವೆಂದುಕೊಂಡರೂ ನಮ್ಮ ಸಾಂಪ್ರದಾಯಿಕ ಹಿಂದೂ ಸಾಹಿತ್ಯದ ಕಲ್ಪನೆಗೆ ಪೂರಕವಾಗಬೇಕೇ ವಿನಃ ಅದು ವಿರೋಧದ ಸ್ವರೂಪ ತಡೆಯಬಾರದೆಂಬ ಉದ್ದೇಶ ವ್ಯಕ್ತಪಡಿಸಿದರು. ಹೆಣ್ಣಿನ ಬಾಲ್ಯವಿವಾಹ, ಬಾಲವೈಧವ್ಯ, ಕೇಶಮುಂಡನೆಗಳಿಗೆ ವಿರೋಧ ತೋರಿದರಾದರೂ ಮರುಮದುವೆ ಅವಳ ಈ ಸಮಸ್ಯೆಯ ಪರಿಹಾರಗಳಲ್ಲೊಂದು ಎಂದಿಗೂ ಭಾವಿಸಲೇ ಇಲ್ಲ.

ನವೋದಯ ಸಾಹಿತ್ಯಕ್ಕೆ ಪ್ರತಿಯಾಗಿ ಎದ್ದ ಪ್ರಗತಿಶೀಲ ಅಲೆ ಕನ್ನಡ ಸಾಹಿತ್ಯದ ಚಿಂತನಕ್ರಮದಲ್ಲಿ ಸಾಕಷ್ಟು ಬದಲಾವಣೆಯನ್ನು ಕಂಡಿತು. ಇದು ಕೂಡ ಅಂದಿನ ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ಉಂಟಾದ ಬದಲಾವಣೆಗಳ ಪ್ರತಿಕ್ರಿಯೆಯಾಯಿತು. ಸ್ವಾತಂತ್ರ್ಯಪೂರ್ವದ ಕನಸಗಳು ಭಗ್ನಗೊಂಡ ವೈರಾಗ್ಯ ಈ ಸಾಹಿತ್ಯಸೃಷ್ಟಿಯ ಹಿನ್ನೆಲೆಯಲ್ಲಿದ್ದೇ ಇದೆ. ಈ ಕಾರಣದಿಂದಲೂ ಈ ಸಾಹಿತ್ಯ ತನ್ನ ಮಡಿಲಿನಲ್ಲಿ ಉರಿಯುವ, ಸಿಡಿಯುವ ಪ್ರವೃತ್ತಿಗಳನ್ನು ಕಟ್ಟಿಕೊಂಡೇ ಹುಟ್ಟಿತು. ಅದಕ್ಕೆ ಕಾರಣರಾದವರ ವಿರುದ್ಧ ಹೋರಾಡಲು ಟೊಂಕ ಕಟ್ಟಿ ಸಿದ್ಧವಾಗಿ ನಿಂತಿತು. ಹೆಚ್.ವಿ. ಸಾವಿತ್ರಮ್ಮ, ಎಂ.ಕೆ. ಇಂದಿರಾ, ತ್ರಿವೇಣಿ, ಡಾ. ಅನುಪಮಾ ನಿರಂಜನ, ಸರಸ್ವತೀ ಬಾಯಿ ರಾಜವಾಡೆ, ಸುಶೀಲ ಕೊಪ್ಪದ ಮುಂತಾದ ಲೇಖಕಿಯರು ಮೌಲ್ಯಾಧಾರಿತ ಕುಟುಂಬ ವ್ಯವಸ್ಥೆಯ ಅಸಮತೋಲನಗಳನ್ನು ಪರಿಶೀಲಿಸುವ ಕೆಲಸ ಮಾಡುತ್ತಾರೆ. ಇವರ ಕಥಾಜಗತ್ತಿನೊಳಗೆ ಕುಟುಂಬವೇ

ಪ್ರಧಾನಕ್ಷೇತ್ರ. ಇಲ್ಲಿ ಹೆಣ್ಣು ಎದುರಿಸುವ ವರದಕ್ಷಿಣೆಯ ಸಮಸ್ಯೆ, ಗಂಡಿನದಬ್ಬಾಳಿಕೆ, ಶೋಷಣೆಗೆ ಈಡಾದ ಅವಳ ಸಂಕಟ, ಅಸಹಾಯಕತೆಗಳು ಇವಕ್ಕೆಲ್ಲ ಪೂರಕವನ್ನು ಒದಗಿಸುವ ವಾತಾವರಣವನ್ನು ಚಿತ್ರಿಸಿದ್ದಾರೆ.

ಇದೇ ಕಾಲದಲ್ಲಿ ಬರೆದ ಲೇಖಕಿಯರು ಸಾಮಾಜಿಕ ನೆಲೆಯಿಂದ ತಮ್ಮ ವಸ್ತು ಕ್ಷೇತ್ರವನ್ನು ಕೌಟಂಬಿಕ ವಲಯಕ್ಕೆ ಸ್ಥಳಾಂತರಗೊಳಿಸಿದ್ದು ಕುತೂಹಲಕಾರಿಯಾದದ್ದು. ನಂತರ ನವ್ಯದ ಸಂದರ್ಭದಲ್ಲಿ ತುಂಬಾ ಪರಿಣಾಮಕಾರಿಯಾಗಿ ಹಾಗೂ ಪ್ರಭಾವ ಕಾರಿಯಾಗಿ ಕಥೆಗಳನ್ನು ರಚಿಸಿದವರಲ್ಲಿ ಪ್ರಮುಖವಾಗಿ ವೀಣಾಶಾಂತೇಶ್ವರವರು ಒಬ್ಬರು. ಇವರನಂತರ ರಾಜ್ಯಲಕ್ಷ್ಮಿ ಎನ್.ರಾವ್‌ರವರು ಇವರ ಕಥೆಗಳ ವಸ್ತುವು ಗಂಡು-ಹೆಣ್ಣುಗಳ ಸಂಬಂಧವನ್ನೇ ಕುರಿತದ್ದು. ಇದನ್ನು ಅದರ ಎಲ್ಲಾ ಸಂಕೀರ್ಣತೆಗಳೊಂದಿಗೆ ಗ್ರಹಿಸುವ ಅವರಲ್ಲಿ ವೀಣಾರವರಿಗಿಂತ ಹೆಚ್ಚಿನ ಸೂಕ್ಷ್ಮತೆ ಹಾಗೂ ಸಂವೇದನಾಶೀಲತೆಗಳು ಕಂಡುಬರುತ್ತದೆ. ಗಂಡುಹೆಣ್ಣಿನ ಸಂಬಂಧವಾಗಲೀ ಬದುಕಿನ ಇತರ ಸಂಬಂಧವಾಗಲೀ ಘಟನೆಗಳನ್ನಾಗಲೀ ವ್ಯಕ್ತಿಕೇಂದ್ರಿತ ನೆಲೆಯಿಂದ ನೋಡುವ ಧಾಟಿಯಲ್ಲಿ ಬರೆದ ಇನ್ನೊಬ್ಬ ಮಹತ್ವದ ಲೇಖಕಿ ಕಮಲಾಹೆಮ್ಮಿಗೆ. ಕಥನ ಸಾಹಿತ್ಯದಲ್ಲಿ ತೀವ್ರವಾಗಿ ತೊಡಗಿಸಿಕೊಂಡಿರುವ ವೈದೇಹಿಯವರು ಅಪಾರವೈವಿಧ್ಯತೆ ಸಾಧಿಸುವ ಮೂಲಕ ಲೇಖಕಿಯೊಬ್ಬಳು ಏರಬಹುದಾದ ಎತ್ತರಕ್ಕೆ ಸಾಕ್ಷಿಯಾಗಿದ್ದಾಳೆ. ಗ್ರಾಮೀಣ ಬದುಕು, ಕೌಟುಂಬಿಕ ಜೀವನ, ಹೆಣ್ಣುಗಂಡುಗಳ ಸಂಬಂಧದ ತಾಕಲಾಟಗಳು, ಆಧುನಿಕ ಬದುಕು ತಂದೊಡ್ಡುವ ಸ್ಥಿತ್ಯಂತರಗಳು ಹೀಗೆ ಹಲವು ವಿಷಯಗಳನ್ನು ತಮ್ಮ ಕಥೆಗಳಿಗೆ ವಸ್ತುಗಳನ್ನಾಗಿಟ್ಟುಕೊಂಡು ರಚಿಸಿರುವುದನ್ನು ನೋಡಬಹುದು.

'ಮಹಿಳಾ ಸಾಹಿತ್ಯಕ್ಕೆ ನಿಜವಾಗಿಯೂ ಒಂದು ಹೊಸ ತಿರುವು ಬಂದದ್ದು ಈಕಾಲದಲ್ಲಿ ಉಗಮಿಸಿದ ಹೊಸ ಲೇಖಕಿಯರಿಂದಲೇ'.[೨] ಇಂದು ಬರೆಯುತ್ತಿರುವ ಹೆಚ್ಚಿನಲೇಖಕಿಯರು ಹೆಣ್ಣಿನ ಸಮಸ್ಯೆಗಳ ಬಗ್ಗೆ ಸ್ಪಷ್ಟ ಅರಿವು ಹೊಂದಿರುವಂತಾಗಿದೆ. ಕತೆ ಹೇಳುವ ತುಡಿತಕ್ಕಿಂತ ಅದರ ಮೂಲಕ ಪ್ರತಿಪಾದಿಸಬೇಕೆಂದಿರುವ ಧೋರಣೆಯೇ ಮುಖ್ಯ. ಶೋಷಣೆಯ ಮೂಲವನ್ನು ಅರಿಯುವ ಪ್ರಯತ್ನ ಇವರ ಬರವಣಿಗೆಯಲ್ಲಿದೆ. ಹಿಂದಿನ

---

೨. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪುಟ-೩೪೪.

ಲೇಖಕಿಯರು ಪ್ರತಿಯೊಂದು ಸಮಸ್ಯೆಗೂ ಸುಲಭ ಪರಿಹಾರಗಳನ್ನು ಸೂಚಿಸುವ ತಪ್ಪನ್ನು ಮಾಡುವುದಿಲ್ಲ. ಅಂದರೆ ಹಿಂದಿನದವರಲ್ಲಿದ್ದ ರಮ್ಯ ಮನೋಭಾವದಿಂದ ಇವರು ದೂರವಾಗಿದ್ದಾರೆ. ಸಾಹಿತ್ಯದ ವಸ್ತು ಹಾಗೂ ಅಭಿವ್ಯಕ್ತಿ ಎರಡರ ಬಗ್ಗೆಯೂ ಗಂಭೀರ ದೃಷ್ಟಿಕೋನ ಇರುವುದನ್ನು ಇಲ್ಲಿ ಕಾಣಬಹುದು. ಕಥೆಗೆ ತೊಡಗುವ ಇಂದಿನವರ ಎಚ್ಚರ, ಕಾಳಜಿ ಮತ್ತು ಬರವಣಿಗೆಯ ಸ್ವರೂಪ ಕುರಿತಾದ ಚಿಂತನೆ ಎಂಬುದನ್ನು **ನೇಮಿಚಂದ್ರರವರ** ಈಮಾತುಗಳು ಸ್ಪಷ್ಟಪಡಿಸುತ್ತವೆ. ''ಹೆಣ್ತನಕ್ಕೆ ಅಂಟಿಸಿದ ಆತಂಕಗಳು ಬಹುಶಃ ನಮ್ಮ ಲೇಖಕಿಯರನ್ನು ಕಾಡಿಸಿರಲಿಕ್ಕಿಲ್ಲ. ಇದೇ ಕಾರಣಕ್ಕಿರಬೇಕು ನಾವು ಸ್ತ್ರೀಯರು ನಮ್ಮ ಅನುಭವಗಳನ್ನು ತೆರೆದುಕೊಂಡದ್ದು ತೀರಾ ಕಡಿಮೆ. ಆಳಕ್ಕಿಳಿದು ನಮ್ಮ ನಿಜವಾದ ಅನಿಸಿಕೆಗಳನ್ನು ಮುಟ್ಟಲು ಬೆಚ್ಚಿದ್ದೇವೆ. ಸೀತೆ, ಸಾವಿತ್ರಿಯರ ನಾಡಿನಲ್ಲಿ ನಮಗೆ ಹೀಗೆನಿಸುವುದಿಲ್ಲ ಎಂಬ ಭಯಕ್ಕೆ ಬಹುಶಃ ಸೀತೆ ಸಾವಿತ್ರಿಯರಿಗೂ ಹೀಗನಿಸಿರಬಾರದೇಕೆ ಎಂದು ಪ್ರಶ್ನಿಸಿದ್ದು ಹೆಚ್.ವಿ. ಸಾವಿತ್ರಮ್ಮರವರಂತಹ ಅಲ್ಲೊಬ್ಬ ಇಲ್ಲೊಬ್ಬ ಲೇಖಕಿಯರು ಮಾತ್ರ. ನಮ್ಮ ಅನುಭವಗಳನ್ನು ಮುಟ್ಟಿದಾಗಲೂ ಮೆಟ್ಟಿ ಬಿಟ್ಟಿದ್ದೇವೆ. ತೆರೆದಿಡಲು ಹಿಂಜರಿದಿದ್ದೇವೆ. ಯಾರಾದರೂ ಇದು ನಿಮ್ಮದೇ ಅನುಭವವಾ ಎಂದು ಕೇಳಿಬಿಟ್ಟರೆ ಎಂಬ ಭಯ ಇಂತಹ ಸಂಕೋಚ ಮುಜುಗರಗಳಲ್ಲಿ ಸರ್ವಕಾಲಕ್ಕೂ ಹೇಳಿಕೊಂಡು ಬಂದಿದ್ದನ್ನೇ ಅನಿಸದಿದ್ದರೂ ಅನಿಸಬೇಕೆಂದುದನ್ನೇ, ಜನ ನಿರೀಕ್ಷಿಸಿದ್ದನ್ನೇ, ಸಮಾಜ ಅಂಗೀಕರಿಸಿದ್ದನ್ನೇ ಹೇಳುತ್ತಾ ಬಂದೆವು. ನಾವು ಗಂಡುಮೌಲ್ಯಗಳಿಗೆ ಗಂಡು ಮಾದರಿಗಳಿಗೆ, ಗಂಡು ನಿರೀಕ್ಷೆಗಳಿಗೆ ತಕ್ಕಂತೆ ಬರೆದೆವು. ಹೆಣ್ಣಾಗಿ ಬರೆದದ್ದು ಗಟ್ಟಿನಿಂತ ಕೆಲವು ಲೇಖಕಿಯರು ಮಾತ್ರ.''[೩]

ಹಾಗೆಯೇ ವೀಣಾಶಾಂತೇಶ್ವರವರು ಹೇಳುವ ಈ ಮಾತುಗಳಲ್ಲಿಯೂ ನಮ್ಮ ಸಾಹಿತ್ಯ ಹೇಗಿರಬೇಕಾಗಿದೆ ಎಂಬುದರ ಪರೋಕ್ಷ ಧ್ವನಿ ಹೊಮ್ಮಿದೆ. ''ಕನ್ನಡ ಮಹಿಳಾ ಸಾಹಿತ್ಯದಲ್ಲಿ ಪರಂಪರೆಯಿಂದ ಮಹಿಳೆಯರು ಅನುಭವಿಸಿದ ದೌರ್ಜನ್ಯ, ಅವಹೇಳನ, ಶೋಷಣೆ ಇತ್ಯಾದಿಗಳ ಬಗ್ಗೆ ನಿಜವಾದ ಕಾಳಜಿ ವ್ಯಕ್ತಪಡಿಸುವಂತಹ ಕೃತಿಗಳು ತೀರಾ ಕಡಿಮೆ, ನಮ್ಮ ಬಹಳಷ್ಟು ಲೇಖಕಿಯರು ಪರಂಪರಾ ಪ್ರಿಯರು, ಪರಂಪರಾಗತ

---

೩ ಲೇಖಾ-ಲೋಕ, ೧೯೯೮.

ಮೌಲ್ಯಗಳನ್ನು ವೈಭವೀಕರಿಸುವಂತಹ ಕೃತಿಗಳನ್ನೇ ಅವರು ತೀರಾ ಇತ್ತೀಚಿನವರೆಗೂ ರಚಿಸಿದಾದರೂ ಪರಂಪರೆಯಲ್ಲಿ ಹುದುಗಿದ ಮೌಲ್ಯ , ಅಂಧನಿಷ್ಠ ಪುರುಷನ ಪ್ರಾಬಲ್ಯವನ್ನು ಪ್ರಾಮಾಣಿಕವಾಗಿ ವಿರೋಧಿಸುವ ಪ್ರಯತ್ನವನ್ನು ಮರಾಠೀ ಸಾಹಿತ್ಯದಲ್ಲಿ ಕಾಣುವ ಹಾಗೆ ಕನ್ನಡ ಮಹಿಳಾ ಸಾಹಿತ್ಯದಲ್ಲಿ ಕಾಣುವುದಿಲ್ಲ.''[೪]

೭೦ ದಶಕದಲ್ಲಿ ನಡೆದ ಜನಪರ ಹೋರಾಟಗಳು ದೇಶದ ರಾಜಕೀಯ , ಸಾಮಾಜಿಕ ಬದುಕಿನಲ್ಲಿ ಮಾತ್ರವಲ್ಲದೆ ಸಾಹಿತ್ಯಕ್ಷೇತ್ರದಲ್ಲಿಯೂ ಮಹತ್ತರ ಬದಲಾವಣೆಯನ್ನು ಉಂಟುಮಾಡಿದ ಪರಿಣಾಮವಾಗಿ ದಲಿತ ಬಂಡಾಯ ಸಾಹಿತ್ಯದ ಪರಂಪರೆ ಆರಂಭವಾಯಿತು. ಶೋಷಿತ ವರ್ಗ, ಕೆಳಜಾತಿಯ ವರ್ಗದ ಬದುಕು ಬವಣೆಗಳನ್ನು ಚಿತ್ರಿಸುತ್ತಲೇ ಅವರ ಸ್ಥಿತಿಯಲ್ಲಿ ಬದಲಾವಣೆ ಉಂಟುಮಾಡಬೇಕೆಂಬ ಆಶಯವನ್ನು ಈ ಸಾಹಿತ್ಯ ಪ್ರತಿಪಾದಿಸಿತು. ಈ ಅರಿವಿನಿಂದ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ ಬಹುತೇಕ ಲೇಖಕಿಯರ ಮೇಲೆ ಆಯಾ ಜಾತಿವರ್ಗಗಳ ಪ್ರಭಾವ ಆಗದೆ ಇರಲಿಲ್ಲ. ೭೫ರವರೆಗಿನ ಸಾಹಿತ್ಯದ ಸಂದರ್ಭದಲ್ಲಿ ಬೆರಳೆಣಿಕೆಯಷ್ಟು ಲೇಖಕಿಯರನ್ನು ಬಿಟ್ಟರೆ ಉಳಿದವರೆಲ್ಲರೂ ಮೇಲುಜಾತಿಗೆ ಸೇರಿದವರು. ಮಧ್ಯಮವರ್ಗದ ಹಿನ್ನೆಲೆಯುಳ್ಳವರು. ಆದರೆ ಈಗ ಸಮಾಜದ ಕೆಳಜಾತಿ, ಕೆಳವರ್ಗದಿಂದಲೇ ರೂಪಗೊಂಡ ಲೇಖಕಿಯರು ತಮ್ಮ ಹಾಗೂ ತಮ್ಮವರ ಬದುಕಿಗೆ ಧ್ವನಿಯಾಗಿದ್ದು ಒಂದು ಮಹತ್ವದ ಬೆಳವಣಿಗೆ. ಇವರ ಬರವಣಿಗೆಯಿಂದಾಗಿ ವಿಭಿನ್ನ ಲೋಕದ ಮಹಿಳಾ ಸಂಸ್ಕೃತಿಗಳು ಕೂಡಿಕೊಂಡು ಲೇಖಕಿಯರ ಸಾಹಿತ್ಯಕ್ಕೆ ಹೊಸ ಆಯಾಮ ಬಂದಂತಾಯಿತು. ಈ ಗುಂಪಿನಲ್ಲಿ ಪ್ರಧಾನವಾಗಿ ಕೇಳಿಬರುವ ಹೆಸರುಗಳೆಂದರೆ ಗೀತಾನಾಗಭೂಷಣ, ಲಲಿತಾನಾಯಕ್, ಕಮಲಾಹಂಪನಾ, ಸರಸ್ವತಿ ಗೌಡ, ಶೈಲಜ ಉಡಜಣ, ಎಂ.ಎಸ್. ವೇದಾ ಮುಂತಾದವರು . ಇಲ್ಲಿ ಹೆಚ್ಚಿನವರಿಗೆ ಸ್ತ್ರೀಯ ಸಾಮಾಜಿಕತೆಯೇ ಮುಖ್ಯವಾಗಿ ವಸ್ತುವಾಗಿದೆ. ಅಂದರೆ ಲಲಿತಾನಾಯಕ್, ಗೀತಾನಾಗಭೂಷಣ, ಕೆಳವರ್ಗ ಅಥವಾ ಕೆಳಜಾತಿಗಳಿಂದ ಬಂದ ಹೆಣ್ಣುಮಕ್ಕಳಾಗಿದ್ದರೂ ವೈಯಕ್ತಿಕ ನೆಲೆಯಲ್ಲಿ ತಾವು ಅನುಭವಿಸಿದ ಅಪಮಾನ ಇಕ್ಕಟ್ಟುಗಳ ಚಿತ್ರಣದಲ್ಲಿ ಗೀತಾನಾಗಭೂಷಣರವರ ಆತ್ಮಕತೆಯಲ್ಲಿ ಮಾತ್ರ

---

೪. ಕನ್ನಡ ಸಾಹಿತ್ಯ ಸಂದರ್ಭ

ತಾವು ಅನುಭವಿಸಿದಂತಹ ಅವಮಾನಗಳ ಕೆಲವು ಘಟನೆಗಳನ್ನು ನಿರೂಪಿಸಿದ್ದಾರೆ. ಆದರೆ ಇದೇ ಪರಂಪರೆಯ ಪುರುಷ ಲೇಖಕರು ವೈಯಕ್ತಿಕ ನೆಲೆಯಲ್ಲಿ ತಾವುಅನುಭವಿಸಿದ್ದನ್ನು ಬರಹಗಳ ಮೂಲಕ ನೀಡಿದ್ದಾರೆ. ಈ ದೃಷ್ಟಿಯಿಂದ ಇಂತಹ ಮಹಿಳೆಯ ಅನುಭವ ಲೋಕಗಳು ಇನ್ನೂ ಅನಾವರಣಗೊಳ್ಳಬೇಕಾಗಿದೆ ಎಂದು ಅನ್ನಿಸುತ್ತದೆ. ಅಥವಾ ಮಹಿಳೆಯರ ಬದುಕು ಮನೆಯ ಆವರಣಕ್ಕಷ್ಟೇ ಸೀಮಿತವಾಗಿರುವುದರಿಂದ ಪುರುಷನಿಗೆ ಎದುರಾಗುವಷ್ಟು ಈ ರೀತಿಯ ಬಿಕ್ಕಟ್ಟುಗಳು ಸ್ತ್ರೀಯರಿಗೆ ಎದುರಾಗುವುದಿಲ್ಲ ಎಂದು ಊಹಿಸಲೂ ಸಾಧ್ಯವಿದೆ.

ದಲಿತರ ಬದುಕನ್ನು ಚಿತ್ರಿಸುವ ಬಹುತೇಕ ಲೇಖಕ -ಲೇಖಕಿಯರಲ್ಲಿ ಅವರ ಬದುಕಿನ ಶೋಷಣೆಯ ಅಂಶವನ್ನು ಮಾತ್ರವೇ ಪ್ರತ್ಯೇಕಿಸಿ ಅದಕ್ಕೆ ಕಾರಣವಾದ ವ್ಯವಸ್ಥೆಯ ಮೇಲೆ ಆಕ್ರೋಶವನ್ನುಸೂಚಿಸುವ ಧ್ವನಿಯಲ್ಲಿ ಇಲ್ಲವೇ ಇಂತಹ ಬದುಕನ್ನು ಕುರಿತು ಅನುಕಂಪೆಯ ದಾಟಿಯಲ್ಲಿ ಬರೆಯುವಂತದ್ದು ಸಾಮಾನ್ಯವಾಗಿ ಕಂಡುಬರುತ್ತದೆ. ಆದರೆ ದಲಿತರಲ್ಲಿಯೂ ಸಹ ಎಲ್ಲಾ ಮನುಷ್ಯರಲ್ಲಿ ಇರುವಂತೆ ಸ್ವಾರ್ಥ, ದ್ವೇಷ, ಸಣ್ಣತನ, ಅಜ್ಞಾನ, ಹಾಸ್ಯ, ಶೃಂಗಾರ, ಸಂಭ್ರಮ, ಸಡಗರ ಎಲ್ಲವೂ ಇದೆ ಎಂಬುದನ್ನುಮರೆಯದೆ ಇವೆಲ್ಲವನ್ನು ಒಳಗೊಂಡ ಅವರ ಬದುಕನ್ನು ಚಿತ್ರಿಸುತ್ತಲೇ ಇಡೀ ಜನಾಂಗದ ಅನಕ್ಷರತೆ, ಅಜ್ಞಾನ, ಮುಗ್ಧತೆ, ಅಸಹಾಯಕತೆಯನ್ನುಮೇಲುಜಾತಿ ಮತ್ತು ಮೇಲ್ವರ್ಗದವರು ಹೇಗೆ ಶೋಷಿಸುತ್ತಾರೆ ಎಂಬುದನ್ನು ಕಥೆಯ ಮೂಲಕ ಧ್ವನಿಸುವ ಸಾಮರ್ಥ್ಯ ದೇವನೂರು ಮತ್ತು ಮಹಮ್ಮದ್‌ಕುಂಞ ಮೊದಲಾದವರ ಕತೆಗಳಲ್ಲಿ ಕಾಣಬಹುದು.

ಬಂಡಾಯ ಸಾಹಿತ್ಯಕ್ಕೆ ಒಂದು ಹೊಸ ಅರ್ಥವನ್ನು ಕೊಟ್ಟವರು ಮುಸ್ಲಿಂ ಲೇಖಕಿಯರು. ಮುಸ್ಲಿಂಲೇಖಕಿಯರು ಬರೆಯತೊಡಗಿದ್ದು ಮಹಿಳಾಸಾಹಿತ್ಯಕ್ಕೆ ಮಾತ್ರವಲ್ಲದೇ ಕಥಾಸಾಹಿತ್ಯಕ್ಕೂ ಒಂದು ವಿಶಿಷ್ಟ ಕೊಡುಗೆ. ಒಂದರ್ಥದಲ್ಲಿ ಬಂಡಾಯ ಸಾಹಿತ್ಯವೆಂದರೆ ಮುಸ್ಲಿಂ ಮಹಿಳಾ ಸಾಹಿತ್ಯವೆಂದು ಹೇಳಬುಹದು. ಏಕೆಂದರೆ ಇತರೆ ಬಂಡಾಯ ಸಾಹಿತ್ಯಗಳಲ್ಲಿ ಬಂಡಾಯ ಇರುವುದು ಬರವಣಿಗೆಯಲ್ಲಿ ಮಾತ್ರ. ಇಲ್ಲಿ ಇವರು ಏನೇ ಬರೆದರೂ ನಿರ್ಭಯವಾಗಿ ಬರೆಯಬಹುದು. ವೈಯಕ್ತಿಕವಾದ ಯಾವುದೇ ಒತ್ತಡ ಅಪಾಯಗಳಿಗೆ ಅವರು ತುತ್ತಾಗುವುದಿಲ್ಲ. ಆದರೆ ಮುಸ್ಲಿಂ ಸಾಹಿತಿಗಳು ಅದರಲ್ಲೂ

ಲೇಖಕಿಯರ ವಿಷಯ ಇದಕ್ಕೆ ತೀರಾ ಭಿನ್ನ. ''ಅವರ ಬರವಣಿಗೆಯೇ ಒಂದು ಬಂಡಾಯವಾಗಿದೆ.'' ಧರ್ಮ ಮತ್ತು ಧರ್ಮದಿಂದ ರೂಪಿತವಾದ ಕಟ್ಟಳೆಗಳು ಪ್ರಶ್ನಾತೀತವಾಗಿರುವಂತಹ ಹೆಂಗಸರನ್ನು ಚಪ್ಪಲಿಯಂತೆ ಬಳಸಿಕೊಳ್ಳಬೇಕು. ಬೇಕಾದಾಗ ಉಪಯೋಗಿಸಿ ಬೇಡವಾದಾಗ ಮೂಲೆಯಲ್ಲಿ ಬಿಟ್ಟುಬಿಡಬೇಕು ಎಂಬ ಧೋರಣೆ ಇರುವಂತಹ ಸ್ತ್ರೀಯರು ,ಧರ್ಮವನ್ನು ಕುರಿತು ಮಾತನಾಡುವುದೂ ಕೂಡ ಅನೂಹ್ಯವಾಗಿರುವಂತಹ ವ್ಯವಸ್ಥೆಯಲ್ಲಿ ಅದೇ ಧರ್ಮಕ್ಕೆ ಸೇರಿದವರು ಅದರಲ್ಲಿಯೂ ಮಹಿಳೆ ಈ ಎಲ್ಲಾ ಬಂಧನಗಳನ್ನು ಒಮ್ಮೆಲೆ ಮೆಟ್ಟಿ ಮೇಲೆ ಬಂದದ್ದು ಬಂಡಾಯ ಎಂಬ ಪದದ ಅರ್ಥವನ್ನು ಮೀರಿದ ನಡವಳಿಕೆಯಾಗಿದೆ. ಇದಲ್ಲದೆ ಇವೆಲ್ಲಾ ಉಂಟಾದ ಪರಿಸ್ಥಿತಿಯು ಅಷ್ಟೇ ಬಿಕ್ಕಟ್ಟಿನದು ಮತ್ತು ಅಪಾಯಕಾರಿಯಾದದ್ದು. ಅಂತಹ ಅತ್ಯಂತ ಬಿಕ್ಕಟ್ಟಿನ ಅಪಾಯದ ಸಂದರ್ಭದಲ್ಲಿ ಹುಳುಕುಗಳನ್ನು ಎತ್ತಿತೋರಿಸುವ ಕೆಲಸವನ್ನು ಅದೇ ಧರ್ಮಕ್ಕೆ ಸೇರಿದವರು ಅದಕ್ಕಿಂತ ಹೆಚ್ಚಾಗಿ ಹೆಂಗಸರು ಮಾಡುವುದು ಒಂದು ವಿಸ್ಮಯಕಾರಿಯಾದ ಬಂಡಾಯ. ಒಂದು ಕಲ್ಲಿಗೆ ಎರಡು ಹಕ್ಕಿಎಂಬಂತೆ ಮುಸ್ಲಿಂ ಲೇಖಕಿಯರು ಸಾಧಿಸಿದ ಕೌಶಲ್ಯ, ಸ್ಮರಣೀಯ.ಸಾಹಿತ್ಯ ರಚನೆ ಅವರ ಪಾಲಿಗೆ ಕತ್ತಿನ ಮೇಲಿನ ನಡಿಗೆಯಾಗಿತ್ತು. ಆದರೆ ಅದರ ಬದ್ಧತೆ ಎಷ್ಟು ತೀವ್ರವಾಗಿತ್ತೆಂದರೆ ಇದ್ದೂ ನಮ್ಮ ಕಣ್ಣಿಗೆ ಕಾಣದಂತಿದ್ದ ಸಹಜೀವಿಗಳ ಅಂತರಂಗದ ಲೋಕ ನಮ್ಮ ಕಣ್ಣೆದುರಿಗೆ ಬಂತು.

ಈ ಜನಾಂಗದ ಬಗೆಗಿದ್ದ ಕೆಲವೊಂದು ತಪ್ಪು ತಿಳುವಳಿಕೆಗಳನ್ನು ಸರಿಪಡಿಸುವಲ್ಲಿ ತಿಳುವಳಿಕೆಯ ಕೊರತೆಯನ್ನು ತುಂಬಿಕೊಡುವಲ್ಲಿ ಗಮನಾರ್ಹಪಾತ್ರವಹಿಸಿತು. ಮಹಿಳಾ ಸಂಘಕ್ಕೆ ಒಂದು ಹೊಸ ಆಯಾಮವನ್ನು ದೊರಕಿಸಿಕೊಟ್ಟಿತು. ಇವರು ತಮ್ಮ ಕೃತಿಗಳ ಮೂಲಕ ಈ ಧರ್ಮದ ಸ್ತ್ರೀವಿರೋಧೀ ನೀತಿಗಳು, ಮಾನವ ವಿರೋಧಿ ನೀತಿಗಳು ಸಂಪ್ರದಾಯ ಮತ್ತು ಆಚರಣೆಗಳ ಅರ್ಥಹೀನತೆ ಹಾಗೂ ಅವುಗಳ ದ್ವಂದ್ವ ನೀತಿ, ಅಮಾನವೀಯತೆ, ಬಡವರ ಮತ್ತು ದುಡಿಯುವ ವರ್ಗದ ಶೋಷಣೆಗಳನ್ನು ಬಯಲಿಗೆಳೆದಿದ್ದಾರೆ. ಸ್ವತಃ ಈ ಜನಾಂಗದ ಮುಸ್ಲಿಂ ಮಹಿಳೆ ಎಚ್ಚೆತ್ತು ಕೊಳ್ಳುವಂತೆ ಮಾಡಿದ್ದಾರೆ. ಹಾಗೂ ಬೇರೆ ಜನ ಸಮುದಾಯಗಳಿಗೆ ಸಮಾಜದ ಒಳನೋಟಗಳನ್ನು ಒದಗಿಸುತ್ತಾರೆ. ಈ ರೀತಿಯ ಸಾಹಿತ್ಯ ಸೃಷ್ಟಿ ಮಾಡಿದವರಲ್ಲಿ ಸಾರಾಅಬೂಬಕ್ಕರ್ ಪ್ರಮುಖರು. ಇವರು ತಮ್ಮ ಬರವಣಿಗೆಗೆ ಒಂದು ವಿಶೇಷ ಮೆರುಗು ನೀಡಿದ್ದಾರೆ.

ಸಾರಾರವರಲ್ಲಿ ತಂತ್ರ, ಶೈಲಿ, ಕಥನಗಾರಿಕೆಯ ಬಗ್ಗೆ ಯಾವುದೇ ಪ್ರಜ್ಞಾಪೂರ್ವಕತೆ ಇಲ್ಲ. ವಸ್ತುವಿನ ಬಗ್ಗೆ ಅವರಿಗಿರುವ ಪ್ರಾಮಾಣಿಕ ಕಾಳಜಿ ಮತ್ತು ಜೀವನ ಶ್ರದ್ಧೆಗಳು ಅವರ ಬರಹಕ್ಕೆ ಬೆಲೆ ತಂದುಕೊಟ್ಟಿದೆ.

ಸಾರಾರವರ ನಂತರ ಪ್ರಮುಖ ಸ್ಥಾನದಲ್ಲಿ ಹೆಸರಿಸಬೇಕಾದ ಲೇಖಕಿ ಬಾನುಮುಸ್ತಾಫ್. ಇವರ ಹೆಜ್ಜೆ ಮೂಡಿದ ಹಾದಿ, ಬೆಂಕಿಮಳೆ ಎಂಬ ಕಥಾಸಂಕಲನವನ್ನು ಸ್ತ್ರೀವಾದಿ ದೋರಣೆಯ ಹಲವಾರು ಕವಿತೆಗಳನ್ನು ರಚಿಸಿದ್ದಾರೆ. ಇವರ ನಂತರ ಮಮ್ತಾಜ್‌ರವನ್ನು ಹೆಸರಿಸಬಹುದು. ಇವರೂ ಸಹ ತಮ್ಮ ಬರವಣಿಗೆಯಲ್ಲಿ ಮುಸ್ಲಿಂ ಸಮುದಾಯದ ಬದುಕು ಬವಣೆಗಳನ್ನು ಚಿತ್ರಿಸಿದ್ದಾರೆ. ಇವರ ಸಾಹಿತ್ಯದಲ್ಲಿ ಬಂಡಾಯದ ನೆಲೆ ಎಳೆಎಳೆಯಾಗಿ ಬಂದಿರುವುದನ್ನು ಕಾಣಬಹುದು. ನಂತರ ಹೆಚ್.ನಾಗವೇಣಿರವರನ್ನು ಗುರುತಿಸಬಹುದು. ಇವರ ಗಾಂಧಿಬಂಧ ಎಂಬ ಬೃಹತ್‌ಕಾದಂಬರಿಯ ಮೂಲ ಆಶಯವೇ ಬಂಡಾಯ.

ಈ ರೀತಿಯ ದಲಿತ ಮತ್ತು ಬಂಡಾಯ ಆಶಯವಿರುವ ಕತೆಗಳ ಮತ್ತೊಂದು ವೈಶಿಷ್ಟ್ಯವೆಂದರೆ 'ಲೇಖಕಿಯರು ಯಾವ ಶೋಷಿತ ಜನರ ಪರವಾಗಿ ಧ್ವನಿ ಎತ್ತಿದ್ದಾರೋ ಆ ಜನಗಳ ಸಂಸ್ಕೃತಿ ಕಥನಗಳಾಗಿರುವಂತೆ ಮಾಡಿರುವುದು'

ಈ ರೀತಿ ಲೇಖಕಿಯರು ದಲಿತ ಮತ್ತು ಬಂಡಾಯ ಆಶಯವಿರುವ ಕಥೆಗಳ ಮತ್ತೊಂದು ವೈಶಿಷ್ಟ್ಯವೇನೆಂದರೆ ಅವು ಈ ಲೇಖಕಿಯರು ಯಾವ ಶೋಷಿತ ಜನರ ಪರವಾಗಿ ಧನಿಯೆತ್ತುತ್ತಿದ್ದಾರೋ ಆ ಜನಗಳ ಸಂಸ್ಕೃತಿ ಕಥನಗಳು ಆಗಿರುವಂತೆ ಮಾಡಿರುವುದು. ಒಟ್ಟಿನಲ್ಲಿ ಮಹಿಳಾ ಸಾಹಿತ್ಯ ಈ ಹಿಂದಿನದಕ್ಕಿಂತ ಗಮನಾರ್ಹವಾಗಿ ಭಿನ್ನವಾಗಿದೆ. ಈ ಅವಧಿ ಮಹಿಳಾ ಸಾಹಿತ್ಯ ಚರಿತ್ರೆಯ ಮತ್ತುಪ್ರಮುಖ ಘಟ್ಟವಾಗಿದೆ. ಗಾತ್ರ ಮತ್ತು ಗುಣ ಎರಡೂ ದೃಷ್ಟಿಗಳಿಂದ ಕನ್ನಡ ಸಾಹಿತ್ಯ ವಿಸ್ತರಣೆ ವೈವಿಧ್ಯಕ್ಕೆ ಲೇಖಕಿಯರು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಲೇಖಕಿಯ ಪರಿಚಯ

ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ ಜನಾಂಗದ ಸ್ತ್ರೀ ಜಗತ್ತನ್ನು ಬೆಳಕಿಗೊಡ್ಡಿ ಮಿಂಚಿದವರು ಸಾರಾ ಅಬೂಬಕ್ಕರ್. ಬಂಡಾಯ ಮನೋಧರ್ಮದ, ಸ್ತ್ರೀವಾದಿ ದೃಷ್ಟಿಕೋನದ ಮಾನವೀಯ ಅನುಕಂಪವನ್ನು ಸಾಹಿತ್ಯದ ಮೂಲ ಆಶಯವನ್ನಾಗಿಸಿಕೊಂಡ ಕಥಾ ಲೇಖಕಿ ಸಾರಾಅಬೂಬಕ್ಕರ್. ಸಾಮಾಜಿಕ, ಧಾರ್ಮಿಕ ಹಿನ್ನೆಲೆಗಳನ್ನು ಹೊಸ ನಿಟ್ಟಿನಿಂದ ಗಮನಿಸಿ ವರ್ತಮಾನದ ಸಮಸ್ಯೆಗಳನ್ನು ಚಿತ್ರಿಸುವ ಲೇಖಕಿಯರಲ್ಲಿ ಇವರು ಗಮನಾರ್ಹರು.

ಕಾಸರಗೋಡಿನಲ್ಲಿ ಮಹಮ್ಮದ್ ಮತ್ತು ಜೈನಬೀ ದಂಪತಿಗಳ ಮಗಳಾಗಿ ೨೦-೦೬-೧೯೩೬ರಲ್ಲಿ ಸಾರಾರವರು ಜನಿಸಿದರು. ಇವರು ತಮ್ಮ ಸುತ್ತಲಿನ ಪ್ರಚಲಿತ ಮುಸ್ಲಿಂ ಸಮಾಜದ ವಿಧಿನಿಷೇಧಗಳು, ಕಟ್ಟುಪಾಡುಗಳು, ಶ್ರದ್ಧೆ, ಆಚರಣೆ, ನಂಬಿಕೆಗಳನ್ನು ಬಾಲ್ಯದಿಂದಲೇ ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸುತ್ತಾ ವಿಶ್ಲೇಷಿಸುತ್ತಾ ಬಂದರು. ವೈಜ್ಞಾನಿಕ, ವೈಚಾರಿಕ ಮನೋಭಾವದ ಹಿನ್ನೆಲೆ ಹಾಗೂ ಆಧುನಿಕ ದೃಷ್ಟಿಕೋನದಿಂದ ಸಮಾಜದ ವಿಶೇಷತೆ, ಸ್ತ್ರೀಯ ಸುತ್ತಮುತ್ತ ನಡೆಯುವ ಚಟುವಟಿಕೆಗಳನ್ನು ಸೃಜನಶೀಲ ನೆಲೆಯಲ್ಲಿ ಚಿಂತಿಸಿದರು. ಮುಸ್ಲಿಂಮಹಿಳೆಯ ಅಂತರಂಗದ ಒಳನೋಟಗಳು, ತಲ್ಲಣಗಳು, ವಾಸ್ತವ ಸತ್ಯಗಳು, ಕಂದಾಚಾರ, ಅಂಧಶ್ರದ್ಧೆಗಳು ಮೊಟ್ಟಮೊದಲ ಬಾರಿಗೆ ಇವರ ಸಾಹಿತ್ಯದಲ್ಲಿ ಅನಾವರಣಗೊಂಡವು. ಹೀಗೆ ಮೇಲಿನ ವಿಷಯಗಳನ್ನೆಲ್ಲಾ ಅಳವಡಿಸಿ ಅವರು ರಚಿಸಿದ ಸಾಹಿತ್ಯದ ಪ್ರಮಾಣ ಅಧಿಕವಾದದ್ದು. ಅದರಲ್ಲೂ ಇವರ ಕೊಡುಗೆ ಕಥಾಪ್ರಕಾರಕ್ಕೆ ಹೆಚ್ಚು.

೪೦ರ ಪ್ರೌಢ ವಯಸ್ಸಿನಲ್ಲಿ ಬರೆಯತೊಡಗಿದ ಸಾರಾಅಬೂಬಕ್ಕರ್ ಒಂದೆಡೆ ಹೀಗೆ ಹೇಳುತ್ತಾರೆ.''ಎಲ್ಲಾ ಸಮಾಜಗಳಲ್ಲೂ ಧಾರ್ಮಿಕ ಹೆಸರಿನಲ್ಲಿ ಸ್ತ್ರೀಶೋಷಣೆ ಇದೆ. ಬಂಗಾಳದಲ್ಲಿ ಬಾಲ್ಯವಿವಾಹ, ವಿಧವೆಯರ ಸಮಸ್ಯೆ, ಸತಿಪದ್ಧತಿಗಳ ವಿರುದ್ಧ ಶರತ್‌ಶ್ಚಂದ್ರ, ರವೀಂದ್ರನಾಥ ಠಾಗೋರ್‌ರಂತವರು ಸಾಹಿತ್ಯ ರಚನೆ ಮಾಡಿ ಸಮಾಜಸುಧಾರಣೆಗೆ ಕಾರಣರಾದಂತೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನನ್ನದು ಒಂದು ಸಣ್ಣಪ್ರಯತ್ನ.'' ಎಂದು ವಿನಯದಿಂದ ಹೇಳಿಕೊಂಡಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ೭೦ ದಶಕವು ಬಂಡಾಯ ಮತ್ತು ಪ್ರತಿಭಟನೆಗಳ ಕಾಲ. ಹಲವು ಉಪ ಸಂಸ್ಕೃತಿಗಳಿಂದ ಬಂದ ಲೇಖಕರು ಪ್ರಧಾನವಾಗಿ ಬರವಣಿಗೆಯ ತಾತ್ವಿಕತೆಯನ್ನೇ ಪ್ರಶ್ನಿಸಿದರು. ದಲಿತ, ಬಂಡಾಯ, ಸ್ತ್ರೀವಾದಿ, ಮುಸ್ಲಿಂಸಂವೇದನೆಗಳು ಈ ಸಮಯದಲ್ಲಿ ಸಾರಾರವರ ಬರಹಗಳು ಬಂದವು. ಇವರು ತೆರೆದಿಟ್ಟ ಅನುಭವಗಳು ಕನ್ನಡಕ್ಕೆ ಹೊಸದಾಗಿದ್ದವು ಎಂಬುದು ಆಕರ್ಷಣೀಯವಾಗಿತ್ತು. ಜೊತೆಗೆ ಸಾಮಾಜಿಕ ಸಮಸ್ಯೆಗಳ ಆಳವಾದ ಅರಿವು ಮೂಡಿತು. ದುರ್ಬಲ ವರ್ಗದವರ ಮಹಿಳೆಯರ ಪರವಾಗಿದ್ದ ಲಂಕೇಶ್ ಪತ್ರಿಕೆಯ ಅಭಿಮಾನಿಯಾಗಿದ್ದ ಸಾರಾ ಒಮ್ಮೆ ಲಂಕೇಶ್‌ರವರ 'ನನ್ನ ಜನ ಒಂದಾಗಬೇಕು' ಲೇಖನಕ್ಕೆ ಪ್ರತಿಕ್ರಿಯೆಯೊಂದನ್ನು ಬರೆದು ಲಂಕೇಶ್ ಪತ್ರಿಕೆಯ ಕಛೇರಿಗೆ ರವಾನಿಸಿದ್ದರು. ಆ ಲೇಖನ ಪತ್ರಿಕೆಯಲ್ಲಿ ಪ್ರಕಟವಾಗುವುದರೊಂದಿಗೆ ಸಾರಾರವರನ್ನು ಲಂಕೇಶ್‌ರವರು ಬರೆಯುವಂತೆ ಹುರಿದುಂಬಿಸಿದರು.ಮಾತ್ರವಲ್ಲ ಇವರು ಬರೆದುದನ್ನು ಪ್ರಕಟಿಸುವ ಮೂಲಕ ಇವರಲ್ಲಿ ಅದಾಗಲೇ ಕುಗ್ಗತೊಡಗಿದ್ದ ಬರೆಯಬಲ್ಲೆ' ಎಂಬ ಆತ್ಮವಿಶ್ವಾಸವನ್ನು ಪೋಷಿಸಿದರು. ತಾನು ಲೇಖಕಿಯಾಗಿ ಕನ್ನಡ ಸಾಹಿತ್ಯದಲ್ಲಿ ನೆಟ್ಟು ಬೇರುಗಳನ್ನೂರಿ ಬೆಳೆಯಲು ಲಂಕೇಶ್‌ರವರು ನೀಡಿದ ಪ್ರೋತ್ಸಾಹ ಅಪಾರವಾದದ್ದು ಎಂದು ಲೇಖಕಿ ಸಾರಾರವರು ಸ್ವತಃ ಪ್ರಾಮಾಣಿಕವಾಗಿ ಹೇಳಿದ್ದಾರೆ.

ಹೀಗೆ ಬರೆಯಲು ತೊಡಗಿದ ಸಾರಾರವರು ತಮ್ಮ ಬಹುತೇಕ ಕೃತಿಗಳಲ್ಲಿ ಮಧ್ಯಮ ವರ್ಗದ, ಕೆಳಮಧ್ಯಮ ವರ್ಗದ , ಬಡ ಮುಸ್ಲಿಂ ಸಮುದಾಯಗಳ ಚಿತ್ರಣ ನೀಡಿದ್ದಾರೆ. ಇವರು ರಚಿಸಿದ ಕಾದಂಬರಿಗಳೆಂದರೆ -

	ಕಾದಂಬರಿಗಳು	ಕಥಾಸಂಕಲನಗಳು
೧.	ಚಂದ್ರಗಿರಿಯ ತೀರದಲ್ಲಿ	ಚಪ್ಪಲಿಗಳು, ೧೯೮೯
೨.	ಸಹನಾ	ಪಯಣ, ೧೯೯೨
೩.	ವಜ್ರಗಳು	ಖೆಡ್ಡಾ , ೧೯೯೯
೪.	ಸುಳಿಯಲ್ಲಿ ಸಿಕ್ಕವರು	ಗಗನಸಖಿ
೫.	ತಳ ಒಡೆದ ದೋಣಿಯಲ್ಲಿ	ಸುಮಯ್ಯ, ೨೦೦೪
೬.	ಪಂಜರ	ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು

ಅನುವಾದ ಕೃತಿಗಳು

೧. ಮೆರ್ನೋಮಿ, ೧೯೯೩,
ಮೂಲ ಲೇಖಕಿ : ಕಮಲಾದಾಸ್

೨. ಬಲೆ, ೧೯೯೮,
ಮೂಲ ಲೇಖಕಿ : ಬಿ.ಎಂ. ಸುಹರಾ

೩. ನಾನಿನ್ನು ನಿದ್ರಿಸುವೆ, ೨೦೦೦,
ಮೂಲ ಲೇಖಕ: ಪಿ.ಕೆ. ಬಾಲಕೃಷ್ಣನ್

೪. ತುರ್ತುಪರಿಸ್ಥಿತಿಯ ಕರಾಳ ಮುಖ, ೨೦೦೯,
ಮೂಲ ಲೇಖಕ : ಈಚರ ವಾರಿಯರ್

ಲೇಖನ ಸಂಗ್ರಹಗಳು

೧. ಲೇಖನಗುಚ್ಛ, ೧೯೯೭

೨. ಅನಾವರಣ, ೨೦೦೨

೩. ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ, ೨೦೦೭

ಇತರೆ

೧. ಐಷಾರಾಮದ ಆಳದಲ್ಲಿ ೨೦೦೧, ಪ್ರವಾಸ ಕಥನ

೨. ತೇಲಾಡುವ ಮೋಡಗಳು, ೨೦೦೨, ಬಾನುಲಿ ನಾಟಕಗಳ ಸಂಗ್ರಹ

ಇವರು ಸಾಹಿತ್ಯಕ್ಷೇತ್ರಕ್ಕೆ ಹಾಗೂ ಸಾಹಿತ್ಯ ಪ್ರಕಾರಗಳಿಗೆ ನೀಡಿರುವ ಕೊಡುಗೆಗಳನ್ನು ಗಮನಿಸಿ ನೀಡಿರುವಂತಹ ಪ್ರಶಸ್ತಿಗಳು ಬಹಳ. ಅವುಗಳೆಂದರೆ -

೧. ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ

೨. ಕರ್ನಾಟಕ ಸಾಹಿತ್ಯದ ಅಕಾಡೆಮಿ ಪ್ರಶಸ್ತಿ, ೧೯೯೧

೩. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೧೯೯೫

೪. ಸರೋಜದೇವಿ ಶ್ರೀ ಹರ್ಷಪ್ರಶಸ್ತಿ, ೧೯೯೯

೫. ಗಾನ ಚಿಂತಾಮಣಿ ಅತ್ತಿಮಬ್ಬೆಪ್ರಶಸ್ತಿ, ೨೦೦೧

೬. ಸಂದೇಶಸಾಹಿತ್ಯ ಪ್ರಶಸ್ತಿ, ೨೦೦೫

೭. ಆಳ್ವಾಸ್‌ನುಡಿಸಿರಿ ಪ್ರಶಸ್ತಿ, ೨೦೦೫

ಇವು ಸಾರಾಅಬೂಬಕ್ಕರ್‌ರವರಿಗೆ ಸಲ್ಲಿದ ಪ್ರಶಸ್ತಿಗಳು. ಇವರು ತಮ್ಮ ಭಾಷಣ, ಲೇಖನ, ಕಥೆ, ಕಾದಂಬರಿ, ಅನುವಾದಿತ ಕೃತಿಗಳ ಮೂಲಕ ಅಗಾಧವಾಗಿ ಬೆಳೆದವು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಹುಕಾಲ ಉಳಿಯುವಂತಹವು. ಸಮಕಾಲೀನ ಸಮಸ್ಯೆಗಳೊಂದಿಗೆ ನಿರಂತರ ಸ್ಪಂದಿಸುವರಂತೆ ನಿರಂತರ ಬರೆಯುತ್ತಾ ಬಂದವರು. ಇವರಿಗೆ ಸಂದ ಪ್ರಶಸ್ತಿಗಳು, ಪುರಸ್ಕಾರಗಳು ಹಲವರಾದರೂ ಪ್ರಶಸ್ತಿಗೆ ಹಿಗ್ಗದೆ, ತೆಗಳಿಕೆಗೆ ಕುಗ್ಗದೆ ಸಮಚಿತ್ತದಿಂದ ದೂರದೃಷ್ಟಿ, ಸಮಯೋಜಿತ ಪ್ರಜ್ಞೆಯಿಂದ ಬರೆಯುತ್ತಾ ಬಂದಿರುವ ಇವರು ನಮ್ಮ ನಡುವಿನ ಹಿರಿಯ ಲೇಖಕಿ.

ಅಧ್ಯಾಯ - ೨

ಸಾರಾರವರ ಕಥೆಗಳಲ್ಲಿ ಸಾಮಾಜಿಕತೆ

★ ಕುಟುಂಬ ಮತ್ತು ಹೆಣ್ಣು

★ ಶಿಕ್ಷಣ ಮತ್ತು ಹೆಣ್ಣು

ಸಾರಾರವರ ಕಥೆಗಳು ಹಲವು ಮುಖ್ಯ ವಿಚಾರಗಳನ್ನು ಚಿತ್ರಿಸಿರುವ ಆಗರಗಳಾಗಿವೆ. ಸಮಾಜದಲ್ಲಿನ ವ್ಯವಸ್ಥೆಯನ್ನು ಕುರಿತು ಇವರ ಕಥೆಗಳಲ್ಲಿ ಧ್ವನಿ ಇದೆ. ಇವರ ಮುಖ್ಯ ಉದ್ದೇಶ ಮುಸ್ಲಿಂ ಸಮುದಾಯದಲ್ಲಿರುವಂತಹ ವ್ಯವಸ್ಥೆಯನ್ನು ತೋರಿಸುವುದಷ್ಟೇ ಆಗಿರಲಿಲ್ಲ. ಇದರ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಜೊತೆಗೆ ಧ್ವನಿಗೂಡಿಸುವುದೂ ಆಗಿತ್ತು. ಈ ನಿಟ್ಟಿನಲ್ಲಿ ಹಲವು ವಿಚಾರಗಳನ್ನು ಕುರಿತುಸಾರಾರವರು ಚರ್ಚಿಸುವಂತಾದರು. ಅಂತಹ ವಿಚಾರಗಳಲ್ಲಿ ಸಾಮಾಜಿಕತೆಯು ಒಂದು. ಸಾಮಾಜಿಕತೆಯನ್ನು ಪ್ರಭಾವಿಸುವ ಅಂಶಗಳಲ್ಲಿ ಹೆಣ್ಣು, ಕುಟುಂಬ, ಶಿಕ್ಷಣವು ಬಹುಮುಖ್ಯವಾದದ್ದು. ಈ ವಿಚಾರಗಳೇ ಸಾರಾರವರ ಬಹಳಷ್ಟು ಕಥೆಗಳಿಗೆ ವಸ್ತುಗಳಾಗಿರುವುದನ್ನು ನೋಡಬಹುದು. ಸಾರಾರವರು ಕಥೆಗಳಲ್ಲಿ ಹೆಣ್ಣಿನ ಸ್ಥಿತಿಗತಿಗಳನ್ನುಎಷ್ಟೇ ಕಷ್ಟಗಳಿದ್ದರೂ ಅದರ ನಡುವೆ ಕುಟುಂಬದ ಜವಾಬ್ದಾರಿಯನ್ನು ತೆಗೆದುಕೊಂಡು ಅದನ್ನು ನಿರ್ವಹಿಸುವ ಬಗೆ, ಶಿಕ್ಷಣವನ್ನುಪಡೆದ ಹೆಣ್ಣು ಸಮಾಜವನ್ನು, ವ್ಯವಸ್ಥೆಯಲ್ಲಿನ ನೀತಿ ನಿಯಮಗಳನ್ನು ಎದುರಿಸುವ ಬಗೆಯನ್ನುಕುರಿತು ವಿವರಣೆ ನೀಡಿದ್ದಾರೆ. ಈ ಮೂಲಕ ಸಮಾಜದಲ್ಲಿನ ಹಲವು ವಿಚಾರಗಳ ಮೇಲೆ ಬೆಳಕುಹರಿಸಿರುವುದನ್ನು ನೋಡಬಹುದು.

ಸಾರಾರವರು ಚರ್ಚಿಸಿರುವಂತಹ ವಿಚಾರಗಳು ವಾಸ್ತವತೆಗೆ ತೀರಾ ಹತ್ತಿರವಾಗಿದೆ. ಅಷ್ಟೇಅಲ್ಲದೆ ಮುಸ್ಲಿಂ ಸಮಾಜದಲ್ಲಿ ಇವತ್ತಿಗೂ ಅಂತಹ ಎಷ್ಟೋ ವಿಚಾರಗಳು ಪ್ರಸ್ತುತವಾಗಿವೆ.''ಮುಖ್ಯವಾಗಿ ಮುಸ್ಲಿಂಕುಟುಂಬದ ವ್ಯವಸ್ಥೆಯ ಚಿತ್ರಣ, ಆ ಕುಟುಂಬದಲ್ಲಿನ ಹೆಣ್ಣಿನ ಸ್ಥಾನಮಾನ, ಅವಳು ಪಡೆಯುವ ಶಿಕ್ಷಣ, ಶಿಕ್ಷಿತಳಾದ ಹೆಣ್ಣು ಗಿಟ್ಟಿಸಿಕೊಳ್ಳುವ ಸ್ಥಾನ, ಇದರಿಂದ ಅವಳು ತಾಳುವ ಸ್ಥೈರ್ಯ ಗಳ ವಿವರಣೆ, ಹಲವು ನೆಲೆಗಳಲ್ಲಿ ಕಂಡುಬಂದಿದೆ.'' ಸಾರಾರವರು ಇಲ್ಲಿನ ಎಷ್ಟೋ ಕತೆಗಳಲ್ಲಿ ಸ್ವತಃ ತಮ್ಮ

ಅನುಭವಗಳನ್ನು ಹೇಳಿಕೊಂಡಿದ್ದಾರೆ. ಇವೆಲ್ಲಾ ವ್ಯವಸ್ಥೆಯ ಬಗ್ಗೆ ಇವರಲ್ಲಿ ಅಸಮಾಧಾನ ಇದೆ. ಹೆಣ್ಣು ಇಂದು ಕುಟುಂಬದ ಮಧ್ಯೆ ನರಳುತ್ತಿದ್ದಾಳೆ. ಕುಟುಂಬದಲ್ಲಿ ಎಷ್ಟೇ ನೋವು, ಕಷ್ಟ, ಅಪಮಾನಗಳಿದ್ದರೂ ಇವೆಲ್ಲವೂ ನನಗೆ ಮೀಸಲು ಎಂಬಂತೆ ಹೆಣ್ಣು ಬದುಕುತ್ತಿರುವಂತಹ ಚಿತ್ರಣ ಇಲ್ಲಿನ ಕತೆಗಳಲ್ಲಿ ಕಂಡುಬರುತ್ತದೆ.

ಕುಟುಂಬ ಮತ್ತು ಹೆಣ್ಣು :

ಭಾರತೀಯ ವ್ಯವಸ್ಥೆಯು ಕೌಟುಂಬಿಕ ಸ್ಥಿತಿಗೆ ಹೆಣ್ಣು ಹೆಚ್ಚಿನ ಕಾಳಜಿ ತೋರಿಸುವಂತೆ ಮಾಡಿಬಿಟ್ಟಿದೆ. ಆದ್ದರಿಂದ ಕುಟುಂಬಕ್ಕೂ ಹೆಣ್ಣಿಗೂ ಅರಿಯದ ರೀತಿಯಲ್ಲಿ ಅವಿನಾಭಾವ ಸಂಬಂಧ. ಅವಳು ಕುಟುಂಬದಲ್ಲಿ ನರಳಿದರೂ ತನ್ನ ಕಷ್ಟಗಳನ್ನು ಹೊರಚೆಲ್ಲುವ ಧೈರ್ಯ ಪ್ರಾರಂಭದಲ್ಲಿ ಮಾಡಿರಲಿಲ್ಲ. ಹಲವು ರೀತಿಯ ನೋವುಗಳಿದ್ದರೂ ಮನಸ್ಸಿನಲ್ಲಿ ಅಸಮಾಧಾನ ಇದ್ದರೂ ಹೊರಜಗತ್ತಿಗೆ ಅದನ್ನು ತೋರಿಸಿರಲಿಲ್ಲ. ಮೌನವಾಗಿಯೇ ಎಲ್ಲವನ್ನೂ ಒಪ್ಪಿಕೊಂಡು ಕುಟುಂಬದ ನಿರ್ವಹಣೆಮಾಡುತ್ತಾ ಬಂದವಳು. ಮಕ್ಕಳ ಜೊತೆ ಕುಟುಂಬವನ್ನು ಕಟ್ಟುತ್ತಾಳೆ. ಇಂತಹ ಚಿತ್ರಣ ಸಾರಾರವರ ಕಥೆಗಳಲ್ಲಿ ಕಂಡುಬಂದಿವೆ. ಇವರ ಕಥೆಗಳ ಕುಟುಂಬಗಳ ಚಿತ್ರಣ ಈ ರೀತಿ ಮೂಡಿಬಂದಿದೆ. ''ಬಿಸಿಲ್ಗುದುರೆಯ ಬೆನ್ನುಹತ್ತಿ'' ಎಂಬ ಕತೆಯಲ್ಲಿ ಕತೆಯ ನಾಯಕಿ ಕಜ್ಜಮ್ಮ ಇವಳು ಕುಟುಂಬವನ್ನು ನಿರ್ವಹಿಸುವ ರೀತಿ ಬಹಳ ಕಷ್ಟಕರವಾಗಿದ್ದು. ಒಂದು ಬಡಕುಟುಂಬ ಈ ಕುಟುಂಬದಲ್ಲಿ ಕಜ್ಜಮ್ಮ ಸೇರಿದಂತೆ ಒಟ್ಟು ಐದುಜನ. ಗಂಡನಾದವನು ಮನೆಯ ಯಾವ ಜವಾಬ್ದಾರಿಯನ್ನು ತೆಗೆದುಕೊಂಡವನಲ್ಲ. ಆತನು ಕುಡುಕ. ಜೊತೆಗೆ ಸಂಪಾದನೆಯನ್ನು ಮಾಡುವವನಲ್ಲ. ಹೀಗಿರುವಾಗ ಇಡೀ ಕುಟುಂಬದ ಹೊರೆ ಮೂರು ಮಕ್ಕಳ ಜವಾಬ್ದಾರಿಯು ಕಜ್ಜಮ್ಮನಮೇಲೆ.

ಕಜ್ಜಮ್ಮ ತನ್ನ ಕುಟುಂಬದ ನಿರ್ವಹಣೆಯನ್ನು ಸ್ವತಃ ತಾನೇ ಮಾಡುತ್ತಿದ್ದಳು. ಸ್ವತಃ ತಾನೇ ದುಡಿದು ಅದರಿಂದ ಬರುತ್ತಿದ್ದ ಸ್ವಲ್ಪ ಹಣದಲ್ಲಿಯೇ ಎಲ್ಲಾ ಖರ್ಚುಗಳನ್ನು ನಿಭಾಯಿಸಿ ಕುಡುಕ ಗಂಡನನ್ನು ಸಾಕುತ್ತಿದ್ದಳು. ಎಷ್ಟೋಬಾರಿ ಕಜ್ಜಮ್ಮನ ಅಲ್ಪ ಹಣವನ್ನು ಕುಡುಕ ಗಂಡ ಕಸಿದುಕೊಂಡದ್ದು ಇದೆ. ಈ ಮಧ್ಯೆ ಕಜ್ಜಮ್ಮಳಿಗೆ ಇದ್ದಂತಹ ಒಬ್ಬನೇ ಮಗ. ಆ ಮಗನನ್ನು ಚೆನ್ನಾಗಿ ಓದಿಸಬೇಕೆಂಬ ಆಸೆಯಿಂದ ಮಿತಿಮೀರಿ ದುಡಿಯುತ್ತಿದ್ದಳು.

ದುಡಿಮೆ ಸಾಲದಾದಾಗ ಸ್ವತಃ ತಾನೇ ಧೈರ್ಯ ಮಾಡಿ ಸಾಲವನ್ನು ಮಾಡಿದ್ದಳು. ಜೊತೆಗೆ ಇಬ್ಬರು ಹೆಣ್ಣು ಮಗಳ ಮದುವೆಯ ಜವಾಬ್ದಾರಿಯೂ ಇವಳ ಹೆಗಲ ಮೇಲೆಯೇ ಇತ್ತು. ಇತ್ತ ಬಡತನ, ಸಾಲ, ವಿದ್ಯಾಭ್ಯಾಸ ಮಾಡಿಸಲೇ ಬೇಕೆಂಬ ಆಸೆ, ಬೆಳೆದು ನಿಂತ ಎರಡು ಹೆಣ್ಣು ಮಕ್ಕಳು, ಕುಡುಕ ಗಂಡನ ಮಾತುಗಳು ಇವುಗಳ ಮಧ್ಯೆ ಎಲ್ಲವನ್ನೂ ಸಹಿಸಿಕೊಂಡು ಕುಟುಂಬವನ್ನು ನಿರ್ವಹಿಸುತ್ತಾ ಬಂದವಳು. ಅಸಮಾಧಾನ, ಬೇಜಾರುಗಳನ್ನು ಹೊರಚೆಲ್ಲುತ್ತಾ ಜೀವಿಸುತ್ತಿದ್ದಳು. ಇವಳಿಗೆ ತನ್ನ ಗಂಡನ ಬಗ್ಗೆ ಬೇಸರವಿತ್ತು. ಬಡತನದ ಬಗ್ಗೆ ಅಸಹನೆಯಿತ್ತು. ಹಾಗಂದ ಮಾತ್ರಕ್ಕೆ ತನ್ನ ಕುಟುಂಬವನ್ನು ಬಿಟ್ಟು ಹೊರಬರಲಿಲ್ಲ.

ಮತ್ತೊಂದು ಕತೆಯಾದಂತಹ ''ಅಪಹರಣ'' ಎಂಬಲ್ಲಿ ಹೆಣ್ಣು ಮತ್ತು ಕುಟುಂಬದ ನಿರ್ವಹಣೆಯ ಚಿತ್ರ ಕಾಣಿಸುತ್ತದೆ. ಒಂದು ಹೆಣ್ಣು ತನ್ನ ಇಡೀ ಕುಟುಂಬವನ್ನು ಹಲವು ನೆಲೆಗಳಿಂದ ಕಾಪಾಡಿಕೊಂಡು, ನಿರ್ವಹಿಸಿಕೊಂಡು ಹೋಗುತ್ತಾಳೆ. ಇಲ್ಲಿ ಮನೆಯ ಯಜಮಾನ ವಿದ್ಯಾವಂತನಾಗಲು ತನ್ನ ಕುಟುಂಬದ ಜವಾಬ್ದಾರಿಯನ್ನು ಹೊತ್ತಿರಲಿಲ್ಲ. ಏಕೆಂದರೆ ಈತನಿಗೆ ತನ್ನ ಕುಟುಂಬಕ್ಕಿಂತ ಹೆಚ್ಚಾಗಿ ಧರ್ಮದ ವಿಚಾರಗಳು, ಧರ್ಮಗ್ರಂಥಗಳ ವಿಚಾರವೆ ಹೆಚ್ಚಾಗಿರುತ್ತದೆ. ಧರ್ಮಗ್ರಂಥಗಳ ಹಾಗೂ ಅದರ ವಿಷಯಗಳನ್ನು ಕುರಿತ ಸಂಶೋಧನೆಯನ್ನು ಈತ ಮಾಡುತ್ತಿರುತ್ತಾನೆ. ಇದನ್ನೇ ದೊಡ್ಡದೆಂದು ಭಾವಿಸಿ ಯಾವಾಗಲೂ ಮನೆಯಿಂದ ಹೊರಗಡೆಯೇ ಇರುತ್ತಿದ್ದನು. ಮನೆ, ಹೆಂಡತಿ, ಮಕ್ಕಳ ಬಗೆಗಿನ ಯಾವುದೇ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಹೀಗಿರುವಾಗ ಮನೆಯ ಹಾಗೂ ಕುಟುಂಬದ ನಿರ್ವಹಣೆಯ ಜವಾಬ್ದಾರಿಯನ್ನು ಹೆಣ್ಣೇ ಭರಿಸಬೇಕಾಯಿತು. ಮನೆಯ ಯಜಮಾನನಿಗೆ ತನ್ನ ಕುಟುಂಬಕ್ಕಿಂತ ತನ್ನ ಧರ್ಮಗ್ರಂಥಗಳ ವಿಚಾರವೇ ಹೆಚ್ಚಾಗಿದ್ದಂತಹ ಸಂದರ್ಭದಲ್ಲಿ ಆ ಕುಟುಂಬದ ಹೊಣೆಗಾರಿಕೆ ಇವಳ ಹೆಗಲಮೇಲೆ ಬೀಳುತ್ತದೆ. ಇವಳು ಎಷ್ಟೇ ಸಮಸ್ಯೆಗಳಿದ್ದರೂ ನಿಭಾಯಿಸುತ್ತಾಳೆ.

ತನ್ನ ಮನೆಯ ಜವಾಬ್ದಾರಿಯೆಲ್ಲವೂ ನಿಭಾಯಿಸುತ್ತಾ ಮಕ್ಕಳನ್ನು ನೋಡಿಕೊಂಡು ಮನೆ, ಹೊಲಗಳ ಉಸ್ತುವಾರಿಯನ್ನು ನಿಭಾಯಿಸುವಾಗ ಆಕೆ ದುಡಿದು ಕಂಗಾಲಾಗುತ್ತಿದ್ದಳು. ಹಾಗಿದ್ದರೂ ತನ್ನೆಲ್ಲಾ ಕಷ್ಟಗಳನ್ನು ಮೌನವಾಗಿ ಸಹಿಸಿಕೊಂಡು ತನ್ನ ಜವಾಬ್ದಾರಿಯನ್ನು ಬಿಡಲಿಲ್ಲ. ತನ್ನ ಗಂಡನ ಕೆಲಸ ಹಾಗೂ ವರ್ತನೆಗಾಗಿ ಇವಳಲ್ಲಿ ಕೋಪ ಹಾಗೂ ಅಸಹನೆ ಇತ್ತು. ಆದರೂ ಅದನ್ನು ಹೊರಜಗತ್ತಿಗೆ ತೋರಿಸಲಿಲ್ಲ. ಒಂದು

ದಿನ ತನ್ನ ಮಗು ಕಾಯಿಲೆಯಿಂದ ನರಳುವಾಗ ಇವನು ತನ್ನ ಸಂಶೋಧನಾ ಕೆಲಸಕ್ಕಾಗಿ ಹೊರಟನು. ಹೆಂಡತಿ ಮಾತಿಗೆ ಕಿವಿಗೊಡಲೇ ಇಲ್ಲ. ಇವಳು ಮಗುವನ್ನು ಮಂತ್ರವಾದಿಯ ಬಳಿ ಕೊಂಡೊಯ್ದಳು. ಆದರೂ ಫಲಕಾರಿಯಾಗಲಿಲ್ಲ. ಇತ್ತ ತನ್ನ ಗಂಡನಿಗಾಗಿ ಕಾಯುತ್ತಲೇ ತನ್ನ ಗಂಡ ಬರುವನೆಂದು ತಿಳಿದು ಗಂಡ ಬಂದ ಮೇಲೆ ಮಗುವನ್ನು ಪಟ್ಟಣದ ಆಸ್ಪತ್ರೆಗೆ ಕರೆದುಕೊಂಡು ಹೋಗಬಹುದುದೆಂದು ಇಡೀ ರಾತ್ರಿಯ ಒಂದೊಂದು ಕ್ಷಣವನ್ನು ಒಂದೊಂದು ಗಂಟೆಗಳಂತೆ ಕಳೆದಳು. ಬೆಳಗಾಯಿತು, ಆದರೆ ಮಗುವಿನ ಪಾಲಿಗೆ ಸೂರ್ಯ ಶಾಶ್ವತವಾಗಿ ನಂದಿತ್ತು. ಆಗ ಇವಳಿಗೆ ಆದ ದುಃಖಕ್ಕೆ ಗಡಿಯೇ ಇರಲಿಲ್ಲ. ತನ್ನ ಗಂಡನ ಬಗ್ಗೆ ಸಹಿಸಲಾಗದಷ್ಟು ಕೋಪವೂ ಬಂತು. ಆದರೆ ''ಬಡವನ ಸಿಟ್ಟು ದವಡೆಗೆ ಮೂಲ ಎಂಬಂತೆ ಪ್ರಯೋಜನವಾಗಲಿಲ್ಲ'' ತನ್ನ ಗಂಡನ ನಡವಳಿಕೆಯಿಂದ ಮನನೊಂದುಒಮ್ಮೊಮ್ಮೆ ಹೀಗೆ ಒಹೇಳುತ್ತಿದ್ದಳು. ''ತನ್ನಗಂಡನಿಗೆ ಈ ಹೊತ್ತಿನಲ್ಲಾದರೂ ಬುದ್ಧಿ ಬರಲಿಲ್ಲವಲ್ಲಾ'' ?

''ತಂಗಿಯ ಪತ್ರಗಳು'' ಈ ಕಥೆಯ ನಾಯಕಿ ಹೆಣ್ಣು. ಇವಳು ತನ್ನ ಚಿಕ್ಕವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡಿದ್ದಳು. ಇವಳಿಗೆ ಒಂದು ಹೆಣ್ಣುಮಗಳು ಮುಬೀನಾ. ಇವಳೇ ಕತೆಯ ನಾಯಕಿ ಜೊತೆಗೆ ಕೇಂದ್ರ ಪಾತ್ರ. ಇಡೀ ಕತೆಯಲ್ಲಿ ಎಲ್ಲಿಯೂ ತನ್ನ ಗಂಡನಿಲ್ಲ. ತಾನು ಹೇಗೆ ತನ್ನ ಮಗಳನ್ನು ಸಾಕುವುದು, ಸಮಾಜದಲ್ಲಿ ಬದುಕುವುದು ಎಂಬ ಅಧೈರ್ಯ ಇವರಲ್ಲಿ ಮೂಡುವುದೇ ಇಲ್ಲ. ಇಷ್ಟವಿಲ್ಲದಿದ್ದರೂ ತನ್ನ ಮಗಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸಿರುತ್ತಾಳೆ. ತನ್ನ ಕುಟುಂಬವನ್ನು ಯಾವುದೇ ಭಯವಿಲ್ಲದೆ ಸಾಗಿಸಿಕೊಂಡು ಹೋಗುತ್ತಿದ್ದಳು. ಇವಳಿಗೆ ಯಾವ ಭಯ ಆತಂಕವೂ ಇರಲಿಲ್ಲ. ಆದರೆ ಒಂದು ದೊಡ್ಡ ಜವಾಬ್ದಾರಿ ಇದೆ ಎಂದು ಭಾವಿಸಿದಳು. ಅದೇ ಮುಬೀನಾಳ ಮದುವೆ. ಮದುವೆಗಾಗಿ ಹುಡುಗನನ್ನು ಕುರಿತ ಭಯ ಇವಳಲ್ಲಿ ಕಾಡುತ್ತಿತ್ತು. ತನ್ನ ಮಗಳಿಗೆ ಸಾಕಿ ಸಲುಹಿ ಅವಳ ಭವಿಷ್ಯದ ಕನಸ್ಸು ಕಂಡಿದ್ದ ಈಕೆಗೆ ಈಗ ಆದಷ್ಟು ಬೇಗ ತನ್ನ ಜವಾಬ್ದಾರಿಯನ್ನು ಪೂರ್ಣಗೊಳಿಸಬೇಕೆಂದು ಹಂಬಲಿಸುತ್ತಿದ್ದಳು. ತನ್ನ ಇಚ್ಛೆಯಂತೆ ಇವಳು ಯಾವ ಕೊರತೆಯೂ ಇಲ್ಲದಂತೆ ತನ್ನ ಮಗಳನ್ನು ವಿದ್ಯಾವಂತ ಹುಡುಗನಿಗೆ ಕೊಟ್ಟು ಮದುವೆ ಮಾಡಿದಳು. ಆದರೆ ಅವಳ ಜವಾಬ್ದಾರಿ ಬಗೆಹರಿಯದೆ ಬದಲಾಗಿ ಸಮಸ್ಯೆಯಾಗಿ ಪರಿಣಮಿಸುತ್ತದೆ. ಆಗ ಅವಳು

ಏನೂ ಮಾಡಲಾಗದೆ ಅಸಹಾಯಕ ರೀತಿಯಲ್ಲಿ ಬದುಕುವಂತವಳಾಗುತ್ತಾಳೆ. ಏಕೆಂದರೆ ಮುಸ್ಲಿಂ ಸಮಾಜದಲ್ಲಿ ಇದ್ದಂತಹ ಪದ್ಧತಿಗಳು ಹಾಗೂ ಪುರುಷರ ದಬ್ಬಾಳಿಕೆ ಹಾಗೆ ಮಾಡಿಸಿತ್ತು.

ಹೆಣ್ಣು ಮತ್ತು ಶಿಕ್ಷಣ

ಶಿಕ್ಷಣ ಮತ್ತು ಹೆಣ್ಣು ಈವೆರಡೂ ಒಂದು ನಾಣ್ಯದ ಎರಡು ಮುಖಗಳಂತೆ. ಇಂದು ಹೆಣ್ಣಿನ ಜೀವನ, ಸ್ಥಿತಿಗತಿ, ಆಲೋಚನೆಗಳನ್ನು ಬದಲಾಯಿಸಿರುವುದು ಶಿಕ್ಷಣ. ಹಿಂದೆ ಶಿಕ್ಷಣವಿಲ್ಲದೆ ಹೆಣ್ಣು ಅದೇ ಗೊಡ್ಡು ಸಂಪ್ರದಾಯ, ದಬ್ಬಾಳಿಕೆ, ದೌರ್ಜನ್ಯಗಳಲ್ಲಿ ಬದುಕುತ್ತಿದ್ದಳು. ಅಷ್ಟೇ ಅಲ್ಲದೆ ಪುರುಷನ ಕ್ರೌರ್ಯಕ್ಕೆ ಮತ್ತೆ ಮತ್ತೆ ಒಳಗಾಗುತ್ತ ಬದುಕನ್ನು ಸಾಗಿಸಿದವಳು. ಧರ್ಮ, ಸಂಪ್ರದಾಯ, ಆಚಾರ-ವಿಚಾರ, ನೀತಿನಿಯಮಗಳಿಗೆ ಅಂಟಿಕೊಂಡು ಇಷ್ಟವಿಲ್ಲದಿದ್ದರೂ ಏನೂ ಮಾಡಲಾಗದೆ ಬದುಕುತ್ತಿದ್ದಳು. ತನ್ನ ಮೇಲೆ ದಬ್ಬಾಳಿಕೆ, ದೌರ್ಜನ್ಯ ನಡೆಯುತ್ತಿದ್ದರೂ ಅದರ ಅರಿವೇ ಇಲ್ಲದಂತೆ ನಾಲ್ಕು ಗೋಡೆಗಳ ಮಧ್ಯೆಯೇ ಬದುಕುತ್ತಿದ್ದಳಷ್ಟೇ ಅಲ್ಲದೆ ಶಿಕ್ಷಣವೂ ಕೂಡ ಇರಲಿಲ್ಲ. ಆದರೆ ಇಂತಹ ಸ್ಥಿತಿ ಇಂದು ಇಲ್ಲ. ಏಕೆಂದರೆ ಇಂದು ನಾಲ್ಕು ಗೋಡೆಗಳ ಮಧ್ಯೆ ಹೆಣ್ಣು ಬದುಕುತ್ತಿಲ್ಲ.ಎಲ್ಲವನ್ನೂ ಮುರಿದು ಹೊರಗೆ ಬಂದು ಸ್ವತಂತ್ರವಾಗಿ ಬಾಳುವ ಪ್ರಯತ್ನ ಮಾಡಿದ್ದಾಳೆ. ಹೀಗೆ ಮಾಡಲು ಸಾಧ್ಯವಾದುದ್ದೇ ಶಿಕ್ಷಣದಿಂದ. ಅಂದರೆ ಸಾಕಷ್ಟು ಹೆಣ್ಣುಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಶಿಕ್ಷಣ ಪಡೆದು ಧರ್ಮ, ಸಂಪ್ರದಾಯ, ನೀತಿ, ನಿಯಮ, ಬುರ್ಖಾ ಇವೆಲ್ಲವುಗಳಿಂದ ದೂರ ಉಳಿಯುವ ಪ್ರಯತ್ನವನ್ನು ನಡೆಸಿದ್ದಾರೆ. ಹಾಗಾಗಿ ಇವಳ ಯೋಜನಾಕ್ರಮದಲ್ಲಿಯೂ ಬದಲಾವಣೆ ಇದೆ. ಇವಳು ಶೋಷಣೆ, ದೌರ್ಜನ್ಯಕ್ಕೆ ಅಷ್ಟು ಬೇಗ ಇಂದು ಒಳಗಾಗುತ್ತಿಲ್ಲ. ಒಂದು ವೇಳೆ ಅವಳ ಮೇಲೆ ದಬ್ಬಾಳಿಕೆ ನಡೆದರೂ ಅದನ್ನು ಗುರುತಿಸುವ ಹಾಗೂ ಅದರ ವಿರುದ್ಧ ವಿರೋಧ ತೋರಿಸುವ ಸಾಮರ್ಥ್ಯ ಪಡೆದುಕೊಂಡಿದ್ದಾಳೆ. ಸ್ವತಂತ್ರವಾಗಿ ತನ್ನ ಮುಂದಿನ ಜೀವನದ ಬಗ್ಗೆ ಸ್ವತಃ ತಾನೇ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದಾಳೆ. ವ್ಯವಸ್ಥೆಯ ವಿರುದ್ಧ ಧ್ವನಿ ಇವಳಲ್ಲಿದೆ. ಇಂತಹ ದಿಟ್ಟನಿಲುವಿನ ಹೆಣ್ಣು ಸಾರಾರವರ ಕಥೆಗಳಲ್ಲಿ ಕಂಡುಬರುತ್ತದೆ.

ಸಾರಾರವರ ಹೆಚ್ಚಿನ ಕಥೆಗಳಲ್ಲಿ ಕಾಣಿಸುವ ಹೆಣ್ಣು ವಿದ್ಯಾವಂತಳಾಗಿದ್ದಾಳೆ., ಕಷ್ಟಗಳ ಮಧ್ಯೆ, ಹಲವು ಅಡೆತಡೆಗಳಿದ್ದರೂ ಶಿಕ್ಷಣ ಪಡೆದುಕೊಂಡು ಶಿಕ್ಷಿತಳಾದ ಹೆಣ್ಣು ಕತೆಯಲ್ಲಿ ಕಂಡುಬರುತ್ತಾಳೆ. ಹೀಗೆ ಶಿಕ್ಷಣ ಕಲಿತ ಹೆಣ್ಣು ಅಲ್ಲಲ್ಲಿ ವ್ಯವಸ್ಥೆಯ ವಿರುದ್ಧ ಪುರುಷ ಪ್ರಧಾನ ಜಗತ್ತಿನ ವಿರುದ್ಧ ಬಂಡೇಳುತ್ತಾಳೆ. ತನ್ನ ಜೀವನದ ಮುಂದಿನ ನಿರ್ಧಾರವನ್ನು ತಾನೇ ಕೈಗೊಳ್ಳುತ್ತಾಳೆ. ಶಿಕ್ಷಿತಳಾದ ಹೆಣ್ಣು ಸಮಾಜದಲ್ಲಿ ಒಳ್ಳೆಯ ರೀತಿ ಬದುಕಲು ಸಾಧ್ಯವಾಗಿದೆ. ಇದರಿಂದ ಇವಳು ತನ್ನ ಮನೆ, ಸಂಸಾರದ ಜವಾಬ್ದಾರಿಯನ್ನು ನಿಭಾಯಿಸುವಂತವಳೂ ಆಗಿದ್ದಾಳೆ. ಮುಸ್ಲಿಂ ಸ ಮಾಜದಲ್ಲಿ ಹೆಣ್ಣನ್ನು ಹಿಂಸಿಸಲು ಇರುವ ಅಸ್ತ್ರವೇ **ತಲಾಖ್.** ಹಿಂದೆ ಬಡಕುಟುಂಬಗಳಲ್ಲಿ ಕಂಡುಬರುತ್ತಿದ್ದ ಈ ತಲಾಖ್ ಪದ್ಧತಿಯು ಈಗ ಸಮಾಜದ ಮಧ್ಯಮವರ್ಗವನ್ನು ಆವರಿಸುತ್ತಿದೆ. ವಿಚ್ಛೇಧಿತಳಾದ ಹೆಣ್ಣು ಏನು ಮಾಡಬೇಕು ? ಹೇಗೆ ಬದುಕಬೇಕು ? ಎಂಬ ಭಯದ ಬದಲಾಗಿ ವ್ಯವಸ್ಥೆಯ ವಿರುದ್ಧ ಕೋಪ, ಜೊತೆಗೆ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದಾಳೆ. ಇವಳು ಶಿಕ್ಷಿತಳಾಗಿರುವದರಿಂದ ಒಂದಲ್ಲಾ ಒಂದು ರೀತಿಯ ಉದ್ಯೋಗ ಪಡೆದುಕೊಳ್ಳುತ್ತಿದ್ದಾಳೆ. ಆದ್ದರಿಂದ ಇವಳ ಬದುಕನ್ನು ಗಂಡನಿಲ್ಲದಿದ್ದರೂ ಸಾಗಿಸುವಂತವಳಾಗಿದ್ದಾಳೆ. ಇಂತಹ ನಿಲುವಿನ ವಿದ್ಯಾವಂತ ಹೆಣ್ಣು ಇಲ್ಲಿನಕಥೆಗಳಲ್ಲಿ ಕಂಡುಬರುತ್ತಾಳೆ. ''ಗಗನಸಖಿ'' ಎಂಬ ಕತೆಯಲ್ಲಿ ಕಾಣುವ ಕಥೆಯ ನಾಯಕಿ ರಚನಾ. ಇವಳು ವಿದ್ಯಾವಂತೆ, ಚಿಕ್ಕವಯಸ್ಸಿನಲ್ಲಿಯೇ ಗಗನಸಖಿಯಾಗಬೇಕೆಂಬ ಆಸೆ ಇವಳದ್ದು. ಹಾಗೆಯೇ ಇವಳ ತಾಯಿಗೂ ತನ್ನ ಮಗಳು ಪದವಿ ಪಡೆಯಬೇಕೆನ್ನುವ ಆಸೆ ಇತ್ತು. ಇವಳ ತಾಯಿಯ ಮರಣದಿಂದ ರಚನಾಳ ವಿದ್ಯಾಭ್ಯಾಸ ನಿಲ್ಲಲಿಲ್ಲ. ರಚನಾ ತನ್ನ ತಾಯಿಯ ಆಸೆಯನ್ನು ಪೂರೈಸಿಯೇ ತೋರಿಸುತ್ತಾಳೆ. ತನ್ನ ಅಣ್ಣ ಮದುವೆಮಾಡಲು ನಿರ್ಧರಿಸಿದರೂ ಅದನ್ನು ನಿರಾಕರಿಸುತ್ತಾಳೆ. ಪದವಿ ಮುಗಿದ ನಂತರ ಉದ್ಯೋಗವನ್ನು ಪಡೆಯುತ್ತಾಳೆ.ಇವಳ ಇಚ್ಛೆಯಂತೆ ಗಗನಸಖಿ ಆಗುತ್ತಾಳೆ. ಸಂತೋಷವಾಗಿ ಉದ್ಯೋಗವನ್ನು ನಿರ್ವಹಿಸುತ್ತಾಗೆಳತಿಯರ ಜೊತೆ ಸುಖ-ದುಃಖಗಳನ್ನು ಹಂಚಿಕೊಳ್ಳುತ್ತಾ ಜೀವನ ಸಾಗಿಸುತ್ತಿದ್ದಳು. ವಿವಾಹವಾದ ಗಂಡನಿಂದಲೇ ಅನ್ಯಾಯವಾದಾಗ ಅದಕ್ಕೆ ಅವಳು ಹೆದರಲಿಲ್ಲ. ಮರಳಿ ಅಲ್ಲಿಂದ ಹೊರಗೆ ಬಂದು ಸ್ವತಂತ್ರವಾಗಿ ನಿಲ್ಲುತ್ತಾಳೆ. ಯಾರ ಮೇಲೂ ಅವಲಂಬಿತಳಾಗುವುದಿಲ್ಲ. ತನ್ನ ಗಂಡನ ಮುಂದೆ ಸ್ವತಂತ್ರವಾಗಿ ನಿಂತು ತನ್ನ ಮಗನ ಲಾಲನೆಪಾಲನೆ ಮಾಡಿ ಜೀವನ ಸಾಗಿಸುತ್ತಾಳೆ. ಏಕೆಂದರೆ ಇವಳಲ್ಲಿ ಶಿಕ್ಷಣವೂ ಇತ್ತು,

ಉದ್ಯೋಗವೂ ಇತ್ತು. ತನ್ನ ಗಂಡನ ದಬ್ಬಾಳಿಕೆಗೆ ಒಳಗಾಗದೆ ಗಂಡನನ್ನು ನಿರಾಕರಿಸಿ ನಿಂತು ತನ್ನ ಮನಸ್ಸಿನ ಇಚ್ಛೆಯಂತೆ ತನ್ನ ಬಾಳಸಂಗಾತಿಯನ್ನು ಆಯ್ಕೆ ಮಾಡಿ ತನ್ನ ನಿರ್ಧಾರವನ್ನು ಮೌನವಾಗಿಯೇ ತಿಳಿಸುತ್ತಾಳೆ.

'ಬಿಕರಿಯ ಮಾಲುಗಳು' ಎಂಬ ಕತೆಯಲ್ಲಿಯೂ ಹೆಣ್ಣು ನಾಯಕಿಯಾಗಿ ಕಂಡುಬರುತ್ತಾಳೆ. ಇವಳು ವಿದ್ಯಾವಂತೆ. ಇವಳ ಹೆಸರೇ ಸುಹರಾ. ಮುಸ್ಲಿಂ ಸಮಾಜದಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಹೋಗುವುದನ್ನೇ ಒಪ್ಪದ ಗಂಡು ಪ್ರಪಂಚ ಇರುವಲ್ಲಿ ಸುಹರಾ ಕಾಲೇಜು ಮೆಟ್ಟಿಲನ್ನು ಹತ್ತಿದವಳು. ಇದನ್ನು ಸಮಾಜದ ಹಲವು ಮುಸಲ್ಮಾನ ಗಂಡಸರು ಒಪ್ಪುವುದಿಲ್ಲ. ಆದರೆ ಸುಹರಾಳ ತಂದೆ ಹನೀಫ್ ತನ್ನ ಮಗಳಿಗೆ ಉನ್ನತ ವಿದ್ಯಾಭ್ಯಾಸ ಮಾಡಿಸಬೇಕೆಂದು ಆಸೆ ಪಟ್ಟವರು. ಇವಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆಸಕ್ತಿ ತೋರಿಸಿದವರು. ಹನೀಫನು ಸಹ ವಿದ್ಯಾವಂತ ವಕೀಲನಾಗಿ ಸೇವೆ ಸಲ್ಲಿಸುತ್ತಿದ್ದರು. ಅದಕ್ಕಾಗಿ ಹೆಣ್ಣುಮಕ್ಕಳಿಗೆ ಸಮಾಜದಲ್ಲಿ ಬದುಕಲು ಶಿಕ್ಷಣ ಅಗತ್ಯವೆಂದು ಮನಗಂಡಿದ್ದರು. ಅವರು ಒಂದು ದಿನ ತನ್ನ ಮಗಳ ವಿದ್ಯಾಭ್ಯಾಸದ ಬಗ್ಗೆ ಹೀಗೆ ಹೇಳಿದರು. ''ತನ್ನ ಮಗಳನ್ನು ಯಾವಾಗ ಯಾವ ಮನೆಸೇರಿಸಬೇಕೆಂದು ನನಗೆ ಗೊತ್ತು. ನೀವ್ಯಾರೂ ತಲೆಕೆಡಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಅವಳ ಕಾಲಮೇಲೆ ಅವಳು ನಿಂತ ಬಳಿಕವಷ್ಟೇ ಅವಳ ಮದುವೆ''. ಈ ಮೇಲಿನ ಮಾತುಗಳಿಂದಲೇ ಹನೀಫ್ ತನ್ನ ಮಗಳ ಶಿಕ್ಷಣದ ಬಗ್ಗೆ ಹೇಗೆ ಕನಸ್ಸು ಕಂಡಿದ್ದರು. ಜೊತೆಗೆ ಹೆಣ್ಣಿಗೆ ಶಿಕ್ಷಣ ಅಗತ್ಯವೆಂಬುದನ್ನು ಅವರು ಮನಗಂಡಿದ್ದರು ಎಂಬುದನ್ನು ತಿಳಿಯಬಹುದು.

''ಬೇಟೆ'' ಎಂಬ ಕಥೆಯ ನಾಯಕಿ ರಫೀನಾ. ಇವಳದ್ದೇ ಕೇಂದ್ರ ಪಾತ್ರ. ಇವಳ ಸುತ್ತ ಇಡೀ ಕತೆಯನ್ನು ಚಿತ್ರಿಸಲಾಗಿದೆ. ರಫೀನ ವಿದ್ಯಾವಂತ ಹೆಣ್ಣು. ಉನ್ನತ ವಿದ್ಯಾಭ್ಯಾಸ ಮಾಡಬೇಕೆಂಬ ಆಸಕ್ತಿ ಇವಳದು. ಇವಳ ತಾಯಿಯ ಆಸಕ್ತಿಯೂ ಇದೇ ಆಗಿತ್ತು. ಇವಳು ತನ್ನ ಇಚ್ಛೆಯಂತೆ ವಿದ್ಯಾಭ್ಯಾಸ ಪಡೆಯುತ್ತಾಳೆ. ಇವಳು ಅನ್ಯಾಯಕ್ಕೊಳಗಾದಾಗ ಇವಳಲ್ಲಿದ್ದಂತಹ ಶಿಕ್ಷಣ ಕೈಹಿಡಿಯುತ್ತದೆ. ಸಮಾಜವನ್ನು ಎದುರಿಸುವ ಧೈರ್ಯ ತಂದುಕೊಡುತ್ತದೆ. ಅನ್ಯಾಯ ಮಾಡಿದ ಗಂಡನ ಎದುರು ಬದುಕಿ ತೋರಿಸಬೇಕೆಂಬ ಛಲ ಬರುತ್ತದೆ. ರಫೀನಾ ತನ್ನತಾಯಿಯ ಬಲವಂತದಿಂದ ಕೊಲ್ಲಿಪ್ರದೇಶದಲ್ಲಿ ಉದ್ಯೋಗದಲ್ಲಿದ್ದ ಹುಡುಗನೊಂದಿಗೆ ಮದುವೆಯಾಗುತ್ತಾಳೆ.

ಮದುವೆ ಸಂದರ್ಭದಲ್ಲಿ ಸಾಕಷ್ಟು ಕನಸುಗಳನ್ನು ಹೊತ್ತು ತನ್ನ ಗಂಡನ ಜೊತೆ ಹೋದವಳು ಕನಸುಗಳು ನನಸಾಗುವ ಮೊದಲೇ ತನ್ನ ಗಂಡನ ಅನುಮಾನದ ದೃಷ್ಟಿಗೆ ಬಲಿಯಾಗಿ ಅನ್ಯಾಯಕ್ಕೆ ಒಳಗಾಗಿ ಸೆರೆಮನೆಯೂ ಸೇರಿದ್ದಾಳೆ. ಸೆರೆಮನೆಯಲ್ಲಿ ಹಲವು ನೋವು ಮತ್ತು ಚಿಂತನೆಯ ಮಧ್ಯೆ ಕಣ್ಣೀರಿನ ಜೊತೆ ಕಾಲಕಳೆಯುವಂತವಳಾಗುತ್ತಾಳೆ. ನಂತರ ಹಲವು ಪ್ರಯತ್ನಗಳಿಂದ ಹೊರಬಂದು ತನ್ನ ದೇಶಕ್ಕೆ ಮರಳುವಾಗ ತಾನು ಬದುಕುವುದಾದರೂ ಹೇಗೆ? ತನ್ನ ತವರಿನವರಿಗೆ ತನ್ನ ಮುಖವನ್ನು ತೋರಿಸುವುದಾದರೂ ಹೇಗೆ ? ಎಂಬ ಪ್ರಶ್ನೆಗಳು ಮೂಡಿದಾಗ ಮರುಕ್ಷಣವೇ ಅವಳು ಎಚ್ಚೆತ್ತುಕೊಳ್ಳುತ್ತಾಳೆ. ತಾನು ನಂಬಿ ಬಂದ ಗಂಡನಿಂದಲೇ ಇಷ್ಟೊಂದು ಅನ್ಯಾಯವಾದ ಮೇಲೆ ತಾನು ಏಕೆ ಸಾಯಬೇಕು, ತಾನು ಬದುಕಬೇಕು ಎಂಬ ಆಸೆಯ ಚಿಗುರು ಮನದಲ್ಲಿ ಮೊಳೆಯುತ್ತದೆ. ಆಗ ತಾನು ಇನ್ನೂ ಶಿಕ್ಷಣ ಮುಂದುವರಿಸಬೇಕು, ಕಂಪ್ಯೂಟರ್ ಶಿಕ್ಷಣ ಪಡೆಯಬೇಕು, ಉದ್ಯೋಗವನ್ನು ಪಡೆದು ಸ್ವತಂತ್ರಳಾಗಬೇಕು, ಆತನೆದುರು ತಾನು ಯಾವುದರಲ್ಲಿಯೂ ಕಮ್ಮಿ ಇಲ್ಲ. ನೀನು ನನ್ನನ್ನು ಏನೂ ಮಾಡಲಾರೆ ಎಂದು ಧೈರ್ಯವನ್ನು ತಳೆಯುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇವಳಲ್ಲಿ ಶಿಕ್ಷಣ ಇದ್ದುದರಿಂದ ನಾನು ಬದುಕಬಲ್ಲೆ ಎಂಬ ಧೈರ್ಯ ಬಂದು ಆ ಒಂದು ನಿಲುವನ್ನು ವ್ಯಕ್ತಪಡಿಸಿದ್ದಾಳೆ. ತನ್ನ ಮುಂದಿನ ಜೀವನವನ್ನು ಕುರಿತು ನಿರ್ಧಾರವನ್ನು ಕೈಗೊಳ್ಳುತ್ತಾಳೆ.

'ಓ ರಾಮಾ' ಎಂಬ ಕತೆಯಲ್ಲಿ ಶಿಕ್ಷಣದ ಹೊಸ ರೂಪವನ್ನು ನೋಡಬಹುದು. ಮಗಳ ಶಿಕ್ಷಣಕ್ಕಾಗಿ ತಂದೆ ಗಾಳಿಗೋಪುರವನ್ನೇ ಕಟ್ಟಿಕೊಂಡು ಕುಳಿತಿರುವ ಚಿತ್ರಣ. ಹೆಣ್ಣು ಶಿಕ್ಷಣವನ್ನು ಪಡೆಯಬೇಕು. ಶಿಕ್ಷಿತಳಾಗಬೇಕೆಂಬ ಬಯಕೆಯಿಂದ ಇರುವವರು ಖಾನ್ ಸಾಹೇಬರು. ಇವರ ಮಗಳೇ ಶಬಾನ. ೧೦ನೇ ತರಗತಿ ಓದುತ್ತಿದ್ದ ಹುಡುಗಿ. ಇವರ ಮುಂದಿನ ಶಿಕ್ಷಣದ ಬಗ್ಗೆ ಖಾನ್‌ಸಾಹೇಬರು ಹೀಗೆ ಕನಸನ್ನು ಕಂಡಿದ್ದರು.

> ''ಮುಂದಿನ ವರ್ಷಮಗಳು ಕಾಲೇಜು ಸೇರಿ ಮತ್ತೆರಡು ವರ್ಷಗಳ ಬಳಿಕ ಆಕೆಯನ್ನು ವೈದ್ಯಕೀಯ ಕಾಲೇಜಿಗೆ ಸೇರಿಸುವ ಆಸೆ, ತನ್ನ ಕುಟುಂಬದಲ್ಲಿ ಯಾರೂ ವೈದ್ಯಕೀಯ ಪದವಿಪಡೆದಿಲ್ಲ. ತನ್ನ ಮಗ ಳಾದರೂ ಇಂತಹ ಒಂದು ಪದವಿ ಪಡೆಯಬೇಕೆಂಬುದು ತಂದೆಯ ಆಸೆ.''.[೧]

---

೧ ಗಗನಸಖಿ ಕಥಾಸಂಕಲನ, ಪುಟ - ೭೨.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಖಾನ್‌ಸಾಹೇಬರು ತನ್ನ ಮಗಳ ವಿದ್ಯಾಭ್ಯಾಸದ ಬಗ್ಗೆ ಅಪಾರವಾದ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದರು. ಇವರಲ್ಲಿ ಯಾವುದೇ ಪೂರ್ವಗ್ರಹಿಕೆಗಳು ಇರಲಿಲ್ಲ. ಪ್ರಸ್ತುತ ಸಂದರ್ಭ ಹಾಗೂ ಪರಿಸ್ಥಿತಿಗಳನ್ನು ಬಲ್ಲವರಾಗಿದ್ದರು. ಜೊತೆಗೆ ಶಿಕ್ಷಣದ ಮಹತ್ವವನ್ನು ಅರಿತಿದ್ದರು. ಹೆಣ್ಣಿಗೆ ಶಿಕ್ಷಣ ಅನಿವಾರ್ಯ ಎಂಬುದನ್ನು ತಿಳಿದಿದ್ದರು.

''ಹೊಸದಿಕ್ಕು''ಎಂಬ ಕತೆಯಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಪಡೆದ ದೃಢ ಹಾಗೂ ದಿಟ್ಟನಿಲುವಿನ ನಾಯಕಿ ಕಂಡುಬರುತ್ತಾಳೆ. ಇವಳೇ ಶಾಹಿನಾ. ತನ್ನ ಇಚ್ಛೆಯಂತೆ ಎಲ್ಲಾ ಅಡೆತಡೆಗಳ ನಡುವೆಯೂ ಎಂ.ಎಸ್ಸಿ ಪದವಿಯನ್ನು ಪಡೆದಿದ್ದಳು. ತನ್ನ ವಿದ್ಯಾಭ್ಯಾಸದ ನಂತರ ನೌಕರಿಗೂ ಸೇರಿದಳು. ಇವಳಲ್ಲಿ ಶಿಕ್ಷಣ ಇದ್ದುದರಿಂದ ತನ್ನ ಮುಂದಿನ ಭವಿಷ್ಯದ ನಿರ್ಧಾರ ಕೈಗೊಳ್ಳುವಂತಹ ಸಾಮರ್ಥ್ಯ ಪಡೆದಿದ್ದಳು. ತನ್ನ ವಿದ್ಯಾಭ್ಯಾಸ ಹಾಗೂ ಉದ್ಯೋಗವನ್ನು ಕುರಿತು ನೂರಾರುಜನ ಮಾತನಾಡಿದರು. ಯಾರ ಮಾತಿಗೂ ತಲೆಕೆಡಿಸಿಕೊಳ್ಳಲಿಲ್ಲ. ತನ್ನ ಉದ್ಯೋಗವನ್ನಂತೂ ಬಿಡಲಿಲ್ಲ. ಇವಳು ಶಿಕ್ಷಣವನ್ನು ಪಡೆದುದ್ದರಿಂದ ಒಳಿತು ಕೆಡಕುಗಳ ಬಗ್ಗೆ ಯೋಚಿಸಿದ್ದಳು. ವ್ಯವಸ್ಥೆಯನ್ನು ಮುರಿಯುವ ಪ್ರಯತ್ನ ಇವಳಲ್ಲಿ ಕಂಡುಬಂದಿದೆ. ವ್ಯವಸ್ಥೆಯಲ್ಲಿನ ಕೆಲವು ನಿರ್ಬಂಧಗಳನ್ನು ಮುರಿಯುವಂತಹ ಪ್ರಯತ್ನವೂ ಇದೆ. ತನ್ನ ಉದ್ಯೋಗ ಮದುವೆಗೆ ಅಡಿಯಾದಾಗ ಅವಳು ಹೀಗೆ ನುಡಿಯುತ್ತಾಳೆ. 'ನನಗೆ ಮದುವೆ / ಗಂಡನಿಲ್ಲದಿದ್ದರೂ ಪರವಾಗಿಲ್ಲ. ಉದ್ಯೋಗವನ್ನಂತೂ ಬಿಡುವುದಿಲ್ಲ. ನನ್ನ ಆಯ್ಕೆ ಉದ್ಯೋಗ ಎಂದು ತಿಳಿಸುತ್ತಾಳೆ.'' ಆದರೆ ತನ್ನ ತಾಯಿಯ ಬಲವಂತದಿಂದ ಮದುವೆಯಾಗಲು ಒಪ್ಪುತ್ತಾಳೆ. ಕೆಲಸ ಬಿಡಲು ಮಾತ್ರ ಒಪ್ಪುವುದಿಲ್ಲ.

''ಖೆಡ್ಡಾ'' ಎನ್ನುವಂತಹ ಕತೆಯಲ್ಲಿ ಶೈಲಿನಿ ಕೇಂದ್ರ ಪಾತ್ರದಲ್ಲಿ ಕಾಣಿಸುತ್ತಾಳೆ. ಇವಳು ಉನ್ನತ ಶಿಕ್ಷಣವನ್ನು ಪಡೆಯಬೇಕೆಂಬ ಆಸೆ ಶೈಲಿನಿಯ ತಂದೆಗಿತ್ತು. ಸ್ವತಃ ಶೈಲನಿಗೂ ಇತ್ತು. ಆದ್ದರಿಂದ ಶೈಲಿನಿಯ ಪದವಿ ಮುಗಿದಕೂಡಲೇ ಮುಂದಿನ ವಿದ್ಯಾಭ್ಯಾಸವನ್ನು ಕುರಿತು ಈಕೆಯ ತಂದೆ ವಿಚಾರಿಸುತ್ತಾಳೆ. ಇವಳು ತನ್ನ ಇಚ್ಛೆಯಂತೆ ಬಿ.ಎಡ್‌ಪದವಿ ಪಡೆಯಲು ಮಂಗಳೂರಿನ ಕಾಲೇಜಿಗೆ ಸೇರಿದಳು. ಇವಳ ಆಲೋಚನೆಗಳು ಬಹಳ

ಸರಳವಾಗಿದ್ದವು. ತನ್ನ ಬಾಳಸಂಗಾತಿಯನ್ನು ಕುರಿತು ಹಲವು ರೀತಿಯಲ್ಲಿ ಕನಸ್ಸು ಕಾಣುತ್ತಿದ್ದಳು. ಜೊತೆಗೆ ಹಲವು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಳು. ಅಷ್ಟೇ ಅಲ್ಲದೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ಹಲವು ಕನಸ್ಸುಗಳನ್ನು ಕಟ್ಟಿಕೊಂಡಿದ್ದವಳು.ಇದರಿಂದ ಇವಳಲ್ಲಿ ಬದಲಾವಣೆ ಕಾಣಿಸಿಕೊಂಡಿತು. ಹೆಣ್ಣು ಶಿಕ್ಷಿತಳಾಗಲು ಹಿಂದೆ ಇದ್ದಂತಹ ಎಲ್ಲಾ ಅಡೆತಡೆಗಳೂ ಇಂದೂ ತನ್ನ ರೂಪವನ್ನು ಬದಲಾಯಿಸಿಕೊಂಡಿತ್ತು. ಅಷ್ಟೇ ಅಲ್ಲದೆ ಜನರ ಆಲೋಚನೆಗಳಲ್ಲಿಯೂ ಅಲ್ಪಸ್ವಲ್ಪ ಬದಲಾವಣೆಗಳು ಇತ್ತು. ಶೈಲನಿಯ ಮಾತಿನಲ್ಲಿಪುರುಷ ಜಗತ್ತಿನ ದಬ್ಬಾಳಿಕೆಯ ವಿರುದ್ಧ ಬಂಡಾಯದ ದ್ವನಿ ಇದೆ.ಇವಳು ಪುರುಷ ಪ್ರಧಾನ ಜಗತ್ತಿನಲ್ಲಿ ಪುರುಷರ ಮಧ್ಯೆ ಬದುಕಿದ್ದರೂ ಒಬ್ಬ ಪುರುಷನನ್ನು ತಿರಸ್ಕರಿಸುತ್ತಾಳೆ.

ಅಧ್ಯಾಯ -೩

ಸಾರಾರವರ ಕಥೆಗಳಲ್ಲಿನ ಪುರುಷ ಜಗತ್ತು

ಸಾರಾ ಅಬೂಬಕ್ಕರ್‌ರವರ ಕಥೆಗಳ ಅಧ್ಯಯನದಿಂದ ನನಗೆಹಲವು ಪ್ರಪಂಚಗಳ ಪರಿಚಯವಾಗಿದೆ. ಸಾರಾರವರ ಕಥೆಗಳಲ್ಲಿ ಮೂಡಿ ಬಂದಿರುವ ಸಂವೇದನೆಗಳನ್ನು ಹಾಗೂ ಕೆಲವೊಂದು ವಿವರಗಳನ್ನು ನೋಡಿದರೆ ಅದು ಮುಸ್ಲಿಂ ಧರ್ಮದಲ್ಲಿ ಇರುವ ನ್ಯೂನತೆಗಳಿಗೆ, ಆಚಾರಗಳಿಗೆ, ಕರುಣಾಜನಕ ಪದ್ಧತಿಗಳಿಗೆ ಹಿಡಿದ ಕನ್ನಡಿಯಂತಿವೆ. ಸಾರಾರವರು ತಮ್ಮ ಕಥೆಗಳಲ್ಲಿ ಮುಸ್ಲಿಂ ಹೆಣ್ಣುಮಕ್ಕಳು ಪುರುಷ ದಬ್ಬಾಳಿಕೆಗೆ ತುತ್ತಾಗಿ ಮಾನಸಿಕವಾಗಿ ಬಳಲುವ ಅಷ್ಟೇ ಅಲ್ಲದೆ ತಮ್ಮ ಸ್ವಾತಂತ್ರ್ಯದಲ್ಲಿ ಬದುಕಲು ಆಗದೆ ಇರುವಂತಹ ಸ್ಥಿತಿಯ ಚಿತ್ರಣವನ್ನು ಕಾಣಬಹುದಾಗಿದೆ. ಅಂದರೆ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಚ್ಚಿನ ಸ್ಥಾನಮಾನಗಳ ಚಿತ್ರಣ ಸಾರಾರವರ ಕಥೆಗಳಲ್ಲಿ ಅನಾವರಣಗೊಂಡಿದೆ.

ನಮ್ಮ ದೇಶ ಪುರುಷ ಪ್ರಧಾನ ದೇಶ. ಇಲ್ಲಿ ಹೆಣ್ಣಿಗೆ ಹೋಲಿಸಿ ನೋಡಿದರೆ ಗಂಡಿಗೆ ಹೆಚ್ಚು ಬೆಲೆ, ಪ್ರಾಮುಖ್ಯತೆ ಅಷ್ಟೇ ಅಲ್ಲ ಎಲ್ಲಾ ಜಾತಿ, ವರ್ಗ, ಸಮಾಜದಲ್ಲಿಯೂ ಪುರುಷನ ಆಳ್ವಿಕೆ, ದಬ್ಬಾಳಿಕೆ ನಡೆಯುತ್ತಿರುವುದನ್ನು ನಾವು ನೋಡಬಹುದು. ಇದನ್ನು ಸಾಕಷ್ಟು ಹೆಣ್ಣುಮಕ್ಕಳು ತಿಳಿದು ಏನೂ ಮಾಡಲಾಗದ ಸ್ಥಿತಿಯಲ್ಲಿ ಬದುಕುತ್ತಿರುವುದನ್ನು ನೋಡಬಹುದು. ಸಾರಾರವರ ಕಥೆಗಳಲ್ಲಿ ಕಾಣುವ ಪುರುಷ ಜಗತ್ತು ಊಹಾಪೋಹಗಳಲ್ಲ. ಸ್ವತಃ ಮುಸ್ಲಿಂಧರ್ಮ ಸಮುದಾಯಗಳಿಂದ ಬಂದಿರುವ ನನಗೆ ಸಾರಾರವರ ಕಥೆಗಳು ತೀರಾ ಹತ್ತಿರವೆನಿಸುತ್ತವೆ. ಇವೆಲ್ಲವುಗಳನ್ನು ಅವಲೋಕಿಸಿದಾಗ ಬೇರೆ ಧರ್ಮ ಹಾಗೂ ಸಮಾಜದಲ್ಲಿರುವ ಪುರುಷ ದಬ್ಬಾಳಿಕೆ, ಶೋಷಣೆ, ಅವಹೇಳನಗಳೆಲ್ಲವೂ ಮುಸ್ಲಿಂ ಧರ್ಮದಲ್ಲಿ ಅಧಿಕವಾಗಿವೆ ಎಂದು ಹೇಳಬಹುದು. ಇವುಗಳೆಲ್ಲವನ್ನು ಇವರ ಕಥೆಗಳಲ್ಲಿ ಬರುವ ನಿದರ್ಶನಗಳ ಮೂಲಕ ತಿಳಿಯಬಹುದು. ಇವರ ಕಥೆಗಳು ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದಿವೆ. ಮುಸ್ಲಿಂ ಧರ್ಮದಲ್ಲಿ ''ಹೆಂಡತಿಯನ್ನು ಬಿಗಿ ಮುಷ್ಟಿಯಲ್ಲಿಟ್ಟುಕೊಳ್ಳಲು ಗಂಡ ಕಂಡುಕೊಂಡ ಅಸ್ತ್ರವೇ ಈ **ತಲಾಖ್** ಪದ್ಧತಿ''. ಇಂತಹ ಪದ್ಧತಿಯ ಅನಾವರಣ ಸಾರಾರವರ ಕಥೆಗಳಲ್ಲಾಗುತ್ತದೆ. ಮುಸ್ಲಿಂ ಸಮಾಜದಲ್ಲಿ

ವಿವಾಹಿತ ಹೆಣ್ಣನ್ನು ಶೋಷಿಸುವ ಗಂಡು ತಲಾಖ್ ಪದ್ಧತಿಯನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಾನೆ.

ಪಿತೃಪ್ರಧಾನ ಎನ್ನುವುದು ಗಾಳಿಯಲ್ಲಿ ಇರುವಂಥಹದಲ್ಲ. ಅದು ವರ್ತಮಾನ ಸಂಗತಿಗಳೊಡನೆ ತಳಕು ಹಾಕಿಕೊಂಡು ಕಾಲ, ದೇಶ, ಸಂಸ್ಕೃತಿಗಳಿಗೆ ತಕ್ಕಂತೆ ಬದಲಾಗುತ್ತಿರುವಂತೆ ಸಾರಾರವರ ಕಥನದಲ್ಲಿ ವರ್ಣಿಸಲ್ಪಟ್ಟ ಪುರುಷ ಪ್ರಧಾನ ವ್ಯವಸ್ಥೆಯೂ ಅಷ್ಟೆ, ತನ್ನ ಇರುವಿನ ವಾಸ್ತವಾಂಶಗಳೊಡನೆ ಹೆಣೆದುಕೊಂಡಿದೆ.

ಸಾರಾರವರ ಕಥೆಗಳಿಗೆ ದಕ್ಷಿಣ ಕನ್ನಡ, ಕೇರಳ ಗಡಿಯ ಜನರ ಸಂಕಷ್ಟದ ಬದುಕು ಹಿನ್ನೆಲೆಯಾಗಿದೆ. ಬಡತನ, ಅನಕ್ಷರತೆ, ಮೌಢ್ಯ ತಾಂಡವಾಡುವಂತಹ ಪರಿಸರ ಅದು ಇದರೊಂದಿಗೆ ಮುಸಲ್ಮಾನರ ಬದುಕು ಧಾರ್ಮಿಕ ಆಚರಣೆ, ಮೌಲ್ವಿಗಳ ಹೇಳಿಕೆಯಂತೆ ಸಾಗುವಂತಹದ್ದು. ಹೀಗಾಗಿ ಇವರ ಕಥೆಗಳಲ್ಲಿ ಕಾಣುವ ಪಿತೃವ್ಯವಸ್ಥೆಯೂ ಬಡತನ ಧರ್ಮ ಮತ್ತು ಅನಕ್ಷರತೆಗಳೊಡನೆ ಒಪ್ಪಂದ ಮಾಡಿಕೊಂಡಿದೆ. ಇದೆಲ್ಲವನ್ನು ಸಾರಾರವರು ತಮ್ಮ ಗಾಢವಾದ ಸ್ತ್ರೀ ಸಂವೇದನೆಯೊಡನೆ ಕಥನ ರೂಪಕ್ಕಿಳಿಸಿದ್ದಾರೆ. ಪುರುಷಾಧಿಕಾರ ಎನ್ನುವುದು ಧರ್ಮ, ದೇಶ ವ್ಯತ್ಯಾಸಗಳನ್ನು ಮಿಗಿಹರಿಯುತ್ತಾದರೂ ಇಲ್ಲಿ ಮುಸ್ಲಿಂ ಧರ್ಮದ ಸ್ತ್ರೀಯರ ಮೇಲಿನ ಕಟ್ಟುಪಾಡುಗಳಿಂದಾಗಿ ಬೇರೆಯೇ ಆದ ಒಂದು ಸ್ವರೂಪ ತಳೆಯುವುದನ್ನು ನೋಡಬಹುದು. ಕೆಲವು ಉದಾಹರಣೆಗಳ ಮೂಲಕ ಇದನ್ನು ಸ್ಪಷ್ಟ ಪಡಿಸುತ್ತೇನೆ. ಚಪ್ಪಲಿಗಳು, ಧರ್ಮ ಬಲೆಬೀಸಿದಾಗ ಮುಂತಾದ ಕಥೆಗಳಲ್ಲಿ ತಂದೆ ಗಂಡಂದಿರಿಗೆ ಮತ್ತು ಧರ್ಮಗುರುಗಳಿಗೆ ಅತ್ಯಂತ ಹೆಚ್ಚಿನ ಅಧಿಕಾರವಿದೆ. ಹೆಣ್ಣುಮಕ್ಕಳು ಘೋಷಾ ಹಾಕುವ ವಿಷಯದಿಂದ ಹಿಡಿದು ತಲಾಖ್‌ನ ವಿಷಯದವರೆಗೆ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವವರು ಗಂಡಂದಿರು, ಅಪ್ಪಂದಿರು ಮತ್ತು ಮೌಲ್ವಿಗಳು ಒಟ್ಟಾರೆಯಾಗಿ ಪುರುಷ ಸಮುದಾಯ ಎಂಬ ಧ್ವನಿ ಇದೆ.

ಸಾರಾರವರ 'ಚಪ್ಪಲಿಗಳು' ಎಂಬ ಕತೆಯಲ್ಲಿ ಗಂಡಿನ ಮನೋಧರ್ಮವನ್ನು ನೋಡಬಹುದು. ತಂದೆಯ ಸ್ಥಾನದಲ್ಲಿದ್ದ ಹಸನ್‌ಬ್ಯಾರಿ ಸ್ವತಃ ತನ್ನ ಅಳಿಯನಿಗೆ ಹೀಗೆ ಉಪದೇಶಿಸುತ್ತಾನೆ.

''ಹೆಂಗಸರನ್ನು ಕಾಲಿನ ಚಪ್ಪಲಿಯಂತೆ ಬಳಸಿಕೊಳ್ಳಬೇಕು. ಬೇಕಾದಾಗ ಉಪಯೋಗಿಸಿ ಬೇಡವಾದಾಗ ಮೂಲೆಯಲ್ಲಿ ಬಿಟ್ಟುಬಿಡಬೇಕು. ಅದನ್ನು ಬಿಟ್ಟು ತಲೆಯ ಮೇಲಿಟ್ಟುಕೊಂಡರೆ ಹೇಗೆ ? ಚಪ್ಪಲಿಯನ್ನು ಎಲ್ಲಿಡಬೇಕೋ ಅಲ್ಲೇ ಇಡಬೇಕು.''[೧]

ಮೇಲಿನ ಮಾತುಗಳಿಂದ ದೌರ್ಜನ್ಯ ಪೂರಿತ ಗಂಡಿನ ಮನೋಧರ್ಮವನ್ನು ಕಾಣಬಹುದು. ಇಲ್ಲಿ ಗಂಡು ಹೆಣ್ಣಿಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸಿಸುವ ಪರಿಯನ್ನು ನೋಡಬಹುದು. ಗಂಡು ಎಂದಿಗೂ ಹೆಣ್ಣನ್ನು ಮನುಷ್ಯಳ ರೀತಿ ಪರಿಗಣಿಸಲೇ ಇಲ್ಲ. ಅವಳನ್ನು ವಸ್ತುವಿನ ಹಾಗೆ ಕಂಡಿರುವುದನ್ನು ನೋಡಬಹುದು. ಬೇಕಾದಾಗದ ಬಳಸಿಕೊಂಡು ಬೇಡವಾದಾಗ ಆಕೆಗೆ ಕಸದ ರೀತಿಯಲ್ಲಿ ತಳ್ಳಿಹಾಕುತ್ತಿದ್ದನು. ಹೀಗಾಗಿ ಇವರ ಕಥೆಗಳಲ್ಲಿ ಹೆಣ್ಣು ಬಲಿಪಶು ಮಾತ್ರ. ಗಂಡು ಹೆಣ್ಣನ್ನು ಒಂದು ಚಪ್ಪಲಿಯಂತೆ ನೋಡುತ್ತಿದ್ದನು. ಇವಳಿಗೆ ಪ್ರತಿಯೊಂದು ಹಂತದಲ್ಲಿಯೂ, ವಲಯಗಳಲ್ಲಿಯೂ, ಧರ್ಮದ ಹೆಸರಿನಲ್ಲಿ ಆಚಾರ ನಿಯಮಗಳ ಹೆಸರಿನಲ್ಲಿ ಘೋಷಾದ ಪರದೆಯಲ್ಲಿ ಕಟ್ಟಿ ಬಂಧಿಸಿರುವುದನ್ನು ನೋಡಬಹುದಾಗಿತ್ತು. ಇವತ್ತಿಗೂ ಮುಸ್ಲಿಂ ಕುಟುಂಬಗಳಲ್ಲಿ ಈ ರೀತಿ ಬದುಕುತ್ತಿರುವ ಎಷ್ಟೋ ಹೆಣ್ಣು ಮಕ್ಕಳನ್ನು ನೋಡಬಹುದಾಗಿದೆ. ಇದಕ್ಕೆ ಉದಾಹರಣೆಯಾಗಿ ಇದೇ ಕಥೆಯಲ್ಲಿ ಅದೇ ಹಸನ್ ಬ್ಯಾರಿ ಹೇಳುವ ಮಾತನ್ನು ನೋಡಬಹುದು. ಹಸನ್‌ಬ್ಯಾರಿಯ ಮಗಳಾದ ಸಮೀರಾ ಇವಳದ್ದೇ ಕೇಂದ್ರ ಪಾತ್ರ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಸಿಲುಕಿ ಏನೂ ಮಾತನಾಡದೆ ಮಾನಸಿಕವಾಗಿ ಬಳಲುವ ಅವಳು. ಕೊಲ್ಲಿ ಪ್ರದೇಶದಲ್ಲಿ ಕೆಲಸಮಾಡುತ್ತಿರುವ ಹುಡುಗನೊಂದಿಗೆ ಮದುವೆಯಾಗಿದ್ದಳು. ಅವನು ಅಲ್ಲಿಂದ ಮರಳಿ ಇಲ್ಲಿಗೆ ಬರುವಾಗ ಸಮೀರ ತನ್ನ ಗಂಡನನ್ನು ಬರಮಾಡಿಕೊಳ್ಳಲು ಮಂಗಳೂರಿಗೆ ಬರುವುದಾಗಿ ತನ್ನ ಅಮ್ಮನ ಹತ್ತಿರ ಹೇಳಿದಾಗ ಅದನ್ನು ಕೇಳಿಸಿಕೊಂಡ ಹಸನ್‌ಬ್ಯಾರಿ ಹೀಗೆ ಹೇಳುತ್ತಾನೆ.

''ಏನು ? ವಿಮಾನ ನಿಲ್ದಾಣಕ್ಕೆ ಬರ್‍ತಾಳಾ ನಿನ್ನ ಮಗಳು? ಅಲ್ಲಿ ಅಷ್ಟು ಜನ ಗಂಡಸರ ಮಧ್ಯೆ ಇವಳು ಹೋಗುವುದೇ ಏನು ಮಾನಮರ್ಯಾದೆ ಎಲ್ಲಾ ಬಿಟ್ಟು ಬಿಟ್ಟಳಾ'' ಎಂದು ಕೇಳುತ್ತಾನೆ. ಈ ಸಮುದಾಯದಲ್ಲಿ ಹೆಣ್ಣಿನ ಬದುಕು ಹೇಗೆ ಸಾಗುತ್ತಿದೆ

---

೧. 'ಚಪ್ಪಲಿಗಳು' ಕಥಾಸಂಕಲನ. ಪುಟ-೬

ಎಂಬುದನ್ನು ಮೇಲಿನ ಮಾತುಗಳಿಂದ ಗುರುತಿಸಬಹುದು. ಅಷ್ಟೇ ಅಲ್ಲದೆ ಇವೆಲ್ಲವನ್ನು ಹೆಣ್ಣು ಒಪ್ಪಿಗೊಂಡು ಏನೂ ಮಾಡಲಾಗದೆ ಬದುಕುತ್ತಿರುವ ಸ್ಥಿತಿ. ಗಂಡಸರ ಮತ್ತು ಧರ್ಮದ ಪ್ರಾಧಾನ್ಯ ಎಷ್ಟಿರುತ್ತದೆಂದರೆ ಸ್ತ್ರೀಯರ ಮನಸ್ಸುಗಳು ಸಹ ಸ್ತ್ರೀ ವಿರೋಧಿ ನೆಲೆಯಲ್ಲೇ ಯೋಚಿಸುತ್ತವೆ. ಇನ್ನೊಂದು ಕುತೂಹಲಕರ ಅಂಶವೆಂದರೆ ಈ ಎಲ್ಲಾ ಶೋಷಿತ ಸಂಗತಿಗಳ ಜೊತೆ ಆಧುನಿಕತೆಯು ಸೇರಿದರೆ ಎಂತಹ ದುರಂತ ಘಟಿಸುತ್ತವೆ ಎಂಬುದನ್ನು 'ವಿಜ್ಞಾನ ಭವಿಷ್ಯ ನುಡಿದಾಗ' ಕಥೆಯಲ್ಲಿ ಸಾರಾ ಗುರುತಿಸುತ್ತಾರೆ. ಇಬ್ಬರು ಹೆಣ್ಣು ಮಕ್ಕಳನ್ನು ಹೆತ್ತಿದ್ದಕ್ಕಾಗಿ ಪದೇ-ಪದೇ ಗಂಡನಿಂದ ಬಯ್ಯಿಸಿಕೊಳ್ಳುವ ಮಾಲಿನಿ ಮೂರನೆಯ ಸಲ ಬಸಿರಾದಾಗ ಭ್ರೂಣ ಪರೀಕ್ಷೆ ಮಾಡಿಸಿಕೊಂಡು ಗರ್ಭಪಾತ ಮಾಡಿಸಿಕೊಳ್ಳಬೇಕಾಗುತ್ತವೆ. ವಿಜ್ಞಾನ ಮುಂದುವರೆದಿರುವ ಫಲವಾಗಿ ಸಾಕಷ್ಟು ಆವಿಷ್ಕಾರಗಳು ಜರುಗಿದವು. ಇದರಿಂದ ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಬೆಳವಣಿಗೆಯಾಗಿದ್ದರಿಂದ ಇದರ ಉಪಯೋಗ ಪಡೆದುಕೊಂಡು ಮಾಲಿನಿ ತನ್ನ ಗರ್ಭದಲ್ಲಿ ಬೆಳೆಯುತ್ತಿರುವ ಮಗು ಹೆಣ್ಣು ಎಂದು ತಿಳಿದಾಗ ಗಂಡಿನ ಭಯದಿಂದ ಅವನ ಅವಹೇಳನದ ಮಾತುಗಳಿಗೆ ಹೆದರಿ ಗರ್ಭಪಾತ ಮಾಡಿಸಿಕೊಳ್ಳುತ್ತಾಳೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಹೆಣ್ಣು ಹುಟ್ಟಿ ಬದುಕುವ ಸಂದರ್ಭದಲ್ಲಿ ಶೋಷಣೆ, ನೋವು, ಅವಮಾನವನ್ನು ಅನುಭವಿಸುವುದಿಲ್ಲ. ಬದಲಾಗಿ ಅವಳಿಗೆ ಇವೆಲ್ಲವೂ ಹುಟ್ಟುವುದಕ್ಕಿಂತ ಮುಂಚಿತವಾಗಿಯೇ ಅರಿವಾಗದ ರೀತಿಯಲ್ಲಿಯೇ ಪ್ರಾರಂಭವಾಗಿರುತ್ತವೆ. ಹಾಗಾಗಿ ಹೆಣ್ಣು ಹುಟ್ಟಿದ ಮೇಲೆ ಪುರುಷ ಕೇಂದ್ರಿತ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡಬೇಕಾಗಿಲ್ಲ ಬದಲಾಗಿ ಅವಳು ತಾಯಿಯ ಗರ್ಭವ್ಯವಸ್ಥೆಯಲ್ಲಿಯೇ ತನ್ನ ಹುಟ್ಟಿಗಾಗಿಯೂ ಹೋರಾಟ ಮಾಡಲೇ ಬೇಕಾದ ಸ್ಥಿತಿ ಇದೆ.

ಸಾರಾರವರ 'ಗಗನ ಸಖಿ' ಕಥಾ ಸಂಕಲನದ 'ಕುಪ್ಪಸ ತೊಟ್ಟವಳು' ಎಂಬ ಕಥೆಯಲ್ಲಿ ನಂಬಿಸಿ ಮೋಸ ಮಾಡುವ ಗಂಡಿನ ಮನೋಧರ್ಮವು ಕಾಣಿಸುತ್ತವೆ. ಇಲ್ಲಿ ಬರುವ ಭಟ್ಟರ ಮಗ ಕೆಳಜಾತಿಯ ಹೆಣ್ಣನ್ನು ಆಸೆಗಳಿಗೆ ಒಳಪಡಿಸಿ ಮದುವೆಯಾಗುತ್ತೀನಿ ಎಂದು ನಂಬಿಸಿ, ಸ್ನೇಹ, ನಟನೆ, ಮಾತುಗಳಲ್ಲಿ ಜೇನಿನ ಹೊಳೆ ಹರಿಸಿ ಕೈಗೊಂಡು ಮಗುವನ್ನು ನೀಡಿ ಮಾಯವಾಗುತ್ತಾನೆ. ಇತ್ತ ಮಾಲಿನಿಯು ಭಟ್ಟರ ಮಗ ಬರುವನೆಂದು

ಹಗಲಿರುಳು ದಾರಿ ನೋಡುತ್ತಾ 'ಎದೆಯಾಳದ ಆಶಾ ಜ್ಯೋತಿಗೆ ಭರವಸೆಯ ಎಣ್ಣೆ ಹುಯುತ್ತಾ' ದಿನ ನೂಕುತ್ತಾಳೆ. ಹೀಗೆ ಇದ್ದಂತಹ ಮಾಲಿನಿಗೆ ಒಂದು ದಿನ ವಿಷಯ ತಿಳಿಯುತ್ತದೆ. ಭಟ್ಟ ಬೇರೆ ಹೆಣ್ಣನ್ನು ಮದುವೆಯಾಗುತ್ತಿರುವ ವಿಷಯ, ಇದನ್ನು ತಿಳಿದು ಅವಳು ಯಾವುದೇ ಪ್ರತಿಭಟನೆ ಪ್ರತಿಕ್ರಿಯೆಯನ್ನಾಗಲೀ ಮಾಡುವುದಿಲ್ಲ. ಆ ಭಟ್ಟ ತನಗೆ ಬೇಕಾದಾಗ ಹೆಣ್ಣನ್ನು ಬಳಸಿಕೊಂಡು ನಂತರ ಅವಳನ್ನು ಬಿಟ್ಟುಬಿಡುವ ಪ್ರವೃತ್ತಿ ಅಷ್ಟೇ ಅಲ್ಲದೆ ಏನೂ ತಿಳಿಯದವನಂತೆ ನಟಿಸಿ ಮತ್ತೊಂದು ಮದುವೆಯೂ ಆಗುತ್ತಾನೆ. ಆತನಿಗೆ ತಾನು ಮಾಡಿರುವುದು ತಪ್ಪು ಎಂದು ಎಂದಿಗೂ ಅನಿಸಲೇ ಇಲ್ಲ ಅದರ ಬಗ್ಗೆ ಭಯವೂ ಇರಲಿಲ್ಲ ಅಷ್ಟೇ ಅಲ್ಲದೆ ಅವಳಿಗೆ ಒಲಿಸಿಕೊಳ್ಳುವಾಗ ಆಡಿದ ಮಾತುಗಳು ಅವಳನ್ನು ಬಳಸಿಕೊಂಡ ನಂತರ ಆಡಲಿಲ್ಲ.

ಸಾರಾರವರ ಇನ್ನೊಂದು ಪ್ರಮುಖ ಕಥೆ 'ನಿಯಮ-ನಿಯಮಗಳ ನಡುವೆ' ಇಲ್ಲಿಯೂ ವಿಶಿಷ್ಟವಾದ ಒಂದು ಪುರುಷ ಜಗತ್ತಿನ ಅನಾವರಣವಾಗಿರುವುದನ್ನು ನೋಡಬಹುದು. ಮೌಲ್ವಿಗಳ ಕೈಚಳಕ ಗಂಡನ ದಬ್ಬಾಳಿಕೆ, ತನ್ನ ತಾಯಿ ಮತ್ತು ತಮ್ಮನ ಚುಚ್ಚು ಮಾತುಗಳು ಧರ್ಮದ ನಿಯಮಗಳ ಪಾಲನೆ ಸಮಾಜದ ಕಟ್ಟುಪಾಡುಗಳು ಇವುಗಳ ಮಧ್ಯೆ ಸಿಲುಕಿ ಅವಳು ಸಾಯುವಂತಹ ಸ್ಥಿತಿ ನಿಜಕ್ಕೂ ಕರುಣಾಜನಕವಾಗಿದೆ. ಇಲ್ಲಿ ಪುರುಷ ಪ್ರಧಾನ ವ್ಯವಸ್ಥೆಯು ಕುಟುಂಬ ಜೀವನದಲ್ಲಿ ಹೆಣ್ಣು ಶೋಷಣೆಯ ಕೇಂದ್ರಬಿಂದುವಾಗಿದ್ದಾಳೆ. ಪರಿಸ್ಥಿತಿಗೆ ಒಳಗಾದ ಹೆಣ್ಣು ಹಲವಾರು ಅಮಾನವೀಯ ದಾರುಣ ದುರಂತಗಳಿಗೆ ಒಳಗಾಗುತ್ತಾಳೆ. ಕೃತಕವಾದ ಮತೀಯ ನಿಯಮಗಳನ್ನು ಪಾಲಿಸುವುದಕ್ಕಾಗಿ ಪ್ರಕೃತಿಸಹಜವಾದ ನಿಯಮಗಳನ್ನು ಗಾಳಿಗೆ ತೂರಿ ಪುರುಷ ದಬ್ಬಾಳಿಕೆ ಶೋಷಣೆಯ ದಾರಿಯನ್ನು ಅನುಸರಿಸುತ್ತಾರೆ. ಇಂತಹ ಸ್ಥಿತಿಗಳ ಸುಳಿಯಲ್ಲಿ ಸಿಕ್ಕಿದವಳು ಈ ಕಥೆಯ ಕೇಂದ್ರ ಪಾತ್ರವಾದಂತಹ ಜೊಹರಾ ಈಕೆಯ ಗಂಡ ಖಾದರ್ ಇವನು ತಲಾಖ್‌ನ್ನು ಒಂದು ಅಸ್ತ್ರವಾಗಿ ಬಳಸಿಗೊಳ್ಳುವುದನ್ನು ನೋಡಬಹುದು. ಒಂದು ಸಣ್ಣ ಕಾರಣಕ್ಕಾಗಿ ತನ್ನ ಹೆಂಡತಿಗೆ ತಲಾಖ್ ನೀಡುತ್ತಾನೆ. ಇವನು ಕೇಳಿದ ಒಡವೆಗಳನ್ನು ಕೊಡಲು ಒಪ್ಪದ ಜೊಹರಾಳನ್ನು ಬಹಳ ದೊಡ್ಡ ತಪ್ಪು ಮಾಡಿದಳೆಂಬಂತೆ ಕೈಬಿಡುವ ಪರಿಯನ್ನು ಗಮನಿಸಬಹುದು. ಖಾದರ್‌ನ ದಬ್ಬಾಳಿಕೆ ಮತ್ತು ದೌರ್ಜನ್ಯಕ್ಕೆ ಏನೂ ಮಾಡಲಾಗದೆ ಜೊಹರಾ ಕೊನೆಗೂ ದೇವನಿಗೆ ಪ್ರಿಯಳಾಗುತ್ತಾಳೆ. ಇಲ್ಲಿ ತಪ್ಪು

ಜೊಹರಳದಾಗಿರದೆ ಖಾದರ್‌ನದಾಗಿತ್ತು. ಆದರೆ ಶಿಕ್ಷೆ ಯಾಗುವುದು ಮಾತ್ರ ಜೊಹರಾಗೆ. ಒಟ್ಟಾರೆಯಾಗಿ ಇಲ್ಲಿ ಗಮನಿಸಲೇ ಬೇಕಾದ ಅಂಶವೆಂದರೆ ಖಾದರ್ ತಲಾಖ್‌ನ್ನು ಒಂದು ಅಸ್ತ್ರವಾಗಿ ಬಳಸಿ ಜೊಹರಾಳ ಸಾವಿಗೆ ಕಾರಣವಾಗುತ್ತಾನೆ. ಜೊಹರಾಳಿಗೆ ದೊರೆತ ಶಿಕ್ಷೆ ಅವಳ ಸಾವಿನಲ್ಲಿ ಅಂತ್ಯವಾಗುತ್ತದೆ. ವಿವಾಹಿತ ಹೆಣ್ಣನ್ನು ಶೋಷಿಸಲು ಇವರು ರೂಢಿಸಿಕೊಂಡಿರುವ ಪದ್ಧತಿಯೇ ತಲಾಖ್ ಎಂದು ಹೇಳಬಹುದು.

ಸಾರಾರವರ ಇನ್ನೊಂದು ಪ್ರಸಿದ್ಧ ಕಥೆಯಾದಂತಹ 'ಕಲ್ಲು ಬಂಡೆಯಲ್ಲಿ ಒಂದು ಒಸರು' ಎಂಬಲ್ಲಿ ವಿಭಿನ್ನ ಮನೋಧರ್ಮದ ಪುರುಷ ಜಗತ್ತು ಕಾಣಿಸಿಕೊಳ್ಳುತ್ತದೆ. ಭಿನ್ನ-ಭಿನ್ನ ಮನೋಸ್ಥಿತಿಯ ಗಂಡಸರನ್ನು ಕಾಣಬಹುದು.'ದುರಾಸೆಯ ಅಣ್ಣ ಹಾಗೂ ತನ್ನ ಹೆಂಡತಿಯ ಪಾಲಿನ ಆಸ್ತಿ ಸಿಗಲಿಲ್ಲವಲ್ಲಾ ಎಂದು ಒದ್ದಾಡುವ ಗಂಡನನ್ನು ಕಾಣುತ್ತೇವೆ. ಈ ಕಥೆಯ ಕೇಂದ್ರಪಾತ್ರ ಉಮರ್ ಕಾಕ ನದು ಈತ ಮನೆಯ ಹಿರಿಯ ಮಗ ಅಷ್ಟೇ ಅಲ್ಲದೆ ಶ್ರೀಮಂತನೂ ಕೂಡ ಈತನ ತಂಗಿ ನಫಿಸಾ ತಂದೆ ಸಾಯುವ ಸಂದರ್ಭದಲ್ಲಿ ಇವಳ ಪಾಲಿಗೂ ಒಂದಷ್ಟು ಆಸ್ತಿಯನ್ನು ಬರೆದಿಟ್ಟಿದ್ದರು. ಉಮರ್ ಮದುವೆಯ ಸಂದರ್ಭದಲ್ಲಿ ಕೊಡುತ್ತೇನೆ ಎಂದು ಕೊಡಲೇ ಇಲ್ಲ. ಇತ್ತ ಶ್ರೀಮಂತ ಮನೆಯ ಹುಡುಗಿ ಹೆಚ್ಚು ಆಸ್ತಿಯನ್ನು ತರುತ್ತಾಳೆ ಎಂದು ನಂಬಿ ಮದುವೆ ಮಾಡಿಕೊಂಡು ಹೋಗಿದ್ದವರು ಆಸ್ತಿ ಸಿಗಲಿಲ್ಲವೆಂದು ಪೀಡಿಸುತ್ತಾರೆ. ನಫೀಸಾಳಿಗೆ ಮದುವೆಯಾದ ಶಾಫಿ ಎರಡನೆಯ ದಿನವೇ ಹೀಗೆ ಕೇಳುತ್ತಾನೆ.

> ''ನೂರು ಮುಡಿ ಅಕ್ಕಿಯ ಗದ್ದೆ ನಿನ್ನ ಹೆಸರಿನಲ್ಲಿದೆಯೆಂದರು
> ಅದರ ಆಧಾರದ ಕಾಗದಪತ್ರ ಎಲ್ಲಿದೆ ?''

ಅಣ್ಣನ ದೌರ್ಜನ್ಯ ಹಾಗೂ ಗಂಡನ ದಬ್ಬಾಳಿಕೆಯ ಮಧ್ಯೆ ನಫೀಸಾ ನರಳುತ್ತಾಳೆ. ಗಂಡಸರ ತಪ್ಪಿದ್ದರೂ ನರಳುವವರು ಹೆಣ್ಣು. ತನ್ನ ಹೆಂಡತಿ ತನ್ನ ತವರ ಮನೆಯಿಂದ ಯಾವುದೇ ಆಸ್ತಿಯನ್ನು ತರಲಿಲ್ಲವೆಂದು ಮದುವೆಯಾದಂದಿನಿಂದ ಇಂದಿನವರೆಗೂ ತವರಮನೆಗೆ ಕಳುಹಿಸಲೇ ಇಲ್ಲ. ಮದುವೆಯಾಗಿ ಆರೇಳು ವರ್ಷ ಕಳೆದಿದ್ದರೂ ಒಂದು ಸಲವೂ ನಫೀಸಾ ತನ್ನ ತಾಯಿಯ ಮುಖವನ್ನು ನೋಡಲಿಲ್ಲ. ಈ ಕಡೆ ತಂಗಿಯ ಪಾಲನ್ನು ಕೊಡಲು ಇಷ್ಟಪಡದ ಅಣ್ಣ ಎಲ್ಲಿ ತನ್ನ ತಂಗಿಗೆ ಪಾಲನ್ನು ಕೊಡಬೇಕಾಗುತ್ತದೋ ಎಂದು

ಮದುವೆಯ ಸಂದರ್ಭದಲ್ಲಿ ಆದಂತಹ ಖರ್ಚು-ವೆಚ್ಚಗಳನ್ನೆಲ್ಲಾ ಒಂದೆಡೆ ಬರೆದಿಟ್ಟು ಆಗಾಗ ತನ್ನ ತಾಯಿಯ ಮುಂದೆ ತಂಗಿಗೆ ಯಾವುದೇ ಪಾಲನ್ನು ಕೊಡುವುದಿಲ್ಲ ಎಂದು ಪರೋಕ್ಷವಾಗಿ ಹೇಳುತ್ತಿರುತ್ತಾನೆ. ತನ್ನ ತಾಯಿಯ ಮುಂದೆ ಉಮರ್ ಹೇಳುವಂತಹ ಮಾತನ್ನು ಗಮನಿಸುವುದಾದರೆ

''ಹಾಂ....ಏನಂದೇ'' ? ಉಮರ್ ಕಣ್ಣರಳಿಸಿದನು. ಇನ್ನು ಅವಳ ಪಾಲೇ ? ಯಾವ ಪಾಲು ಇಡೀಊರಿಗೆ ಆಮಂತ್ರಣ ನೀಡಿ ಮದುವೆ ಮಾಡಿದೆಯಲ್ಲಾ ? ಈ ಹಣ ಎಲ್ಲಿಂದ ಬಂತೂಂತ ತಿಳಿದುಕೊಂಡೆ ಹಣವೇನು ಆಕಾಶದಿಂದ ಉದುರುತ್ತದಾ ? ಅಲ್ಲ ನೀನೇನು ಹೇಳ್ತಾ ಇದ್ದಿ ? ಎಂಟು ಮುಡಿ ಸಣ್ಣಕ್ಕಿ ಹತ್ತು ಆಡು, ನೂರಿನ್ನೂರು ಕೋಳಿ, ಎಣ್ಣೆ, ತುಪ್ಪ...... ''ಎಂದು ಒಂದೊಂದಾಗಿ ಮದುವೆಯ ಕೊನೆಯವರೆಗೂ ತಂದ ವಸ್ತುಗಳು ಆದ ಖರ್ಚುಗಳ ಲೆಕ್ಕಾಚಾರ ಕೊನೆಗೆ ಬೆಂಕಿಪೊಟ್ಟಣವನ್ನು ತಂದ ಲೆಕ್ಕವನ್ನು ಸೇರಿಸಿ ತನ್ನ ತಾಯಿಯ ಹತ್ತಿರ ಬಿಚ್ಚಿಡುತ್ತಾನೆ. ಇಂತಹ ಮಾತಿನಿಂದಲೇ ಗಮನಿಸಬಹುದು. ಅವನ ಧೋರಣೆ ಏನು ಎಂಬುದು ಮಗನ ಮಾತಿಗೆ ಏನನ್ನು ಹೇಳಲಾಗದೆ ತಾಯಿಯು ತನ್ನ ನೋವನ್ನು ಮನಸ್ಸಿನಲ್ಲಿಯೇ ಅಡಗಿಸಿಕೊಳ್ಳುತ್ತಾಳೆ. ತಪ್ಪು ಉಮರ್ ಮತ್ತು ಶಾಫಿಯದು ನರಳುತ್ತಿರುವವರು ಆ ಎರಡು ಹೆಣ್ಣುಜೀವಗಳು ಹೆಣ್ಣುಜೀವಗಳಿಗೆ ಇಲ್ಲಿ ಯಾವುದೇ ಬೆಲೆ ಇಲ್ಲ.

ಇನ್ನೊಂದು ಕಥೆಯಾದ ''ತಂಗಿಯ ಪತ್ರಗಳು'' ಎಂಬಲ್ಲಿ ಕಾಣುವ ಗಂಡಸ್ಸಿನ ಪ್ರವೃತ್ತಿ ಹಾಗೂ ಅನ್ಯಾಯಕ್ಕೆ ಒಳಗಾಗುವ ಹೆಣ್ಣಿನ ಕಥೆ. ನಿಜವಾಗಿ ನಡೆವ ಘಟನೆಗಳ ವಿವರ . ಸ್ವತಃ ಸಾರಾ ಅಬೂಬಕ್ಕರ್‌ರವರು ಗಗನಸಖಿ ಎಂಬ ಕಥಾಸಂಕಲನದ ಮುನ್ನುಡಿಯಲ್ಲಿ ಈ ಕತೆಯ ಘಟನೆಗಳು ನನಗೆ ತಿಳಿದ ಕುಟುಂಬಗಳಲ್ಲಿ ನಡೆದ ನಿಜವಾದ ಘಟನೆಗಳಾಗಿವೆ ಎಂದು ತಿಳಿಸಿದ್ದಾರೆ. ಇದೊಂದು ಬರಿಯ ಕತೆಯಲ್ಲ. ಹೆಣ್ಣುಮಗಳೋರ್ವಳ ಬದುಕನ್ನು ಅರಳುವ ಮೊದಲೇ ಗಂಡ ಮತ್ತು ಆತನ ತಂದೆ ಚಿವುಟಿ ಹಾಕಿದ ಘಟನೆ ಮಗಳೋರ್ವಳ ಜೀವನದ ವೃತ್ತಾಂತವನ್ನು ಚಿತ್ರಿಸುವ ಅಸಾಯಕ ತಾಯಿಯ ಚಿತ್ರಣ ತಂಗಿಯ ಪತ್ರಗಳು ಎಂಬ ಕಥೆ. ಬಹುಶಃ ಆ ಮಾವನಿಗೆ ಲೈಂಗಿಕವಾಗಿ ಸೊಸೆಯನ್ನು ಬಳಸಿಕೊಳ್ಳಲು ಸಾಧ್ಯವಾಗದ ಕಾರಣ ಆಕೆಗೆ ಮಗನಿಂದ ತಲಾಖ್ ಕೊಡಿಸಿದ್ದು ಈ ಕುತಂತ್ರಕ್ಕೆ ನ್ಯಾಯವಾದಿಗಳು ತಮ್ಮ ಕೊಡುಗೆ ನೀಡಿದುದನ್ನು ನೋಡಬಹುದು. ನಮ್ಮ

ನ್ಯಾಯವಾದಿಗಳು ಕೂಡ ಎಷ್ಟೊಂದು ಕೆಳಮಟ್ಟಕ್ಕಿಳಿದಿದ್ದಾರೆ ಎಂಬುದನ್ನು ಸಾಬೀತು ಪಡಿಸಿದೆ. ಈ ಕಥೆಯ ಕೇಂದ್ರ ಪಾತ್ರದಲ್ಲಿ ಮುಬೀನ ಕಾಣಿಸಿಕೊಳ್ಳುತ್ತಾಳೆ. ಇವಳು ವಿದ್ಯಾವಂತ ಹೆಣ್ಣುಮಗಳು. ತಂದೆಯನ್ನು ಕಳೆದುಕೊಂಡು ತನ್ನ ತಾಯಿಗೆ ಇಷ್ಟವಿಲ್ಲದಿದ್ದರೂ ಬಲವಂತದಿಂದ ಉನ್ನತ ವಿದ್ಯಾಭ್ಯಾಸವನ್ನು ಪಡೆಯುತ್ತಾಳೆ. ನಂತರ ತನ್ನ ಇಚ್ಛೆಯಂತೆ ಕೊಲ್ಲಿರಾಷ್ಟ್ರದಲ್ಲಿ ಉದ್ಯೋಗಸ್ಥನಾಗಿರುವ ಹುಡುಗನನ್ನು ಮದುವೆಯಾಗುತ್ತಾಳೆ. ಇಲ್ಲಿಂದ ಮುಂದಕ್ಕೆ ಮುಬೀನಾಳ ಜೀವನ ಇನ್ನೊಂದು ತಿರುವನ್ನು ಪಡೆದುಕೊಳ್ಳುತ್ತವೆ. ಮುಬೀನ ತನ್ನ ಬಾಳ ಸಂಗಾತಿ ಹಾಗೂ ಮದುವೆಯ ಬಗ್ಗೆ ನೂರಾರು ಕನಸ್ಸುಗಳನ್ನು ಕಟ್ಟಿಕೊಂಡಿದ್ದಳು. ಅದರಲ್ಲಿ ಯಾವುದೇ ಕನಸ್ಸುಗಳು ಪೂರ್ತಿಯಾಗಲಿಲ್ಲ. ಏಕೆಂದರೆ ಮದುವೆಯ ಮುಂಚೆ ಹಾಗೂ ಮದುವೆಯ ಸಂದರ್ಭದಲ್ಲಿ ಇದ್ದಂತಹ ಸಂತೋಷ ಮದುವೆಯಾದ ಮೇಲೆ ಇರಲಿಲ್ಲ. ಕೊಲ್ಲಿ ಪ್ರದೇಶದ ಗಂಡು (ದೂರದ ಬೆಟ್ಟ ನುಣ್ಣಗೆ ಎಂಬಂತೆ) ಚೆನ್ನಾಗಿ ದುಡಿಯಬಹುದು. ಒಳ್ಳೆಯ ಕೆಲಸದಲ್ಲಿ ಇರಬಹುದೆಂದು ನಂಬಿರುತ್ತಾಳೆ. ಅಲ್ಲಿಗೆ ಹೋದ ಮೇಲೆ ತಿಳಿಯುತ್ತದೆ. ಅವರು ಅಂತಹ ಹೇಳಿಕೊಳ್ಳುವ ಕೆಲಸದಲ್ಲೇನು ಇರಲಿಲ್ಲ. ಅದರಲ್ಲಿಯೇ ಅವಳು ಸಂಸಾರ ನಡೆಸುತ್ತಾಳೆ.ಸ್ವಲ್ಪ ದಿನಗಳ ನಂತರ ತನ್ನ ಊರಿಗೆ ಮರಳಿ ಬರುತ್ತಾಳೆ. ಬಂದರೂ ತವರುಮನೆಯಲ್ಲಿರಲಿಲ್ಲ.ಬದಲಾಗಿ ಅತ್ತೆ ಮಾವನ ಮನೆಯಲ್ಲಿಯೇ ಇರಬೇಕಾದ ಪ್ರಸಂಗ ಇತ್ತು. ಹಲವು ಕಾರಣಗಳಿಂದ ಪ್ರತ್ಯೇಕವಾದ ಮನೆಯನ್ನು ಮಾಡಿ ಅಲ್ಲಿ ಮಾವನ ಜೊತೆ ಮುಬೀನಳು ಇರಬೇಕಾದ ಸ್ಥಿತಿ ಬಂತು. ಆದರೆ ಇದಕ್ಕೆ ಮುಬೀನ ಒಪ್ಪುವುದಿಲ್ಲ. ಇವಳ ಒಪ್ಪದಿರುವಿಕೆಯೇ ಇವಳ ಬಾಳಿನ ಮುಳುಗುವಿಕೆಗೆ ಕಾರಣವಾದುದನ್ನು ನೋಡಬಹುದು. ಮಾವನ ದಬ್ಬಾಳಿಕೆ ಇವಳ ಮೇಲೆ ಹಲವು ರೀತಿಯಲ್ಲಿ ನಡೆಯುತ್ತಿತ್ತು. ಇವಳ ಒಡವೆಗಳನ್ನೆಲ್ಲಾ ಕಸಿದುಕೊಳ್ಳಲಾಯಿತು. ತನ್ನ ದುರುದ್ದೇಶಕ್ಕೆ ಸಹಕರಿಸಲಿಲ್ಲ ಎಂಬ ಕಾರಣಕ್ಕಾಗಿ ಮುಬೀನಾಳ ಮೇಲೆ ಇಲ್ಲಸಲ್ಲದ ಮಾತುಗಳನ್ನು ತನ್ನ ಮಗನಿಗೆ ಹೇಳಿ ಮಗನಿಂದ ತಲಾಖ್ ಕೊಡಿಸುವಲ್ಲಿ ಸಫಲನಾದ ಗಂಡು, ತನ್ನ ತಂದೆಯ ಮಾತನ್ನೇ ನಂಬಿ ಮುಬೀನಾಳಿಗೆ ತಲಾಖ್ ನೀಡಿಯೇ ಬಿಡುತ್ತಾನೆ.

ತಂದೆ ಮತ್ತು ಮಗನ ಕುತಂತ್ರಗಳಿಗೆ ನ್ಯಾಯವಾದಿಗಳೇ ಸ್ವತಃ ಸಹಾಯಮಾಡುತ್ತಾರೆ. ತಲಾಖ್ ನೀಡಲು ಅವರು ನೀಡುವಂತಹ ಕಾರಣ'ಮುಬೀನಾ

ಒಬ್ಬಳು ಮಾನಸಿಕ ರೋಗಿ, ಇಂತಹವಳೊಡನೆ ದಾಂಪತ್ಯ ಜೀವನ ಮುಂದುವರಿಸಲು ಸಾಧ್ಯವಿಲ್ಲ' ಎಂದು ತಮ್ಮ ಕುತಂತ್ರಗಳಿಗೆ ಮುಬೀನಾಳನ್ನು ರೋಗಿಯನ್ನಾಗಿ ಮಾಡುತ್ತಾರೆ. ಮುಬೀನ ಮತ್ತು ಆತನ ತಾಯಿ ತಲಾಖ್‌ನ್ನು ನಿರಾಕರಿಸಿದುದಕ್ಕೆ ತಂದೆ ಮಗ ಇಬ್ಬರೂ ಬೆದರಿಕೆ ಒಡ್ಡುತ್ತಾರೆ.

''ನೀವು ತಲಾಖ್‌ಗೆ ಒಪ್ಪಿಕೊಳ್ಳದಿದ್ದರೆ ನಾವು ಕೂಡ ಒಂದು ಕೈ ನೋಡುತ್ತೇವೆ'' ಇವರ ಬೆದರಿಕೆಗೆ ತಾಯಿ ಮತ್ತು ಮಗಳು ಏನೂ ಮಾಡಲಾಗದೆ ಸುಮ್ಮನಾಗುತ್ತಾರೆ. ಕೊನೆಗೆ ತಲಾಖ್ ಸಿಕ್ಕಿಯೇ ಬಿಟ್ಟಿತು. ಇವಳ ತಪ್ಪು ಮಾವನ ಕಾಮುಕ ಬಲೆಗೆ ಬೀಳದೆ ಇದ್ದದ್ದು.ಇದಕ್ಕೆ ತಾನು ಸೋತೆ ಎಂಬ ಕಾರಣದಿಂದ ಮಾವನಾದವನು ತನ್ನ ಕುತಂತ್ರದಿಂದ ತಲಾಖ್ ಕೊಡಿಸುತ್ತಾನೆ. ಒಟ್ಟಾರೆಯಾಗಿ ಗಂಡನ ಸ್ವಾರ್ಥ ಹಾಗೂ ದಬ್ಬಾಳಿಕೆಯಲ್ಲಿ ಮುಬೀನಾಳ ಬಾಳು ಅರಳುವ ಮುಂಚೆಯೇ ಬಾಡುತ್ತದೆ.

ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ವಿದ್ಯಾವಂತಳಾದ ಮುಬೀನಾಳೆ ಅನ್ಯಾಯಕ್ಕೆ ಒಳಗಾಗಿದ್ದಳು. ಆದರೂ ಏನೂ ಮಾಡಲಾಗದ ಸ್ಥಿತಿ. ಈ ಸಮಾಜದಲ್ಲಿ ವಿದ್ಯಾವಂತ ಮಹಿಳೆಯರೇ ಹೀಗೆ ಅನ್ಯಾಯಕ್ಕೆ ಒಳಗಾಗಿದ್ದರು ಎಂದಮೇಲೆ ಏನೂ ತಿಳಿಯದ ಬಡ, ಹಳ್ಳಿಯ ಹೆಣ್ಣುಮಕ್ಕಳ ಸ್ಥಿತಿ ಹೇಗಿರಬಹುದು. ಅವರು ಯಾವ ಯಾವ ರೀತಿ ಅನ್ಯಾಯಕ್ಕೆ ಒಳಗಾಗಿರಬಹುದೆಂದು ಮುಬೀನಾಳಿಗೆ ಆದಂತಹ ಸ್ಥಿತಿಯಿಂದಲೇ ಗ್ರಹಿಸಬಹುದು. ಇವತ್ತಿಗೂ ಮುಸ್ಲಿಂ ಸಮಾಜದಲ್ಲಿ ಸಾಕಷ್ಟು ಹೆಣ್ಣುಮಕ್ಕಳು ಈ ರೀತಿಯ ಅನ್ಯಾಯಕ್ಕೆ ಒಳಗಾಗುತ್ತಿದುದನ್ನು ನೋಡಬಹುದು. ಮುಸ್ಲಿಂ ಸಮಾಜದಲ್ಲಿ ಎಷ್ಟೋ ಹೆಣ್ಣುಮಕ್ಕಳು ತಲಾಖ್ ಎಂಬ ಅಸ್ತ್ರಕ್ಕೆಬಲಿಯಾಗಿ ಏನೂ ಮಾಡಲಾಗದೆ ಸುಮ್ಮನೆ ಬದುಕು ಕಳೆಯುತ್ತಿದ್ದಾರೆ. ಇಂತಹ ಕೃತ್ಯಗಳಿಗೆ ಮೌಲ್ವಿಗಳು ಸಹಕರಿಸುವುದನ್ನು ನೋಡಬಹುದು. ಇದಕ್ಕೆ ಸಮಾಜದಿಂದ ಯಾವುದೇ ವಿರೋಧವಿಲ್ಲ, ಏಕೆ ವಿರೋಧವಿಲ್ಲ ಎಂದರೆ ನಮ್ಮ ಸಮಾಜದಲ್ಲಿ ಗಂಡಿನ ಮಾತಿಗೆ ಹೆಚ್ಚಿನ ಬೆಲೆ ಇದೆ. ಅವನ ಮಾತನ್ನೇ ನಿಜವೆಂದು ನಂಬಿ ಹೆಣ್ಣನ್ನು ಸಂಶಯಾತ್ಮಕವಾಗಿ ನೋಡುವಂತಹ ಜನರು ಎಲ್ಲೆಲ್ಲೂ ಇರುವರು. ಇದೆಲ್ಲವೂ ನಿಜಕ್ಕೂ ಶೋಚನೀಯ.

ಮಹಿಳೆಯರನ್ನು ಪಾತಿವ್ರತ್ಯ ಮತ್ತು ಪರಾವಲಂಬಿ ಬದುಕಿನ ಚೌಕಟ್ಟಿನೊಳಗಿಟ್ಟುಕೊಂಡೇ ಆಕೆಗೆ ಸ್ಥಾನಮಾನ ಕಲ್ಪಿಸುವಂತಹ ನಿಯಮವನ್ನು ಪುರುಷ ಪ್ರಧಾನ ಸಮಾಜವು ಎಲ್ಲಾ ಸಮಾಜಗಳಲ್ಲಿ ಪಾಲಿಸಿಕೊಂಡು ಬಂದಿವೆ.

ಪುರುಷ ರಾಮನೂ ಆಗಬಹುದು, ಕೃಷ್ಣನೂ ಆಗಬಹುದು ಅಥವಾ ರಾವಣನೂ ಆದರೂ ಸಮಾಜ ಸಹಿಸಿಕೊಳ್ಳುತ್ತದೆ. ಆದರೆ ಸ್ತ್ರೀ ಮಾತ್ರ ಸೀತೆ ಅಥವಾ ಸಾವಿತ್ರಿ ಆಗಲೇಬೇಕು.ಇದು ಎಲ್ಲಾ ಸಮಾಜಗಳು ಒಪ್ಪಿಕೊಂಡು ಬಂದಂತಹ ನಿಯಮವಾಗಿದೆ. ಇಂತಹ ವಾತಾವರಣದಲ್ಲಿ ಹೆಣ್ಣು ಬದುಕುತ್ತಿರುವುದನ್ನು ನೋಡಬಹುದು.

ಇನ್ನೊಂದು ಪ್ರಸಿದ್ಧ ಕತೆಯಾದಂತಹ ''ಬೇಟೆ' ಎಂಬಲ್ಲಿ ಪುರುಷನ ದಬ್ಬಾಳಿಕೆ ಹಾಗೂ ಆತನ ಅನುಮಾನದ ದೃಷ್ಟಿಯಿಂದ ಹೆಣ್ಣಿನ ಜೀವನ ಹೇಗೆ ಕತ್ತಲಲ್ಲಿ ಮುಳುಗಿತ್ತು ಎಂಬುದರ ಚಿತ್ರ ಸಿಗುತ್ತದೆ. ಕಥೆಯ ನಾಯಕಿ ರಫೀನಾ. ವಿದ್ಯಾವಂತ ಹೆಣ್ಣು ಇವಳಿಗೆ ಪದವಿ ಮುಗಿಸುವ ಮೊದಲೇ ಕೊಲ್ಲಿ ಪ್ರದೇಶದಲ್ಲಿ ಉದ್ಯೋಗ ಮಾಡುತ್ತಿರುವ ಅನ್ವರ್‌ನ ಜೊತೆ ಮದುವೆಯಾಗುತ್ತದೆ. ಮದುವೆ ಸಂದರ್ಭದಲ್ಲಿ ಇದ್ದಂತಹ ಸಂತೋಷ, ಕುತೂಹಲ, ಕನಸ್ಸುಗಳು ಯಾವುದೂ ಎರಡು ವರ್ಷ ತುಂಬುವಷ್ಟರಲ್ಲಿ ಇರಲಿಲ್ಲ. ಅನ್ವರ್ ಒಬ್ಬ ವಿದ್ಯಾವಂತ ಎನ್ನುವುದಕ್ಕಿಂತ ಹೆಚ್ಚಾಗಿ ಅನುಮಾನದ ದಬ್ಬಾಳಿಕೆಯ ವ್ಯಕ್ತಿಯಾಗಿದ್ದ. ಇವನು ತನ್ನ ಹೆಂಡತಿಯ ಮೇಲೆ ಅನುಮಾನವನ್ನು ಪಟ್ಟು, ಅನುಮಾನದಿಂದಲೇ ಅವಳ ಜೀವನವನ್ನೇ ಕತ್ತಲೆಯಲ್ಲಿ ಮುಳುಗಿಸಿದ್ದಾನೆ. ಪಕ್ಕದ ಮನೆಯಲ್ಲಿ ವಾಸವಾಗಿದ್ದ ಹಮೀದ್‌ನ ಮೇಲೆ ಅನುಮಾನ ಪಟ್ಟು ತನ್ನ ಹೆಂಡತಿಗೂ ಈತನಿಗೂ ಸಂಬಂಧ ಕಲ್ಪಿಸಿ ಅವಳಿಗೆ ವ್ಯಭಿಚಾರಿಣಿ ಎಂಬ ಪಟ್ಟಕಟ್ಟಿ ಕರುಣೆ ಇಲ್ಲದೆ ಸೆರೆಮನೆಗೆ ದೂಡುತ್ತಾನೆ. ಇತ್ತ ರಫೀನಾ ಗಂಡನಿಂದ ತಿರಸ್ಕೃತಗೊಂಡು ಅಪವಾದವನ್ನು ಹೊತ್ತು ತನ್ನವರೇ ಇಲ್ಲದ ಜಾಗದಲ್ಲಿ ತನ್ನವರ ನೆನಪಿನಲ್ಲಿ, ವಿದೇಶಿ ಸೆರೆಮನೆಯಲ್ಲಿ ಕಣ್ಣೀರಿನ ಜೊತೆ ಕತ್ತಲೆಯ ಕೋಣೆಯಲ್ಲಿ ಕಾಲಕಳೆಯುವಂತಹ ಸಂದರ್ಭ ಬರುತ್ತದೆಂದು ಯಾವತ್ತೂ ಊಹಿಸಿರಲಿಲ್ಲ. ಅವಳು ಯಾವುದೇ ಅಪರಾಧವನ್ನು ಮಾಡದಿದ್ದರೂ ಅಪರಾಧಿ ಎಂಬ ಪಟ್ಟಕಟ್ಟಿಕೊಂಡು ಯಾರಿಗೂ ಮುಖ ತೋರಿಸದೆ ಬದುಕುವಂತೆ ಸ್ವತಃ ತನ್ನ ಗಂಡನೇ ಮಾಡಿಬಿಟ್ಟನು. ಎಲ್ಲೋ ಒಂದೆಡೆ ಆತನ ಅನುಮಾನದಿಂದ, ಕುತಂತ್ರದಿಂದ ಅರಳಿ ಬದುಕಬೇಕಿದ್ದ ರಫೀನಾಳ

ಜೀವನ ಸೆರೆಮನೆಯ ಕತ್ತಲಲ್ಲಿ ಏನನ್ನೋ ಯೋಚಿಸುತ್ತ ಬಾಡುವಂತಾಯಿತು. ಇವಳ ಮಾತಿಗೆ ಯಾರೂ ಸ್ಪಂದಿಸುವವರೂ ಇರಲಿಲ್ಲ. ಜೊತೆಗೆ ಧ್ವನಿಗೂಡಿಸುವವರೂ ಇರಲಿಲ್ಲ. ಅನ್ವರ್‌ನ ಮಾತೇ ನಿಜವೆಂದು ಭಾವಿಸುವವರಿದ್ದರು. ಸೆರೆಮನೆಯಲ್ಲಿ ಇವಳು ವ್ಯಭಿಚಾರಿಣಿ ಎಂದು ತಲೆಯನ್ನು ಬೋಳಿಸಲಾಯಿತು. ರಫೀನಾಗೆ ಇಂದು ಮನೆ, ಮಗು, ಗಂಡ, ಸಂಸಾರ, ನೀಳವಾದ ಉದ್ದನೆಯ ಕಡುಕಪ್ಪು ಬಣ್ಣದ ಕೂದಲುಗಳೆಲ್ಲವೂ ನೆನಪಾಗಿಯೇ ಕೊನೆಯವರೆವಿಗೂ ಉಳಿದುಕೊಳ್ಳುತ್ತವೆ.

'ಬಿಕರಿಯ ಮಾಲುಗಳು'ಎಂಬಲ್ಲಿ ಇನ್ನೊಂದು ವಿಚಿತ್ರ ಮನೋಭಾವದ ಗಂಡಸರು ಕಾಣಿಸುತ್ತಾರೆ. ಹೆಣ್ಣುಮಗಳನ್ನು ಕಾಲಿನ ಚೆಂಡನ್ನಾಗಿ ಮಾಡಿಕೊಂಡು ಒದೆಯುವ ಮನೋಧರ್ಮದವರು. ಹೆಣ್ಣು ಪ್ರಮುಖಳು ಎಂದು ಇವರು ಭಾವಿಸಲೇ ಇಲ್ಲ. ಇವರ ದೃಷ್ಟಿಯಲ್ಲಿ ಹೆಣ್ಣಿಗೆ ಏನೂ ತಿಳಿಯುವುದಿಲ್ಲ. ಇವಳು ಅಸಹಾಯಕಳು, ಅಪ್ರಮುಖಳು ಎಂದು ಭಾವಿಸಿದ್ದರು. ಇವಳ ಅನಿಸಿಕೆಗೆ ಯಾವುದೇ ಬೆಲೆಯಿಲ್ಲ. ಈ ಕಥೆಯ ಕೇಂದ್ರ ಪಾತ್ರ ಅಬ್ಬಾಸ್ ಹಾಜಿಯವರದು. ಇವರು ಶ್ರೀಮಂತರು. ಎಲ್ಲವನ್ನೂ ಹಣದಿಂದ, ಆಸ್ತಿಯಿಂದ ಅಳೆಯುವಂತಹ ಪ್ರವೃತ್ತಿ. ಸಲ್ಮಾನ್ ಇವರ ಮಗ. ತಂದೆಗೆ ವಿರುದ್ಧವಾದ ಮನೋಭಾವವನ್ನು ಉಳ್ಳವನು. ವೈದ್ಯಕೀಯ ಕಾಲೇಜಿನಲ್ಲಿ ಶಿಕ್ಷಣ ಪಡೆಯುತ್ತಿದ್ದ. ಎಲ್ಲರಲ್ಲಿಯೂ ಯಾವುದೇ ಬೇಧಭಾವ ಇಲ್ಲದೆ ಬೆರೆಯುತ್ತಿದ್ದ. ಇವನ ಪ್ರವೃತ್ತಿ ಅಬ್ಬಾಸ್‌ಹಾಜಿಗೆ ಹಿಡಿಸುತ್ತಿರಲಿಲ್ಲ. ಅಬ್ಬಾಸ್ ಹಾಜಿಯವರ ಹೆಂಡತಿ ಜುಲೈಕಮ್ಮ ಈಕೆ ಒಳ್ಳೆಯ ಗೃಹಿಣಿ. ಜೊತೆಗೆ ಮುಗ್ಧೆ. ಇವಳ ಮಾತಿಗೆ ಭಾವನೆಗಳಿಗೆ ಅಬ್ಬಾಸ್‌ಹಾಜಿಯವರಲ್ಲಿ ಯಾವುದೇ ಮಾನ್ಯತೆ ಮತ್ತು ಬೆಲೆ ಇಲ್ಲ. ಇವಳ ಮಾತಿಗೆ ಅಬ್ಬಾಸ್ ಹಾಜಿಯವರಲ್ಲಿ ಅಸಡ್ಡೆ, ತಿರಸ್ಕಾರ ಇದ್ದಿದ್ದೇ. ಯಾವಾಗಲೂ ತನ್ನ ಹೆಂಡತಿಯ ಮಾತಿಗೆ ಹೀಗೆ ಹೇಳುತ್ತಿದ್ದರು. ''ನಿನಗೆ ಅರ್ಥವಾಗುತ್ತದೆ. ನೀನು ಗೋರಿಯೊಳಗೆ ಹೋದ ಮೇಲೆ'' ಈ ಮಾತಿನಿಂದಲೇ ಗಮನಿಸಬಹುದು. ಅಬ್ಬಾಸ್ ಹಾಜಿ ತನ್ನ ಬುದ್ಧಿವಂತಿಕೆ ಹಾಗೂ ತಿಳುವಳಿಕೆಯ ಮುಂದೆ ತನ್ನ ಹೆಂಡತಿಯ ನಿಲುವು ಯೋಚನೆಗಳು ನಿಲ್ಲಲಾರದು ಎಂದು ತಿಳಿದಿದ್ದನು. ಜೊತೆಗೆ ಇತ್ತ ಜುಲೈಕಮ್ಮ ತನ್ನ ಗಂಡ ಹೇಳಿದ ಮಾತಗೆ ಪ್ರತ್ಯುತ್ತರವನ್ನು ಕೊಡದೆ ಸುಮ್ಮನಾಗುತ್ತಾಳೆ. ಆದರೆ ಅವಳಿಗೆ ಮನಸ್ಸಿನಲ್ಲಿ ತನ್ನ ಗಂಡನ ನಡವಳಿಕೆ, ವರ್ತನೆ ಹಾಗೂ ಮಾತುಗಳಿಗಾಗಿ ಸಾಕಷ್ಟು ನೋವುಗಳಿದ್ದವು. ಒಂದು ದಿನ

ತನ್ನ ಗಂಡನ ಮಾತು, ವರ್ತನೆ, ಬೈಗುಳಕ್ಕಾಗಿ ಬೇಸತ್ತು ಹೀಗೆ ಪ್ರತಕ್ರಿಯಿಸುತ್ತಾಳೆ. '' ಈ ದಿನ ನನ್ನನ್ನು ಎಷ್ಟೇನೇ ಬಾರಿ ಗೋರಿಯಲ್ಲಿಡುತ್ತೀರಿ ? ದಿನಾಲೂ ನಿಮ್ಮ ಈ ಉರಿಮುಖ ನೋಡುವುದಕ್ಕಿಂತ ಗೋರಿಯಲ್ಲಿ ಹಾಯಾಗಿ ಮಲಗಿಕೊಳ್ಳುವುದು ಒಳ್ಳೆಯದು ಎಂದು ದುಮುಗುಟ್ಟುತ್ತಾ ಜುಲೈಕಮ್ಮ ಒಳಸರಿದಳು.''

ತನ್ನ ಗಂಡನ ಮಾತುಗಳು, ಕೋಪ ತುಂಬಿದ ಮುಖ, ಬೈಗುಳಗಳನ್ನು ಕೇಳುತ್ತಾ ಬದುಕುವುದಕ್ಕಿಂತ ಸಾಯುವುದೇ ಲೇಸು ಎಂದು ಭಾವಿಸಿದಳು. ಈ ರೀತಿಯ ಮನೋಧರ್ಮದ ಅಬ್ಬಾಸ್ ಹಾಜಿಯ ಕ್ರೂರ ದೃಷ್ಟಿಗೆ ಒಳಗಾದವಳು ಇನ್ನೊಂದು ಪುಟ್ಟ ಹುಡುಗಿ ಹನೀಫನ ಮಗಳು ಸುಹರಾ. ಇವಳು ಹತ್ತನೇ ತರಗತಿಯನ್ನು ಮುಗಿಸಿ ಕಾಲೇಜು ಮೆಟ್ಟಿಲನ್ನು ಹತ್ತಿದವಳು. ಅಷ್ಟೇ ಅಲ್ಲದೆ ಯಾವುದೇ ಘೋಷ, ಪರದೆಯೊಳಗೆ ಇರಲಿಲ್ಲ. ತನ್ನ ಗೆಳತಿಯರ ಜೊತೆ ಓಡಾಡಿಕೊಂಡು ಇದ್ದವಳು. ಇದು ಅಬ್ಬಾಸ್‌ಹಾಜಿಗೆ ಹಿಡಿಸದ ವಿಷಯ. ಯಾವಾಗಲೂ ಸುಹರಾಳನ್ನು ನೋಡಿ ಮನದಲ್ಲಿ ಬೈಯುತ್ತಿದ್ದನು. ಇವನ ಮನಸ್ಸಿನಲ್ಲಿ ಭಯದ ಜೊತೆಗೆ ಅನುಮಾನವೂ ಇತ್ತು. ಏಕೆಂದರೆ ಎಲ್ಲಿ ತನ್ನ ಮಗ ಈ ಹುಡುಗಿಗೆ ಮೆಚ್ಚಿಬಿಡುತ್ತಾನೋ ಎಂದು . ಕಾಲೇಜಿಗೆ ಹೋಗುವುದನ್ನು ಸಹಿಸದ ಈ ಗಂಡು ಸಮಾಜ ಇನ್ನು ಸುಹರಾ ಪರದಾ ಇಲ್ಲದೆ ಸ್ವತಂತ್ರವಾಗಿ ಓಡಾಡುವುದನ್ನು ಒಪ್ಪುತ್ತದೆಯೇ ? ಇವನ ನಿರೀಕ್ಷೆಯಂತೆ ಇಲ್ಲದ ಸುಹರಾಳನ್ನು ನೋಡಿ ಒಂದು ದಿನ ಹೀಗೆ ಹೇಳಿಕೊಳ್ಳುತ್ತಾನೆ.

''ಅಲ್ಲಾ, ದೇವರು ಈ ಹುಡುಗಿಗೆ ಅಷ್ಟೊಂದು ಸೌಂದರ್ಯವನ್ನು ಯಾಕಾದರೂ ದಯಪಾಲಿಸಿದನು, ಹೋಗಲಿ ಆ ಸೌಂದರ್ಯವನ್ನು ಮುಚ್ಚುಮರೆ ಮಾಡಿಕೊಂಡು ಬುರ್ಕಾತೊಟ್ಟುಕೊಂಡು ಓಡಾಡುತ್ತಾಳ ಅಂದರೆ ಅದೂ ಇಲ್ಲ. ಆ ಶಾಲಿನ ತುದಿ ತಲೆಯ ಮೇಲಿದ್ದರೂ ಆಯಿತು, ಇಲ್ಲದಿದ್ದರೂ ಆಯಿತು. ಗೆಳತಿಯರೊಡನೆ ನಗುನಗುತ್ತಾ ಕಾಲೇಜಿಗೆ ಹೊರಟರೆ ಪ್ರಪಂಚವನ್ನೇ ಮರೆಯುವ ನಡವಳಿಕೆ''.

ಈ ರೀತಿಯಾಗಿ ಯೋಚಿಸುವ ಅಬ್ಬಾಸ್‌ಹಾಜಿಯ ಯೋಚನಾ ಲಹರಿಯಿಂದಲೇ ತಿಳಿಯಬಹುದು ಪುರುಷನ ದಬ್ಬಾಳಿಕೆ, ಆಕ್ರಮಣಗಳಿಂದ ಹೆಣ್ಣಿಗೆ ಯಾವ ಯಾವ ವಿಧಗಳಿಂದ ಬಂದಿಸಲು ಪ್ರಯತ್ನಿಸುತ್ತಿದ್ದರು. ಎಂದು. ಹೆಣ್ಣಿನ ಅಧಿಕ ಸೌಂದರ್ಯವೂ

ಇವನಿಗೆ ಸಹಿಸಲಾಗದ ವಿಷಯ. ಸದಾ ಹೆಣ್ಣನ್ನು ಪರದೆಯ ಹಿಂದೆ ನಾಲ್ಕು ಗೋಡೆಯ ಮಧ್ಯೆ ನೋಡಲು ಇಚ್ಛಿಸುತ್ತಿದ್ದರು. ಅಷ್ಟೇ ಅಲ್ಲದೆ ಗಂಡು ಎಂದಿಗೂ ಹೆಣ್ಣನ್ನು ಸ್ವತಂತ್ರವಾಗಿ ಓಡಾಡಿಕೊಂಡಿರಲು ಅವಕಾಶ ನೀಡಲೇ ಇಲ್ಲ. ಎಲ್ಲೋ ಒಂದೆಡೆ ಇದನ್ನೆಲ್ಲಾ ಮೀರುವ ಪ್ರಯತ್ನ ಕಂಡುಬಂದಲ್ಲಿ ಹೆಣ್ಣಿಗೆ ಸಿಗುತ್ತಿದ್ದುದು ಪ್ರೋತ್ಸಾಹವಲ್ಲ. ಬದಲಿಗೆ ಬಹಿಷ್ಕಾರ.

''ಖೆಡ್ಡ''ಕಥಾಸಂಕಲನದ ಪ್ರಮುಖ ಕಥೆಯೇ ಖೆಡ್ಡ. ಇದೊಂದು ಮಿನಿ ಕಾದಂಬರಿಯ ರೂಪದಲ್ಲಿರುವ ಬೃಹತ್ ಕತೆ. ಅಂತೆಯೇ ಹಲವು ಸಂವೇದನೆಗಳನ್ನು ಒಳಗೊಂಡ ಕತೆ. ಅಷ್ಟೇ ಅಲ್ಲದೆ ಪುರುಷರ ದಬ್ಬಾಳಿಕೆ ದೌರ್ಜನ್ಯಗಳಿಗೆ ಯಾವ ಮಿತಿಯೂ ಇಲ್ಲ. ಅದು ಯಾವ ಸ್ವರೂಪವನ್ನಾದರೂ ಪಡೆಯುತ್ತದೆ ಎಂಬುದನ್ನು ಸಾರಾರವರು ಇದರಲ್ಲಿ ತಿಳಿಸಿದ್ದಾರೆ. ಇಲ್ಲಿ ಬರುವ ಸುಹಾಸನ ಪಾತ್ರ ಇದಕ್ಕೆ ಸಾಂಕೇತಿಕವಾಗಿದೆ. ಸುಹಾಸನ ಪಾತ್ರದ ಮೂಲಕ ಮೇಲೆ ತಿಳಿಸಿದ ಅಂಶವನ್ನು ತಿಳಿದುಕೊಳ್ಳಬಹುದು. ಪುರುಷರ ಮೋಸ, ವಂಚನೆ, ದೌರ್ಜನ್ಯ ಕ್ಕೆ ಸಿಲುಕಿದ ಹೆಣ್ಣು ಕಣ್ಣೀರಿನಲ್ಲಿ ತನ್ನ ಜೀವನವನ್ನು ಕಳೆಯಬೇಕಾಗುತ್ತದೆ. ಇದನ್ನು ಶೈಲಿನಿಯ ಪಾತ್ರದ ಮೂಲಕ ತಿಳಿಯಬಹುದು. ಇಲ್ಲಿ ಬರುವ ಸಂವೇದನೆಗಳು ಆಧುನಿಕತೆಗೆ ಹತ್ತಿರವಾಗಿರುವುದನ್ನು ನೋಡಬಹುದು. ಅಂದರೆ ಶೈಲಿನಿಯ ಸಂಕಷ್ಟಕ್ಕೆ ಆಧುನಿಕತೆ ಒಂದೆಡೆ ಸ್ಪಂದಿಸಿದರೆ ಅದೇ ಆಧುನಿಕತೆ ಇನ್ನೊಂದೆಡೆ ಸುಹಾಸನಿಗೂ ಬೆಂಬಲ ನೀಡುತ್ತದೆ. ವಿದ್ಯಾವಂತ ಶೈಲಿನಿಯು ಸುಹಾಸನ ದಬ್ಬಾಳಿಕೆ ಹಾಗೂ ದೌರ್ಜನ್ಯಕ್ಕೆ ಸಿಲುಕಿ ಕೊನೆಯವರೆಗೂ ಒದ್ದಾಡುತ್ತಾಳೆ. ಸುಹಾಸನು ಶೈಲಿನಿಯ ಸುತ್ತ ಸುಳ್ಳಿನ , ಮೋಸದ ಬಲೆಯನ್ನು ನೇಯ್ದು, ಅದರಿಂದ ಅವಳು ಬಿಡಿಸಿಕೊಂಡು ಬರಲು ಸಾಧ್ಯವಾಗದಂತೆ ಬಂಧಿಸುತ್ತಾನೆ. ಶೈಲಿನಿಯು ತನಗೆ ದೊರಕಲಿಲ್ಲವೆಂಬ ಒಂದೇ ಕಾರಣದಿಂದ ಇವಳ ಜೀವನವನ್ನೆಲ್ಲಾ ನರಕಕ್ಕೆ ಸಮಾನವಾಗಿ ಮಾಡಿಬಿಡುತ್ತಾನೆ. ಒಂದು ದಿನ ಶೈಲಿನಿಯನ್ನು ಕುರಿತು ಸುಹಾಸ ಹೀಗೆ ಹೇಳುತ್ತಾನೆ.

''ಹುಂ, ಹೌದು ಒಂದು ಮಾತು ನೆನಪಿಟ್ಟುಕೋ, ನೀನು ನನ್ನನ್ನು ಮದುವೆಯಾಗದಿದ್ದರೆ ನಿನ್ನ ಮುಂದಿನ ಜೀವಮಾನವಿಡೀ ನರಕವಾಗುವಂತೆ ನಾನು ಮಾಡಬಲ್ಲೆ. ನೆನಪಿರಲಿ''.

ಕೊನೆಗೆ ಶೈಲಿನಿ ಸಿಗಲಿಲ್ಲವೆಂದು ಸುಹಾಸ ತಾನು ಹೇಳಿದಂತೆ ಮಾಡಿಯೇ ತೀರುತ್ತಾನೆ. ಇವನ ಮಾತಿಗೆ ಬೆಂಬಲ ನೀಡಿದವರು ಈತನ ತಂದೆ. ಜೊತೆಗೆ ಈತನ ಕೆಟ್ಟ ಕೃತ್ಯಕ್ಕೆ ಬೆಂಬಲ ನೀಡಿದವನು ದೇವಸ್ಥಾನದ ಅರ್ಚಕ. ಈ ಮೋಸದ ಕೃತ್ಯಕ್ಕೆ ಸುತ್ತಲಿನ ಸಮಾಜವೆಲ್ಲವೂ ಕೈ ಜೋಡಿಸುತ್ತದೆ. ಅವನ ಮಾತಿಗೆ ಎಲ್ಲರೂ ನಂಬಿಬಿಡುತ್ತಾರೆ. ಒಟ್ಟಿನಲ್ಲಿ ಸುಹಾಸನ ಕೃತ್ಯಕ್ಕೆ ಇಡೀ ಪುರುಷಲೋಕವೇ ಕುಮ್ಮಕ್ಕು ನೀಡಿದೆ.

ಮತ್ತೊಂದು ಕತೆಯಾದಂತಹ 'ಧರ್ಮ ಬಲೆಬೀಸಿದಾಗ' ಕತೆಯ ನಾಯಕಿ ಖತೀಜಾಬಿ. ಮಗಳು ನಫೀಸಾ. ಇವಳನ್ನು ಊರಿನ ಶ್ರೀಮಂತ ಇಬ್ರಾಹಿಂ ಹಾಜಿಯವರು ಎರಡನೇ ಪತ್ನಿಯಾಗಿ ನಿಖಾ ಮಾಡಿಕೊಳ್ಳಲು ಇಚ್ಛಿಸುತ್ತಾರೆ. ಆದರೆ 'ಹುಡುಗಿಯ ಅಪ್ಪನ ವಯಸ್ಸಿನ ಗಂಡಿಗೆ ಅದೂ ಎರಡನೆ ಪತ್ನಿಯಾಗಿ ಹರೆಯದ ಮಗಳನ್ನು ನಿಖಾ ಮಾಡಿಕೊಡಬೇಕಾದ ಖತೀಜಾಬಿ ಇದನ್ನು ಸುತಾರಾಂ ಒಪ್ಪುವುದಿಲ್ಲ. ರಫೀನಾಳ ಸೌಂದರ್ಯಕ್ಕೆ ಮಾರುಹೋಗಿದ್ದ ಜಮಾಅತ್ ಅಧ್ಯಕ್ಷ ಇಬ್ರಾಹಿಂ ಹಾಜಿ ಲಜ್ಜೆಗೆಟ್ಟವನಂತೆ ಈ ನಿಖಾ ನಡೆಯುವಂತೆ ಸಂಧಾನಕ್ಕೆಂದು ತನ್ನ ಕಡೆಯವರನ್ನು ಛೂ ಬಿಡುತ್ತಾನೆ. ಖತೀಜಾಬಿಯ ಮನೆಗೆ ಸ್ವತಃ ತಾನೇ ಹೋಗುತ್ತಾನೆ. ಖತೀಜಾಬಿ ತಾನಿಟ್ಟ ನಿರ್ಧಾರದಿಂದ ಹಿಂಜರಿಯಲೇ ಇಲ್ಲ. ಇದು ತನಗಾದ ಅವಮಾನವೆಂದು ತಿಳಿದ ಇಬ್ರಾಹಿಂ ಹಾಜಿ ವ್ಯಭಿಚಾರದ ಆರೋಪ ಹೊರಿಸಿ ಮಸೀದಿಯಿಂದ ಆಕೆಯ ಕುಟುಂಬಕ್ಕೆ ಬಹಿಷ್ಕಾರ ಹಾಕಿಸುತ್ತಾನೆ. ಮುಂಬೈಯಲ್ಲಿದ್ದ ಪತಿ ಕರೀಂ ಸಾಬ್‌ರವರನ್ನು ಕರೆಸಿಕೊಂಡು ಖತೀಜಾಬಿ ಪೋಲಿಸರಿಗೆ ದೂರು ನೀಡಿ ಮಸೀದಿಯವರ ನಡವಳಿಕೆಯ ಬಗ್ಗೆ ಪ್ರಶ್ನಿಸಬೇಕೆಂದು ಸಮಾಲೋಚಿಸುತ್ತಾಳೆ. ಇಬ್ರಾಹಿಂ ಹಾಜಿಯ ಈ ಕೃತ್ಯ ನಿಜವಾಗಿಯೂ ಕೊಳಕು ಎನಿಸುತ್ತದೆ. ತನ್ನ ಕೆಲಸ ಫಲಿಸಲಿಲ್ಲವೆಂದು ಇದಕ್ಕೆ ಅಡ್ಡಿಯಾದವರನ್ನು ಹಿಂಸಿಸುವ ರೀತಿ ಜೊತೆಗೆ ಈತನ ದಬ್ಬಾಳಿಕೆಗೆ ಅವನ ಸುತ್ತಮುತ್ತಲಿನ ಜನರೇ ಕೈಜೋಡಿಸುವುದನ್ನು ನೋಡಿದರೆ ಮುಸ್ಲಿಂ ಸಮುದಾಯದಲ್ಲಿನ ಪುರುಷ ಜಗತ್ತಿನ ವಿಕೃತ್ಯಗಳು ನಿಜವಾಗಿಯೂ ಶೋಚನೀಯವಾಗಿದೆ.

ಅಧ್ಯಾಯ -೪

ಸಾರಾರವರ ಕಥೆಗಳಲ್ಲಿ ಸ್ತ್ರೀ ಜಗತ್ತಿನ ಅನಾವರಣ

ಸಾರಾರವರ ಕಥೆಗಳ ಅಧ್ಯಯನದಿಂದ ಹಲವು ಸ್ತ್ರೀ ಜಗತ್ತುಗಳ ಪರಿಚಯವಾಗುತ್ತದೆ. ಅವರ ಕಥೆಗಳಲ್ಲಿ ಸ್ತ್ರೀ ಲೋಕದ ಚಿತ್ರಣಗಳನ್ನು ನೋಡಬಹುದು. ಇಲ್ಲಿ ಹೆಣ್ಣೇ ಪ್ರಧಾನವಾದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾಳೆ. ಏಕೆಂದರೆ ಇವರ ಕಥೆಗಳ ವಸ್ತುವೇ ಹೆಣ್ಣು. ಇವಳ ಸುತ್ತ ಹೆಣೆದಿರುವ ಸನ್ನಿವೇಶಗಳೇ ಕಥೆಗಳಾಗಿರುವುದನ್ನು ನೋಡಬಹುದು. ಇವರ ಕಥೆಗಳಲ್ಲಿ ಹೆಣ್ಣು ಹಲವು ನೆಲೆಗಳಲ್ಲಿ ಕಾಣಿಸಿಕೊಳ್ಳುತ್ತಾಳೆ.

ಸಾರಾರವರ ಮುಖ್ಯ ಉದ್ದೇಶ 'ಒಂದು ಹೆಣ್ಣು ಸಮಾಜದಲ್ಲಿ ಕುಟುಂಬಗಳ, ನಿಯಮಗಳ, ಆಚಾರ-ವಿಚಾರಗಳ, ಧರ್ಮದ ನಡುವೆ' ಸಿಲುಕಿ ಒದ್ದಾಡುವ ಚಿತ್ರಣವನ್ನು ನೀಡುವುದೇ ಅಗತ್ಯ. ಅದರಲ್ಲೂ ಮುಸ್ಲಿಂ ಹೆಣ್ಣಿನ ಬವಣೆಗಳ ಚಿತ್ರಣವೇ ಮುಖ್ಯ. ಸಾರಾರವರ ಒಂದೆರಡು ಕಥೆಗಳನ್ನು ಹೊರತುಪಡಿಸಿದರೆ ಬಹುತೇಕ ಎಲ್ಲಾ ಕಥೆಗಳಲ್ಲಿಯೂ ಮುಸ್ಲಿಂ ಜನಾಂಗದ ವಿವಿಧ ವಯೋಮಾನದ ವಿವಿಧ ಸ್ಥಿತಿಗತಿಗಳ ಮಹಿಳೆಯರೆ ಕೇಂದ್ರ ಪಾತ್ರಗಳಾಗಿದ್ದಾರೆ. ಸಾರಾರವರ ಮೊದಲಿನ ಕಥೆಗಳಲ್ಲಿ ಧಾರ್ಮಿಕ ಶೋಷಣೆಗೆ ತುತ್ತಾಗುವ ಅಸಾಯಕ ಹೆಣ್ಣುಗಳಿದ್ದರೆ ಅವರ ಇತ್ತೀಚಿನ ಕಥೆಗಳ ಸ್ತ್ರೀ ಪಾತ್ರಗಳು ತಮ್ಮ ತನವನ್ನು ಸ್ಥಾಪಿಸಿಕೊಳ್ಳುವ ಛಾತಿಯವರಾಗಿದ್ದಾರೆ. ಮದುವೆಯಾದ ಹೆಣ್ಣುಮಗಳಿಗೆ ಎದುರಾಗುವ ಸಮಸ್ಯೆಗಳು ಹಾಗೂ ಅದನ್ನು ಅವಳು ಎದುರಿಸುವ ರೀತಿಯನ್ನು ಪ್ರಧಾನವಾಗಿ ಚಿತ್ರಿಸಿದ್ದಾರೆ. ಸಾರಾರವರ ಕಥೆಗಳಲ್ಲಿ ಮುಸ್ಲಿಂ ಧರ್ಮದಲ್ಲಿರುವ ತಲಾಖ್ ವ್ಯವಸ್ಥೆಯೇ ವಿವಾಹಿತ ಹೆಣ್ಣನ್ನು ಶೋಷಿಸುವ ಪ್ರಧಾನ ಮೂಲವಾಗಿರುವುದನ್ನು ಗುರುತಿಸಬಹುದು.

ಇವರ ಕಥೆಗಳಲ್ಲಿ 'ಅತ್ಯಂತ ಸೂಕ್ಷ್ಮ ಸಂವೇದನೆಯ ದಿಟ್ಟ ನಿಲುವಿನ ವಿದ್ಯಾವಂತೆಯೂ ವಿಚಾರಶೀಲಳೂ ಆದ ನಾಯಕಿ ಕಂಡು ಬರುತ್ತಾಳೆ. ಅಷ್ಟೇ ಅಲ್ಲದೆ ಅವಳು ಸ್ವತಂತ್ರವಾಗಿ ತನ್ನ ಮುಂದಿನ ಜೀವನದ ಬಗ್ಗೆ ಸ್ವಂತ ನಿರ್ಧಾರವನ್ನು ಕೈಗೊಳ್ಳುವಂತಹ ಹೆಣ್ಣು ಇವರ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಸಾರಾರವರ ಕಥೆಗಳಲ್ಲಿ ಸಾಂಪ್ರದಾಯಿಕತೆ ಮತ್ತು ಆಧುನಿಕತೆಯ ಮುಖಾಮುಖಿಯು ಆಗಿದೆ. ಅಂದರೆ ಇವರ

ಕಥೆಗಳಲ್ಲಿ ತಾಯಿಯ ಪಾತ್ರದಲ್ಲಿ ಹಾಗೂ ಮಗಳ ಪಾತ್ರದಲ್ಲಿ ಹೆಣ್ಣು ಕಾಣಿಸಿಕೊಳ್ಳುತ್ತಾಳೆ. ಇವರಿಬ್ಬರ ದೃಷ್ಟಿಕೋನಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಆಯ್ಕೆಯ ವಿಷಯದಲ್ಲಿಯೂ ಸಾಕಷ್ಟು ವ್ಯತ್ಯಾಸ ಇರುವುದನ್ನು ನೋಡಬಹುದು. ತಾಯಿಯು ಅದೇ ಗೊಡ್ಡು ಸಂಪ್ರದಾಯ ಆಚಾರಗಳನ್ನು ನಂಬಿ ಬದುಕುವುದನ್ನು ನೋಡಬಹುದು. ಅದೇ ಮಗಳು ಅವೆಲ್ಲವನ್ನು ಮೀರಿ ಬದುಕುವಂತಹ ಪ್ರಯತ್ನದಲ್ಲಿ ಸಾಗಿದ್ದಾಳಷ್ಟೇ ಅಲ್ಲದೆ ಅನ್ಯಾಯಕ್ಕೆ ಒಳಗಾದ ಹೆಣ್ಣು ದನ್ನು ಅರಿತು ಅವರ ವಿರುದ್ಧ ಬಂಡೇಳುವುದನ್ನು ಕಾಣಬಹುದು.

ಮುಸ್ಲಿಂ ಸಮಾಜದ ಬದುಕು ಧರ್ಮದ ನಿಯಮಗಳಡಿಯಲ್ಲಿಯೇ ನಡೆಯುವಂಥದ್ದು. ಆದರೆ ಈ ನಿಯಮಗಳು ಹೆಣ್ಣಿನ ಮೇಲೆ ಹೆಚ್ಚಾಗಿ ಬೀಳುತ್ತದೆ. ಘೋಷಾ ಹಾಕಬೇಕಾದ ಅನಿವಾರ್ಯತೆ, ಚಲನವಲನಗಳಲ್ಲಿ ನಿರ್ಬಂಧ, ಗಂಡಸಿನ ಸೌಲಭ್ಯವಾದ ಬಹುಪತ್ನಿತ್ವ, ತಲಾಖ್ ಕೊಡುವುದರಲ್ಲಿ ಗಂಡಸಿಗಿರುವ ಮೇಲುಗೈ ಇವೆಲ್ಲವೂ ಹೆಂಗಸಿನ ಬಾಳನ್ನು ತೀರಾ ನಿರ್ಬಂಧಿಸುತ್ತದೆ. ಇವು ಸಾಲದು ಎಂಬಂತೆ ಬಡತನ, ಭಾರತದಲ್ಲಿ ಸರಿಯಾಗಿ ನೆಲೆನಿಲ್ಲಲಾಗದೆ ಗಂಡಸರು ದುಡಿಮೆಗೆ ಕೊಲ್ಲಿರಾಷ್ಟ್ರಗಳಿಗೆ ಹೋಗಬೇಕಾದ ಒತ್ತಡ ಇವು ಸಹ ಹೆಂಗಸಿನ ಬಾಳನ್ನು ಕಷ್ಟಕ್ಕೀಡುಮಾಡಿದೆ. ಇದೆಲ್ಲಾ ಕಷ್ಟಗಳಿಗೆ ಸಾರಾರವರ ಕಥೆಗಳಲ್ಲಿ ಬ ರುವ ಪಾತ್ರಗಳು ಒಂದೆಡೆ ಪ್ರತಿಕ್ರಿಯಿಸಿದ್ದನ್ನು ನೋಡಬಹುದು.

''ಚಪ್ಪಲಿಗಳು'' ಕಥೆಯ ಸಮೀರ, 'ಧರ್ಮ ಬಲೆಬೀಸಿದಾಗ 'ಕತೆಯ ಖತೀಜಾಬಿ'ಮರಿಯಮ್ಮನ ಅಳಿಯ'ಕತೆಯ ಮರಿಯಮ್ಮ, 'ಬಿರುಗಾಳಿ'ಕತೆಯ ಫಾತಿಮಾ ಇದೆಲ್ಲಾ ಸ್ತ್ರೀಪಾತ್ರಗಳು ಧರ್ಮದ ಕುಮ್ಮಕ್ಕು ಪಡೆದ ಪಿತೃವ್ಯವಸ್ಥೆಯ ದಬ್ಬಾಳಿಕೆಗೆ ಸಿಕ್ಕಿದವರೇ. ಅಂದರೆ ಸ್ವತಃ ತಮ್ಮ ಮನೆಯ ಹೆಣ್ಣುಮಕ್ಕಳನ್ನೇ ಧರ್ಮದ ಹೆಸರಿನಲ್ಲಿ ಬಂದಿಸುವ ತಂದೆಯ ವಿರುದ್ಧವಾಗಿ ಹೆಣ್ಣುಮಕ್ಕಳು ಏನೂ ಮಾತನಾಡದೆ ಮೌನವಾಗಿಯೇ ಎಲ್ಲಾ ನೋವುಗಳನ್ನು ಸಹಿಸುವವರು. ನಿರಂತರ ಬಸಿರು, ಬಾಣಂತನಗಳಿಂದ, ಗಂಡ ದೂರದಲ್ಲಿರುವ ವೇದನೆಯಿಂದ ತಂದೆ-ಗಂಡಂದಿರ ಜೋರು ಜುಲುಮೆಯಿಂದ ಹೊಟ್ಟೆಪಾಡಿಗಾಗಿ ದುಡಿಯಲೇಬೇಕಾದ ಅನಿವಾರ್ಯತೆಯಿಂದಲೂ ಈ ಪಾತ್ರಗಳು ನರಳುವುದನ್ನು ನೋಡಬಹುದು. ತಂದೆ ತನ್ನನ್ನು ಮತ್ತು ಇತರ ಹೆಂಗಸರನ್ನು ಚಪ್ಪಲಿಗಳು ಎಂದು ಕರೆದುದರಿಂದ ಮನಸ್ಸು ಮುರಿದ ಸಮೀರ ತೀರಾ

ಅಂತರ್ಮುಖಿಯಾಗಿ ಮನೆಯವರಿಗೆಲ್ಲಾ ಒಂದು ಸವಾಲಾಗುತ್ತಾಳೆ. ಹಾಗೆಯೇ ಧರ್ಮ ಬಲೆ ಬೀಸಿದಾಗ ಕತೆಯ ಖತೀಜಾಬಿ ಎಷ್ಟೇ ಒತ್ತಡ ಬಂದರೂ ತನ್ನ ಚಿಕ್ಕ ವಯಸ್ಸಿನ ಮಗಳನ್ನು ಮುದುಕನೊಬ್ಬನಿಗೆ ಮದುವೆ ಮಾಡಲು ಒಪ್ಪುವುದಿಲ್ಲ. ಅವಳು ಯಾವ ವ್ಯವಸ್ಥೆಗೂ ಹೆದರದೆ ತನ್ನ ದಿಟ್ಟನಿಲುವನ್ನು ವ್ಯಕ್ತಪಡಿಸುತ್ತಾಳೆ.

ಸಾರಾರವರ ಕೆಲವು ಕತೆಗಳ ಸ್ತ್ರೀಪಾತ್ರಗಳು ಅಪಾರ ಜೀವನ್ಮುಖತೆಯನ್ನು ತೋರಿಸುವ ಪಾತ್ರಗಳಾಗಿವೆ. ಬಡತನ, ಕಷ್ಟ, ಗಂಡಂದಿರ ಬೇಜವಾಬ್ದಾರಿತನ ಯಾವುದೂ ಈ ಪಾತ್ರಗಳ ಎದೆಯಲ್ಲಿರುವ ಪ್ರೀತಿಯ ಒರತೆಯನ್ನು ಬತ್ತಿಸುವುದಿಲ್ಲ. ಒಂದು ಸ್ವಲ್ಪವೂ ಸಹಾಯ ಮಾಡದ ಅಳಿಯ ಸಿಕ್ಕಿದರೂ ಮರಿಯಮ್ಮ ಮಗಳ ಸಫಲ ವೈವಾಹಿಕ ಬದುಕಿನಲ್ಲಿ ಸಂತೋಷ ಕಾಣುತ್ತಾಳೆ. ಅಂದರೆ ಬದುಕಿನ ಭಾರವನ್ನು ತನ್ನ ತಲೆಯ ಮೇಲೆ ಹೊತ್ತುಕೊಂಡು ಸುತ್ತಮುತ್ತಲಿನವರ ಸುಖಕ್ಕಾಗಿ ಶ್ರಮಿಸುವ ಗುಣವನ್ನು ಸಾರಾರವರ ಕೆಲವು ಕಥೆಯ ನಾಯಕಿಯರಲ್ಲಿ ಕಾಣುತ್ತೇವೆ.

ಸಾರಾರವರ ಇನ್ನೂ ಕೆಲವೊಂದು ಕಥೆಗಳಲ್ಲಿ ಕಾಣಿಸುವಂತಹ ಸ್ತ್ರೀಪಾತ್ರಗಳು ಸಮಾಜದ ವ್ಯವಸ್ಥೆಯನ್ನು ಒಪ್ಪಿಕೊಂಡು ಅದಕ್ಕೆ ಹೊಂದಿಕೊಂಡು ಅದರಲ್ಲೇ ಬದುಕುವನ್ನು ನೋಡಬಹುದು. 'ನಿಯಮ-ನಿಯಮಗಳ ನಡುವೆ' ಎಂಬ ಕತೆಯಲ್ಲಿ ಆಮಿನಾ ಮುಸ್ಲಿಂ ಸಮಾಜದ ನಿಯಮಗಳನ್ನು, ವ್ಯವಸ್ಥೆಯನ್ನು ಒಪ್ಪಿಕೊಂಡು ಇದೇ ನಮ್ಮ ಬದುಕು ಎಂದು ತಿಳಿದು ಜೀವಿಸುತ್ತಿರುತ್ತಾಳೆ. ಅದೇ ನಿಲುವುಗಳನ್ನು ತನ್ನ ಮಗಳಾದ ಜೊಹರಾಳ ಮುಂದೆಯೂ ವ್ಯಕ್ತಪಡಿಸುತ್ತಾಳೆ. ಅದರ ವಿರುದ್ಧ ಅವಳಲ್ಲಿ ಯಾವುದೇ ವಿರೋಧವಿಲ್ಲ. ಆಮಿನಾ ತನ್ನ ಮಗಳ ಮುಂದೆ ಹೇಳುವ ಮಾತನ್ನು ಗಮನಿಸಬಹುದು.

ಆಮಿನಾ : ''ಅಲ್ಲಾಹು ನಮ್ಮನ್ನು ಸೃಷ್ಟಿಸಿರುವುದೇ ಕಷ್ಟಪಡುವುದಕ್ಕೆ ಅಲ್ಲವಾ?''

''ತಪ್ಪು ಯಾರೇ ಮಾಡಲಿ, ಶಿಕ್ಷೆ ಅನುಭವಿಸಬೇಕಾದವರು ಹೆಂಗಸರು. ಅದನ್ನು ಮಾತ್ರ ಮರೆಯಬೇಡ''.

ಈ ಮೇಲಿನ ಮಾತನ್ನು ಗಮನಿಸಿದರೆ ತಿಳಿಯುತ್ತದೆ. ಆಮಿನಾ ಹೇಗೆ ಇವೆಲ್ಲಾ ವ್ಯವಸ್ಥೆಗಳನ್ನು ಒಪ್ಪಿಕೊಂಡುಬಿಟ್ಟಿದ್ದಳು ಎಂದು ಆದರೆ ಆಮಿನಾಳ ಮಗಳು ಜೊಹರಾ ಇವಳಲ್ಲಿ ವ್ಯವಸ್ಥೆಯ ವಿರುದ್ಧ ವಿರೋಧವಿದೆ. ತನ್ನ ತಾಯಿಯ ಮಾತನ್ನು ಆಕೆ

ಒಪ್ಪುವುದಿಲ್ಲ. ಬದಲಾಗಿ ಪ್ರಶ್ನಿಸುತ್ತಾಳೆ. ಆದರೂ ಇವಳು ಗಟ್ಟಿಯಾಗಿ ನಿಂತಿರುವ ಆ ವ್ಯವಸ್ಥೆಯ ವಿರುದ್ಧ ಏನೂ ಮಾಡಲಾಗದೆ ಕೊನೆಗೆ ಅದೇ ನಿಯಮಗಳಲ್ಲಿ ಸಿಲುಕಿ ಅಸಹಾಯಕಳಾಗಿ ಸಾವನ್ನಪ್ಪುತ್ತಾಳೆ.

ಇನ್ನೊಂದು ಕತೆಯಾದಂತಹ ''ತಂಗಿಯ ಪತ್ರಗಳು'' ಎಂಬಲ್ಲಿ ಆಮಿನಾಳಂತಹ ಇನ್ನೊಂದು ಹೆಣ್ಣನ್ನು ನೋಡಬಹುದು. ಇವಳು ಅದೇ ಗೊಡ್ಡುಸಂಪ್ರದಾಯ, ನಿಯಮಗಳನ್ನು ನಂಬಿ ಬದುಕಿದವಳು. ತನ್ನ ಮಗಳ ಬಗ್ಗೆ ಒಂದು ದಿನ ಹೀಗೆ ಹೇಳುತ್ತಾಳೆ.

> ''ಅವಳು ತುಂಬಾ ಹಠಮಾಡಿ ಕಾಲೇಜು ಸೇರಿಕೊಂಡಳು. ನಮ್ಮ ಹೆಣ್ಣುಮಕ್ಕಳು ಪದವಿ ಪಡೆದು ಏನು ಮಾಡಬೇಕಾಗಿದೆ ? ಮದುವೆಯಂತೂ ಮಾಡಲೇಬೇಕಲ್ಲ, ವಿದ್ಯಾವಂತ ಹುಡುಗನೇ ಬೇಕೆಂಬುದು ಇನ್ನೊಂದು ಹಠ. ಕಾಲೇಜು ಪದವಿ ಇದೆಲ್ಲಾ ಬೇಡವೆಂದರೆ ಯಾರು ಕೇಳುತ್ತಾರೆ? ಈಗಿನ ಮಕ್ಕಳಿಗೆ ಹಿರಿಯರ ಮಾತೆಂದರೆ ಅಸಡ್ಡೆ, ತಮಾಶೆಯಲ್ಲವಾ ? ನಮಗಿಂತ ಅವರೇ ಬುದ್ಧಿವಂತರು ಎಂಬುದು ಅವರ ತಲೆಯೊಳಗೆ ಹೊಕ್ಕಿದೆ.''[೧]

ಇದನ್ನು ಗಮನಿಸಿದರೆ ತಿಳಿಯುತ್ತದೆ. ತಾವು ಒಪ್ಪಿಕೊಂಡಿರುವ ನಿಯಮಗಳ ಪಾಲನೆಯನ್ನು ಹೆಂಗಸರು ಹೇಗೆ ಮಾಡುತ್ತಿದ್ದರು. ಜೊತೆಗೆ ಅದರಲ್ಲಿ ಹೇಗೆಬೆರೆತಿದ್ದರು. ಅಷ್ಟೇ ಅಲ್ಲದೆ ವ್ಯವಸ್ಥೆಯ ಬಗ್ಗೆ ಅವರಿಗೆ ಭಯವೂ ಇತ್ತು.

'ಹೊಸದಿಕ್ಕು' ಎಂಬ ಕತೆಯಲ್ಲಿ ಮೇಲೆ ತಿಳಿಸಿದಂತಹ ಹೆಣ್ಣಿನ ಮನೋಧರ್ಮಕ್ಕೆ ವಿರುದ್ಧವಾದ ನಿಲುವುಗಳನ್ನು ಒಳಗೊಂಡ ಹೆಣ್ಣು ಕಾಣಿಸುತ್ತಾಳೆ. ಅಷ್ಟೇ ಅಲ್ಲದೆ ಆಧುನಿಕತೆಗೆ ತೀರಾ ಹತ್ತಿರವಾದ ನಿಲುವುಗಳು, ಬದಲಾವಣೆಗಳು ಇವಳಲ್ಲಿತ್ತು. ಮುಸ್ಲಿಂ ಸಮಾಜದಲ್ಲಿರುವ ಇದ್ದಂತಹ ಎಲ್ಲಾವ್ಯವಸ್ಥೆಗೆ ವಿರುದ್ಧವಾಗಿ ಈಕೆ ನಿಲ್ಲುತ್ತಾಳೆ. ಮೌನವಾಗಿಯೇ ಎಲ್ಲವನ್ನೂ ವಿರೋಧಿಸುವ ನಿಲುವು ಇವಳದು. ಇವಳು ವಿದ್ಯಾವಂತೆಯೂ ಹೌದು. ಉದ್ಯೋಗಸ್ಥೆಯೂ ಹೌದು. ಅವಳೇ ಶಾಹಿನಾ. ಇಡೀ ಕತೆಯೇ ಇವಳ ಸುತ್ತ ಹೆಣೆಯಲ್ಪಟ್ಟಿದೆ. ಶಾಹಿನಾ ಸ್ನಾತಕೋತ್ತರ ಪದವಿ ಮುಗಿಸಿ ಗಗನಸಖಿ ಹುದ್ದೆಗೆ

---

೧ ಗಗನಸಖಿ ಕಥಾಸಂಕಲನ. ಪುಟ-೧೧೭

ಸೇರಿರುತ್ತಾಳೆ. ಮನೆಯಲ್ಲಿ ಇದಕ್ಕೆ ಎಷ್ಟೇ ವಿರೋಧವಿದ್ದರೂ ಲೆಕ್ಕಿಸಲಿಲ್ಲ. ಮದುವೆ, ಗಂಡ, ಸಂಸಾರ, ಸಮಾಜ ಇವೆಲ್ಲವುದಕ್ಕಿಂತ ಉದ್ಯೋಗವೇ ಮುಖ್ಯವಾಗಿತ್ತು. ತನ್ನ ತಾಯಿಯ ಮತ್ತು ದೊಡ್ಡಮ್ಮನ ಬಲವಂತದಿಂದ ಮದುವೆಯ ಬಗ್ಗೆ ಯೋಚಿಸಿದ್ದಳು. ಆದರೆ ಇವಳ ಮದುವೆಗೆ ಅಡ್ಡಿಯಾದದ್ದು ಉದ್ಯೋಗ. ಏಕೆಂದರೆ ಮುಸ್ಲಿಂ ಸಮಾಜವು ವಿದ್ಯಾವಂತ ಹೆಣ್ಣನ್ನೇ ಒಪ್ಪುವುದಿಲ್ಲ. ಅಂತಹದರಲ್ಲಿ ಉದ್ಯೋಗಸ್ಥ ಹೆಣ್ಣನ್ನು ಒಪ್ಪುತ್ತದೆಯೇ ? ಅದರಲ್ಲಿಯೂ ಇವಳು ಗಗನಸಖಿ ಯಾಗಿರುವುದರಿಂದ ಈ ಉದ್ಯೋಗದ ಬಗ್ಗೆ ಮುಸಲ್ಮಾನ ಗಂಡಸರಲ್ಲಿ ಕೀಳು ಭಾವನೆ ಇತ್ತು. ಅವಳು ಎಲ್ಲಾ ಗಂಡಸಿನ ನಡುವೆ ಓಡಾಡಿಕೊಂಡು ಇರುತ್ತಾಳೆ. ಸ್ವಲ್ಪವೂ ಅವಳಲ್ಲಿ ಘೋಷ ಅನ್ನುವುದೇ ಇಲ್ಲ ಎಂದು ಅಂತಹ ಉದ್ಯೋಗವನ್ನು ನಿರಾಕರಿಸುತ್ತಿದ್ದರು. ಅದಕ್ಕಾಗಿ ಶಾಹಿನಾಳ ತಾಯಿಯು ಒಂದು ದಿನ ಮಗಳಿಗೆ ಉದ್ಯೋಗವನ್ನು ಬಿಟ್ಟು ಮದುವೆಯಾಗಲು ಸೂಚಿಸುತ್ತಾಳೆ. ಆಗ ಶಾಹಿನಾ ಪ್ರತಿಕ್ರಿಯಿಸಿದ್ದು ಹೀಗೆ.

''ಕೆಲಸ ಮತ್ತು ಗಂಡ ಇವೆರಡರಲ್ಲಿ ನಾನು ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಳ್ಳಬೇಕು ಅಲ್ಲವಾ ? ಹಾಗಾದರೆ ನನ್ನ ಆಯ್ಕೆ ನನ್ನ ಉದ್ಯೋಗ.''[೯] ಮೇಲಿನ ಮಾತುಗಳಿಂದ ಶಾಹಿನಳಲ್ಲಿ ಇದ್ದಂತಹ ದಿಟ್ಟ ನಿಲುವು ಏನೆಂಬುದು ತಿಳಿಯಬಹುದು. ಇವಳು ತನ್ನ ಮಾತಿನಿಂದ ಇಡೀ ವ್ಯವಸ್ಥೆಯನ್ನು ಪ್ರಶ್ನಿಸುವ ರೀತಿಯಲ್ಲಿ ಹಾಗೂ ಪುರುಷಕೇಂದ್ರಿತ ನಿಯಮಗಳನ್ನು ಮುರಿಯುವ ರೀತಿಯಲ್ಲಿ ನಿರ್ಧಾರವನ್ನು ತಿಳಿಸಿದ್ದಾಳೆ. ಜೊತೆಗೆ ಮದುವೆಯಿಲ್ಲದೆಯೂ ಗಂಡನಿಲ್ಲದಿದ್ದರೂ ಜೀವನ ಸಾಗಿಸಬಹುದೆಂದು ಪರೋಕ್ಷವಾಗಿ ಸೂಚಿಸುತ್ತಾಳೆ.

''ಬೇಟಿ'' ಎಂಬ ಕತೆಯಲ್ಲಿ ರಫೀನಾ ಕತೆಯ ನಾಯಕಿ. ಇವಳೂ ಸಹ ಹೊಸ ಎಚ್ಚರದ ಹೊಸ ಆಲೋಚನೆಯ ಹೆಣ್ಣು. ಮೇಲೆ ತಿಳಿಸಿದ ಕತೆಯ ನಾಯಕಿಯಂತೆ ದಿಟ್ಟನಿಲುವನ್ನು ಒಳಗೊಂಡವಳು. ಇವಳು ಪುರುಷರ ದೌರ್ಜನ್ಯಕ್ಕೆ ಒಳಗಾಗಿದ್ದು ಸ್ವತಃ ತನ್ನ ಗಂಡನಿಂದ ಅನ್ಯಾಯಕ್ಕೆ ಒಳಗಾದವಳು. ತನಗಾದ ಅನ್ಯಾಯದಿಂದ ಮನಸೋತರೂ ಮತ್ತೊಂದು ಹಂತದಲ್ಲಿ ತನ್ನ ಗಂಡನಿಗೆ ಸವಾಲಾಗಿ ನಿಲ್ಲುತ್ತಾಳೆ. ಇಲ್ಲಿ ಈಕೆ ಜಾಗೃತಳಾಗುವುದನ್ನು ನೋಡಬಹುದು. ತನ್ನ ಗಂಡ ಮಾಡಿದ ಅನ್ಯಾಯದ ವಿರುದ್ಧ ಬಂಡೇಳುತ್ತಾಳೆ. ಆದರೆ ಇವೆಲ್ಲವನ್ನೂ ಮೌನವಾಗಿಯೇ ಅವಳು ಮಾಡುತ್ತಾಳೆ. ಸ್ವತಃ

ಇವಳು ತಾನು ಸತ್ತು ಏನನ್ನೂ ಸಾಧಿಸಲಾಗದು. ಬದುಕಿದ್ದೂ ಸಾಧಿಸಿ ತೋರಬೇಕು ಎಂದು ನಿರ್ಧರಿಸುವುದರ ಮೂಲಕ ವ್ಯವಸ್ಥೆಯ ವಿರುದ್ಧ ತನ್ನ ಸ್ಥೈರ್ಯವನ್ನು ವ್ಯಕ್ತಪಡಿಸುತ್ತಾಳೆ. ಆ ಪುರುಷ ಜಗತ್ತನ್ನು ಜೊತೆಗೆ ತನ್ನ ಗಂಡನನ್ನು ಎದುರಿಸಿ ನಿಲ್ಲಲು ಸಿದ್ಧಳಾಗುತ್ತಾಳೆ. ಇಲ್ಲಿ ಸ್ವತಃ ರಫೀನಾ ತನ್ನ ಮನಸ್ಸಿನಲ್ಲಿ ಆಡಿಕೊಳ್ಳುವಂತಹ ಮಾತುಗಳನ್ನು ಗಮನಿಸುವುದಾದರೆ :-

''ಇಲ್ಲಾ ತಾನು ಬದುಕಬೇಕು ! ನಿಂತು ಹೋದ ಗಡಿಯಾರಕ್ಕೆ ಚಾವಿ ಕೊಟ್ಟಾಗ ಮತ್ತೊಮ್ಮೆ ತಿರುಗಲಾರಂಭಿಸಿದಂತೆ ! ಆರ್ಥಿಕವಾಗಿ ಸ್ವತಂತ್ರಳಾಗಬೇಕು ಯಾವಾತನೂ ತನ್ನನ್ನು ತುಳಿದು ತಲೆ ಎತ್ತದಂತೆ ಮಾಡಲು ಪ್ರಯತ್ನಿಸಿದ್ದನ್ನು ಆತನ ಎದುರಿಗೆ 'ನೀನು ನನ್ನನ್ನೇನು ಮಾಡಲಾರೆ' ನನ್ನ ಹೊಟ್ಟೆಯ ಕೂಸನ್ನು ನೀನು ಕಿತ್ತುಕೊಂಡೆ. ನನ್ನದೆಲ್ಲವನ್ನೂ ನೀನು ಅಪಹರಿಸಿದೆ. ಆದರೆ ನನ್ನ ಮೆದುಳನ್ನೆಂದೂ ನಿಷ್ಕ್ರಿಯಗೊಳಿಸಲಾರೆ ಎಂದು ಆತನೆದುರಿಗೆ ತೋರಿಸಬೇಕು. ತಾನೆಂದೂ ಆತನೆದುರು ಸೋಲಬಾರದು. ತನ್ನ ಮನಮೆಚ್ಚಿದ ಬಾಳಸಂಗಾತಿಯೊಡನೆ ಆತನೆದುರು ತಲೆಎತ್ತಿ ನಿಲ್ಲಬೇಕು.''[೨] ಎಂದು ನಿರ್ಧರಿಸಿ ತನ್ನ ಗಂಡನಿಗೆ ಸವಾಲಾಗುವುದನ್ನು ನೋಡಬಹುದು. ಈ ಮಾತಿನ ಮೂಲಕ ರಫೀನಾಳ ಮನಸ್ಸಿನಲ್ಲಿ ಇದ್ದಂತಹ ನೋವು ಜೊತೆಗೆ ಅವಳು ತನ್ನ ಗಂಡನಿಂದ ಯಾವ ಯಾವ ವಿಚಾರಗಳಲ್ಲಿ ಅನ್ಯಾಯಕ್ಕೆ ಒಳಗಾಗಿದ್ದಳೋ ಅದನ್ನು ಮತ್ತೆ ಪಡೆಯಬೇಕೆಂಬ ಜೊತೆಗೆ ಸಮಾಜದಲ್ಲಿ ಸಮಾನವಾಗಿ ಬದುಕಬೇಕೆಂಬ ಆಸೆ ಇವಳ ಮನಸ್ಸಿನಲ್ಲಿ ವ್ಯಕ್ತವಾಗುತ್ತದೆ.

'ನಿರ್ಧಾರ' ಎಂಬ ಕತೆಯಲ್ಲಿ ಸಾರಾರವರು ಮುಸ್ಲಿಂ ಸಮಾಜದಲ್ಲಿರುವ ಗಂಡಸಿನ ಪ್ರಾಬಲ್ಯವನ್ನು ತಿಳಿಸಿದ್ದಾರೆ. ಇಲ್ಲಿ ಇವನೇ ಪ್ರಧಾನವಾಗಿ ಕೈಗೊಳ್ಳುವ ನಿರ್ಧಾರಗಳೇ ಅಂತಿಮವಾಗಿರುತ್ತದೆ. ಇದರಿಂದ ಹೆಣ್ಣಿಗೆ ಯಾವುದೇ ನಿರ್ಧಾರವನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲ. ಅದರಲ್ಲೂ ಮದುವೆ ವಿಚಾರಗಳು ಬಂದಾಗ ಮದುವೆಯಾಗುವ ಹೆಣ್ಣಿಗೆ , ಅವಳ ಇಷ್ಟಗಳಿಗೆ, ಭಾವನೆಗಳಿಗೆ, ತೀರ್ಮಾನಗಳಿಗೆ ಯಾವುದೇ ಬೆಲೆ ಇಲ್ಲ. ಒಂದು ಕುಟುಂಬದಲ್ಲಿ ಹೆಣ್ಣುಮಗಳ ಮದುವೆ, ಬಾಳಸಂಗಾತಿಯ ಬಗ್ಗೆ ನಿರ್ಧಾರವನ್ನು

---

೨ ಹೊಸದಿಕ್ಕು, 'ಗಗನಸಖಿ' ಕಥಾಸಂಕಲನ. ಪುಟ-೮೧.

ಕೈಗೊಳ್ಳುವವನು ತಂದೆ ಅಥವಾ ಅಣ್ಣನೇ ಆಗಿರುತ್ತಾನೆ. ಇವರ ನಿರ್ಧಾರದ ಮೇಲೆ ಹೆಣ್ಣು ಸಾಗಬೇಕಾಗುತ್ತದೆ. ಇಂತಹ ಚಿತ್ರಣವನ್ನು ಸಾರಾರವರು ಈ ಕತೆಯಲ್ಲಿ ಕಟ್ಟಿಕೊಡುತ್ತಾರೆ. ಹಸೀನಾ ಎಂಬ ಹೆಣ್ಣು ತನ್ನ ತಂದೆಯ ಮತ್ತು ಅಣ್ಣಂದಿರ ನಿರ್ಧಾರಗಳ ಮಧ್ಯೆ ಬದುಕುವಂತಹ ಸ್ಥಿತಿ. ಎಲ್ಲೋ ಮೌನವಾಗಿ ಎಲ್ಲವನ್ನೂ ಯೋಚಿಸುತ್ತ ಅಣ್ಣನ ನಿರ್ಧಾರವನ್ನು ಕೊನೆಗೆ ನಿರಾಕರಿಸಿ ತಾನೇ ತನ್ನ ಜೀವನದ ಹೊಸ ಹಾದಿಯ ಬಗ್ಗೆ ಕೊನೆಯ ನಿರ್ಧಾರವನ್ನು ಕೈಗೊಳ್ಳುತ್ತಾಳೆ. ಸ್ವತಃ ಯೋಚಿಸಿ ತನ್ನ ಬಾಳಿನ ಬಗ್ಗೆ ಒಳಿತಾಗುವ ರೀತಿ ನಿರ್ಧಾರವನ್ನು ಕೈಗೊಂಡು ತನ್ನತನವನ್ನು ಅಲ್ಲಿ ಸಾಧಿಸಿದ್ದಾಳೆ. ಜೊತೆಗೆ ತನ್ನ ಜೀವನವನ್ನು ಕುರಿತು ಬಾಳಸಂಗಾತಿಯನ್ನು ಕುರಿತು ಯೋಚಿಸಬಲ್ಲೆ, ನಿರ್ಧಾರವನ್ನು ಕೈಗೊಳ್ಳಬಲ್ಲೆಯೆಂಬುದನ್ನು ಪರೋಕ್ಷವಾಗಿ ಗಂಡುಪ್ರಪಂಚಕ್ಕೆ ತಿಳಿಸಿ ಹೊರಡುತ್ತಾಳೆ. ಅಷ್ಟೇ ಅಲ್ಲದೆ ಹೆಣ್ಣಿಗೂ ಅವಳದ್ದೇ ಆದಂತಹ ಭಾವನೆಗಳು ಆಸೆಗಳಿರುತ್ತವೆ ಎಂಬುದನ್ನು ಸೂಚಿಸುತ್ತಾಳೆ.

ಗಗನಸಖಿ ಎಂಬ ಕಥೆಯಲ್ಲಿ ಅತ್ಯಂತ ಸೂಕ್ಷ್ಮ ಸಂವೇದನೆಯ ದಿಟ್ಟನಿಲುವಿನ ವಿದ್ಯಾವಂತೆಯು, ವಿಚಾರಶೀಲಳೂ ಆದ ನಾಯಕಿ ಕಂಡುಬರುತ್ತಾಳೆ. ಅವಳೇ ರಚನಾ. ಈಕತೆಯಲ್ಲಿ ಮೂಡಿಬಂದಿರುವ ಸ್ತ್ರೀ ಸಂವೇದನೆ ವಿಶಿಷ್ಟ ರೀತಿಯಲ್ಲಿವೆ. ರಚನಾ ಇಡೀ ಪುರುಷ ಪ್ರಧಾನವ್ಯವಸ್ಥೆಗೆ ಸವಾಲಾಗಿ ನಿಲ್ಲುತ್ತಾಳೆ. ಅಷ್ಟೇ ಅಲ್ಲದೆ ಪುರುಷ ಪ್ರಧಾನ ಸಮಾಜದ ದಬ್ಬಾಳಿಕೆಗೆ ಹೆದರದೆ ತನ್ನ ಜೀವನದ ನಿರ್ಧಾರವನ್ನು ತಾನೇ ಸ್ವತಃ ಯೋಚಿಸಿ ಕೈಗೊಳ್ಳುತ್ತಾಳೆ.

ಮೂಲತಃ ವಿದ್ಯಾವಂತ, ಉದ್ಯೋಗಸ್ಥಳಾದ ರಚನಾ ತನ್ನ ಅಣ್ಣ ಮತ್ತು ಅತ್ತಿಗೆಯ ನಿರ್ಧಾರಕ್ಕೆ ವಿರುದ್ಧವಾಗಿ ತನ್ನ ಇಚ್ಛೆಯಂತೆ ಹೊರದೇಶದಲ್ಲಿ ಇಂಜಿನಿಯರಾಗಿ ದುಡಿಯುತ್ತಿದ್ದ ಅರವಿಂದನನ್ನು ಮದುವೆಯಾಗುತ್ತಾಳೆ. ಆದರೆ ಇವಳು ಮದುವೆ ಸಂದರ್ಭದಲ್ಲಿ ಇಟ್ಟುಕೊಂಡಂತಹ ಕನಸುಗಳೆಲ್ಲವೂ ನನಸಾಗುವುದಕ್ಕಿಂತ ಮುಂಚಿತವಾಗಿ ಭಗ್ನವಾಗುತ್ತವೆ. ಏಕೆಂದರೆ ಅರವಿಂದನ ಮನದಲ್ಲಿ ಮೂಡಿದ ಅನುಮಾನ, ಇವನ ಅನುಮಾನದ ಬಲೆಯಲ್ಲಿ ಸಿಲುಕಿ ಒದ್ದಾಡಿ ಇಲ್ಲಿ ಬದುಕಲು ಸಾಧ್ಯವಿಲ್ಲ ಎಂದು ತಿಳಿದು ಆ ಬಲೆಯಿಂದ ಬಿಡಿಸಿಕೊಂಡು ಹೊರಕ್ಕೆ ಬರುತ್ತಾಳೆ. ಹೊರಗೆ ಬಂದ ರಚನಾ ಏನೂ ಮಾಡಬೇಕೆಂದು ತಿಳಿಯದೆ ಯೋಚಿಸಿ ಒಳ್ಳೆಯ ನಿರ್ಧಾರವನ್ನು ಕೈಗೊಳ್ಳುತ್ತಾಳೆ. ಗಂಡನ

ದಬ್ಬಾಳಿಕೆ, ನಡವಳಿಕೆಗೆ ಸವಾಲಾಗಿ ನಿಲ್ಲುತ್ತಾಳೆ. ತಾನೂ ಬದುಕಿ ಸಾಧಿಸಿ ತೋರಬೇಕೆಂಬ ಇಚ್ಛೆಯಿಂದ ಅವನಿಂದ ದೂರ ಬಂದು ಸಾಕಷ್ಟು ನೋವುಗಳನ್ನು ಕಷ್ಟಗಳನ್ನು ಅನುಭವಿಸಿದರೂ ಸಾಧಿಸಿಯೇ ತೋರಿಸುತ್ತಾಳೆ. ಅಷ್ಟೇ ಅಲ್ಲದೆ ಸಮಾಜದ ನಿಯಮಗಳಿಗೂ ವ್ಯವಸ್ಥೆಗೂ ಸವಾಲಾಗುತ್ತಾಳೆ. ಇತ್ತ ತನ್ನ ತಪ್ಪಿನ ಅರಿವಾಗಿ ಅರವಿಂದ ರಚನಾಳ ಬಳಿ ಬಂದಾಗ ಅವನನ್ನು ನಿರಾಕರಿಸುತ್ತಾಳೆ. ಅವನು ತಾನು ಮಾಡಿದ ತಪ್ಪಿಗೆ ಎಷ್ಟೇ ಪ್ರಾಯಶ್ಚಿತ್ತ ಮಾಡಿಕೊಂಡರೂ ರಚನಾ ಒಪ್ಪಿಕೊಳ್ಳುವುದಿಲ್ಲ. ಅವಳು ಅರವಿಂದನ ದಬ್ಬಾಳಿಕೆಗೆ ಬೇಸತ್ತು ಈ ರೀತಿ ಪ್ರತಿಕ್ರಿಯಿಸುತ್ತಾಳೆ. ನಿಜಕ್ಕೂ ಅವಳ ಪ್ರತಿಕ್ರಿಯೆ ವಿಶಿಷ್ಟವಾದುದೇ ಆಗಿದೆ. ಏಕೆಂದರೆ ಪುರುಷ ಸಮಾಜದ ನಿಯಮಗಳ ವ್ಯವಸ್ಥೆಯಲ್ಲಿ ಬದುಕಿದ್ದ ರಚನಾ ಯಾವುದರ ಕಡೆಗೂ ಗಮನ ಕೊಡದೆ ಹಾಗೂ ಹೆದರದೆ ಮಾತನಾಡುವುದು ನಿಜವಾಗಿಯೂ ಒಂದು ಧೈರ್ಯದ ಸಂಗತಿ.

ರಚನಾ ; ಹೇಳಿ, ಏಕೆ ಬಂದಿರಿ ? ಗಂಭೀರವಾಗಿ ಕೇಳಿದಳು.

ಅರವಿಂದ ; ಇದೇನು ರಚನಾ ಹೀಗೆ ಕೇಳುತ್ತೀ ? ನಾನು ನಿನ್ನ ಗಂಡನಲ್ಲವೇ ?

ರಚನಾ ; ಆ ಪದವಿಯನ್ನು ನೀವು ಎಂದೋ ಕಳೆದುಕೊಂಡಿದ್ದೀರಿ. ಈಗ ಆ ನೌಕರಿ ಇಲ್ಲ. 'No Vaccency' ಎಂದಳು. [೩]

ಈ ಮಾತಿನಿಂದ ರಚನಾಳ ದಿಟ್ಟನಿಲುವನ್ನು ಗುರುತಿಸಬಹುದು. ಅಷ್ಟೇ ಅಲ್ಲದೆ ಅರವಿಂದನಿಂದ ಅನ್ಯಾಯಕ್ಕೆ ಒಳಗಾದ ರಚನಾಳಲ್ಲಿ ನೋವೆಲ್ಲವೂ ಈ ರೂಪ ಪಡೆಯಲು ಸಾಧ್ಯವಾಯಿತು. ತನ್ನ ಗಂಡನಿಂದ ಯಾವುದೇ ತಪ್ಪಿಲ್ಲದಿದ್ದರೂ ತಿರಸ್ಕೃತಳಾಗಿದ್ದಳು. ಆದರೆ ಇಂದು ರಚನಾ ಅರವಿಂದನನ್ನು ತಿರಸ್ಕರಿಸುವುದು ಬಹಳ ಮಹತ್ವಕಾರಿಯಾದ ಸಂಗತಿ. ಜೊತೆಗೆ ಮಹತ್ವಕಾರಿಯಾದ ಬೆಳವಣಿಗೆಯೂ ಕೂಡ. ಇಲ್ಲಿ ಗಮನಿಸಲೇಬೇಕಾದ ಅಂಶವೆಂದರೆ ಪುರುಷ ವ್ಯವಸ್ಥೆಗೆ ವಿರುದ್ಧವಾಗಿ ಮಾತನಾಡಲಾಗದ ಸ್ಥಿತಿಯಿರುವಾಗ ಪುರುಷನಿಗೆ ತಿರಸ್ಕರಿಸುವ ಪ್ರವೃತ್ತಿ ರಚನಾಳದ್ದು. ಇನ್ನೊಂದು ಮಾತನ್ನು ನೋಡುವುದಾದರೆ

---

೩. ಬೇಟೆ, ಗಗನಸಖಿ ಕಥಾಸಂಕಲನ. ಪುಟ-೭೧.

"ನೋಡಿ, ನಾನು ಸೀತೆಯಲ್ಲ. ನಾನು ಏನು ಹೇಳಿದೇನೋ ಅದು ನನ್ನ ಕೊನೆಯ ನಿರ್ಧಾರ. ಗಂಡ ಎಷ್ಟೇ ಕ್ರೂರಿಯಾದರೂ ಆತ ಬಂದು ಕ್ಷಮಿಸು ಎಂದೊಡನೆ ಹೆಂಡತಿ ಆತನ ಕಾಲಿಗೆರಗುತ್ತಾಳೆ. ಅಥವಾ ಎರಗಬೇಕು. ಅದು ನೀವೆಲ್ಲಾ ಕಲಿತ ಪಾಠ. ಈಗ ಈ ಪಠ್ಯಗಳು ಬದಲಾಗಿವೆ"[೪]

ರಚನಾ ತನ್ನ ಮಾತಿನ ಮೂಲಕ ಪುರುಷ ಪ್ರಧಾನ ವ್ಯವಸ್ಥೆಗೆ ಹಾಗೂ ಅವರ ನಿಲುವುಗಳಿಗೆ ಎದುರೇಟು ಹಾಕುತ್ತಾಳೆ. ಜೊತೆಗೆ ಬದಲಾಗಿರುವ ಹಾಗೂ ಬದಲಾಗುತ್ತಿರುವ ಹೆಣ್ಣಿನ ಸ್ಥಾನಮಾನವನ್ನು ಕುರಿತು ಮಾತನಾಡುತ್ತಾಳೆ. ಆಧುನಿಕತೆಯಿಂದ ಹೆಣ್ಣಿನ ಜೀವನದಲ್ಲಿ ಉಂಟಾದ ಬದಲಾವಣೆಗೆ ಸಾಂಕೇತಿಕವಾಗಿ ರಚನಾಳ ಜೀವನ ಕಾಣಿಸುತ್ತದೆ. ಅರವಿಂದನನ್ನು ತಿರಸ್ಕರಿಸಿ ಸ್ವತಃ ತನ್ನ ನಿರ್ಧಾರದಿಂದ ತನಗೇ ಇಷ್ಟವಾದ ಮತ್ತೊಬ್ಬ ವ್ಯಕ್ತಿಯನ್ನು ತನ್ನ ಬಾಳಸಂಗಾತಿಯನ್ನಾಗಿ ಆಯ್ಕೆಮಾಡಿಕೊಳ್ಳುತ್ತಾಳೆ. ಇಷ್ಟು ದಿನ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗೆ ವಿಚ್ಛೇಧನ ದೊರೆಯುತ್ತಿತ್ತು. ಆದರೆ ಇಂದು ರಚನಾ ಸ್ವತಃ ಅರವಿಂದನಿಗೆ ವಿಚ್ಛೇದನ ನೀಡುತ್ತಾಳೆ. ಒಟ್ಟಾರೆಯಾಗಿ ಈ ಕತೆಯಲ್ಲಿ ರಚನಾ ವಿದ್ಯಾವಂತಳೂ, ವಿಚಾರವಂತಳೂ, ಧೈರ್ಯವಂತಳೂ ಆಗಿರುತ್ತಾಳೆ. ಸಮಾಜದಲ್ಲಿ ಪುರುಷರು ತಮ್ಮ ಅನುಕೂಲಕ್ಕೆ ಮಾಡಿಕೊಂಡಂತಹ ವ್ಯವಸ್ಥೆಯನ್ನು ಮುರಿಯುವಂತಹ ಪ್ರಯತ್ನ ಇವರಲ್ಲಿದೆ. ಹೀಗೆ ಬದುಕಿನ ಹಲವು ಮುಖಗಳನ್ನು ಹಾಗೂ ಹೆಣ್ಣಿನ ಜೀವನದಲ್ಲಿ ಆಗುತ್ತಿರುವಂತಹ ಬದಲಾವಣೆಯನ್ನು ವ್ಯವಸ್ಥೆಯ ನಿಯಮಗಳನ್ನು ಬದಲಾಗುತ್ತಿರುವ ಹೆಣ್ಣಿನ ನಿಲುವುಗಳನ್ನು ಸಾರಾರವರು ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ. ತನ್ನ ಬದುಕನ್ನೇ ಮರೆತು ತನಗೆ ಯಾವುದೇ ರೀತಿಯ ವ್ಯಕ್ತಿತ್ವಗಳು, ಆಸೆಗಳು ಇಲ್ಲದಂತೆ ಬದುಕುವ ಭಾರತೀಯ ಸ್ತ್ರೀ ಮಾದರಿಗಳ ವ್ಯವಸ್ಥೆಗೆ ಸಾರಾರವರಲ್ಲಿ ಪ್ರಶ್ನೆಗಳಿವೆ. ಗಂಡಿಗೊಂದು ಮತ್ತು ಹೆಣ್ಣಿಗೊಂದು ನ್ಯಾಯ, ವ್ಯವಸ್ಥೆ ಸವಲತ್ತುಗಳನ್ನು ಮಾಡಿ ವಂಚಿಸುತ್ತಿರುವ ಮನೋಧರ್ಮದ ವಿರುದ್ಧ ಇವರ ಕತೆಗಳು ಬೆಳಕು ಚೆಲ್ಲುತ್ತವೆ. ಅದರಲ್ಲಿಯೂ ಇವರ ಕತೆಗಳಲ್ಲಿ ಅನಾವರಣಗೊಂಡಿರುವ ಸ್ತ್ರೀ ಪಾತ್ರಗಳು ಜಾಗೃತಗೊಂಡಿರುವಂತಹದ್ದು.

---

೪ ಗಗನಸಖಿ ಕಥಾಸಂಕಲನ. ಪುಟ-೪೪

ಅಧ್ಯಾಯ -೫

ಸಾರಾರವರ ಕಥೆಗಳಲ್ಲಿ ಧಾರ್ಮಿಕ ನೆಲೆ

ಸಾಹಿತ್ಯ ಬದುಕಿಗೆ ಸಮೀಪವೆನಿಸುವ ಕ್ರಿಯೆ, ಸ್ತ್ರೀಯರ ಸಾಹಿತ್ಯಕೃಷಿ ಅತ್ಯಂತ ಫಲವತ್ತಾಗಿ ನಡೆದಿರುವ ಈ ಸಂದರ್ಭದಲ್ಲಿ ಪರಂಪರೆಯಲ್ಲಿನ ತೊಡಕುಗಳನ್ನು ಬಯಲಿಗೆಳೆಯುವ ಪ್ರಯತ್ನವನ್ನು ತಮ್ಮ ಕೃತಿಗಳಲ್ಲಿ ಮಾಡಿದ್ದಾರೆ. ಅವರಲ್ಲಿ ಸಾರಾ ಅಬೂಬಕ್ಕರ್‌ರವರು ಒಬ್ಬರು. ಸಾರಾರವರ ಕಥೆಗಳಲ್ಲಿ ಹಲವು ವಿಷಯಗಳ ಅನಾವರಣವಾಗಿರುವುದನ್ನು ನೋಡಬಹುದು. ಸಾರಾರವರು ತಮ್ಮ ಹೆಚ್ಚಿನ ಕಥೆಗಳಲ್ಲಿ ಬಡ ಮುಸಲ್ಮಾನರ ಹೆಣ್ಣು ಹಲವು ಸಮಸ್ಯೆಗಳ ಜೊತೆ ಸಿಲುಕಿ ಹೇಗೆ ಒದ್ದಾಡುತ್ತಾಳೆ ಎಂಬುದನ್ನು ಕುರಿತು ಚಿತ್ರಿಸಿರುವುದರ ಜೊತೆಗೆ ಮುಸಲ್ಮಾನ ಹೆಣ್ಣು, ಬಡತನ, ಅನಕ್ಷರತೆ, ಪಿತೃಪ್ರಧಾನ ವ್ಯವಸ್ಥೆ, ಆಚಾರ, ನಿಯಮ, ಗಂಡನ ದೃಷ್ಟಿ ಹೀಗೆ ಹಲವು ವಿಚಾರಗಳನ್ನು ಕುರಿತು ಚಿತ್ರಿಸಿದ್ದಾರೆ.

ಮುಸ್ಲಿಂ ಸಮಾಜದಲ್ಲಿ ಮುಸಲ್ಮಾನ ಹೆಣ್ಣನ್ನು ಪುರುಷ ತನಗೆ ಬೇಕಾದ ರೀತಿಯಲ್ಲಿ ಬಂಧಿಸಿ ನಾಲ್ಕು ಗೋಡೆಗಳ ಮಧ್ಯೆ ಇರಿಸಿದ್ದಾನೆ. ಅಂತೆಯೇ ಧರ್ಮವು ಹೆಣ್ಣನ್ನು ಬಂಧಿಸಿರುವ ಬಲೆಯಾಗಿ ಪರಿಣಮಿಸಿರುವುದನ್ನು ನೋಡಬಹುದು. ಧರ್ಮದ ವಿಚಾರಗಳಲ್ಲಿ ಗಂಡು ತನಗೆ ಅನುಕೂಲವಾಗುವಂತೆ ಹೆಣ್ಣನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದಾನೆ. ಧರ್ಮಕ್ಕೆ ಅಂಟಿಕೊಂಡ ಬದುಕಿದಂತಹ ಮುಸಲ್ಮಾನ ಗಂಡಸರು ಇದರ ಹೆಸರಿನಲ್ಲಿ ಹೆಣ್ಣಲ್ಲಿ ಭಯವನ್ನು ಮೂಡಿಸಿ ಅದರ ವಿರುದ್ಧ ಏನೂ ಮಾತನಾಡದಂತೆ ಮಾಡಿದ್ದರು. ಹೀಗೆ ಸಾರಾ ಅಬೂಬಕ್ಕರ್ ಹೆಣ್ಣಿನ ಮೇಲೆ ಪ್ರಭಾವ ಬೀರುತ್ತಿರುವ ಧರ್ಮದ ವಿಚಾರಗಳನ್ನು ತಮ್ಮ ಕಥೆಯಲ್ಲಿ ತಿಳಿಸಿದ್ದಾರೆ. ಇವರು ಮಹಿಳೆಯ ಬದುಕು ಬವಣೆ ಸ್ಥಿತಿಗಳನ್ನು ಕುರಿತು ವಿವರಿಸುವಾಗ ಧರ್ಮದ ನೆಲೆಯಲ್ಲಿ ಹಾದು ಹೋಗಿದ್ದಾರೆ. ಅಂದರೆ ಸಾರಾರವರು ತಮ್ಮ ಕಥೆಗಳ ರಚನೆಗೆ ಧರ್ಮನಲ್ಲಿ ಸಂಪ್ರದಾಯದಲ್ಲಿ ಇದ್ದಂತಹ ತೊಡಕುಗಳನ್ನು ವಸ್ತುಗಳಾಗಿ ತೆಗೆದು ಕೊಂಡಿರುವುದನ್ನು ನೋಡಬಹುದು. ಮುಸ್ಲಿಂ ಸಮಾಜದಲ್ಲಿ ಧರ್ಮವನ್ನು ಪ್ರತನಿಧಿಸುವ ಧಾರ್ಮಿಕ ನಿಯಮಗಳಾಗಿ ಮಸೀದಿ, ಮಸೀದಿಯ ಮೌಲ್ವಿಗಳು, ತಲಾಖ್, ಘೋಷಾ ಪದ್ಧತಿಗಳು ಕಂಡುಬರುತ್ತದೆ.

ಮಹಿಳೆಯನ್ನು ಅನ್ಯಾಯಕ್ಕೆ, ಅಸಮತೋಲನಕ್ಕೆ ಒಳಪಡಿಸುವಲ್ಲಿ ತನ್ನ ಛಾಪನ್ನು ಮೂಡಿಸಿದೆ. ಇಂತಹ ಚಿತ್ರಣ ಸಾರಾ ಅಬೂಬಕ್ಕರ್‌ರವರ ಹಲವು ಕಥೆಗಳಲ್ಲಿ ಕಂಡುಬಂದಿದೆ. ಅಷ್ಟೇ ಅಲ್ಲದೆ ಅವರು ಮುಸ್ಲಿಂ ಮಹಿಳೆ ಮಸೀದಿ, ಮೌಲ್ವಿಗಳು ತಲಾಖ್ ನಿಕಾಹ್, ಘೋಷಾಗಳ ಮಧ್ಯೆ ಸಿಲುಕಿ ಏನೂ ಮಾಡಲಾರದೆ ಮಾತನಾಡಲಾರದೆ ಎಲ್ಲವನ್ನು ಸಹಿಸಿಕೊಂಡು ಬದುಕುವ ಹೆಣ್ಣನ್ನು ಮೌನವಾಗಿ ಪ್ರತಭಟಿಸದ ಹೆಣ್ಣನ್ನೂ ತಮ್ಮ ಕಥೆಯಲ್ಲಿ ಚಿತ್ರಿಸಿರುವುದನ್ನು ನೋಡಬಹುದು.

ಸಾರಾರವರ '' ಓ.....ರಾಮಾ'' ಎಂಬ ಕತೆಯಲ್ಲಿ ಧರ್ಮದ ಹೆಸರಿನಲ್ಲಿ ಹೆಣ್ಣಿನ ಮೇಲೆ ಹೇಗೆ ಶೋಷಣೆ ನಡೆಯುತ್ತವೆ. ಆಕೆಯನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಹೇಗೆ ಹಿಂಸಿಸಲಾಗಿದೆ ಎಂಬುವರ ಚತ್ರಣ ನೀಡುತ್ತಾರೆ. ಒಟ್ಟಾರೆಯಾಗಿ ಈ ಕತೆಯ ವಸ್ತುವೇ ಸಮಾಜದಲ್ಲಿ ನಡೆಯುತ್ತಿರುವಂತಹ ಕೋಮು ಗಲಭೆ. ಒಂದು ಧರ್ಮದವರು ತಮ್ಮ ಧರ್ಮವೇ ದೊಡ್ಡದೆಂದು ಭಾವಿಸಿ ಧರ್ಮದ ಹೆಸರಿನಲ್ಲಿ ಜನರ ಮಧ್ಯೆ ಗೋಡೆಗಳನ್ನು ಕಟ್ಟಲು ಪ್ರಯತ್ನ ಜೊತೆಗೆ ಸುತ್ತಲಿನ ಸಮಾಜದಲ್ಲಿ ಗಲಭೆಗಳ್ನು ಎಬ್ಬಿಸಹಿಕೊಂಡ ಒಂದು ಧರ್ಮದವರು ಇನ್ನೊಂದು ಧರ್ಮನವರ ಮೇಲೆ ದಬ್ಬಾಳಿಕೆ ನಡೆಸುವಂತಹ ಸಂದರ್ಭದಲ್ಲಿ ಮುಖ್ಯವಾಗಿ ಇವರ ಕಣ್ಣಿಗೆ ಕಾಣುವವಳೇ ಹೆಣ್ಣು ಇವಳ ಜೀವನ ಹಾಗೂ ಕುಟುಂಬವನ್ನು ನಾಶಮಾಡುವ ಚಿತ್ರಣ ಈ ಕಥೆಯಲ್ಲಿದೆ.

ಈ ಕಥೆ ಗುಜರಾತಿನಲ್ಲಿ ನಡೆದ ಕೋಮುಘರ್ಷಣೆಯ ಒಂದು ನೋಟ, ಗುಜರಾತಿನ ಘರ್ಷಣೆಯ ಸಂದರ್ಭದಲ್ಲಿ ಒಂದು ಧರ್ಮದವರು ಇನ್ನೊಂದು ಧರ್ಮದವರ ಮೇಲೆ ನಡೆಸಿದ ಹಲ್ಲೆ, ದೌರ್ಜನ್ಯವನ್ನು ನೋಡಬಹುದು. ಈ ಕಥೆಯ ಪ್ರಮುಖ ಪಾತ್ರ ಖಾನ್ ಸಾಹೇಬರದು. ಇವರ ಮಗಳು ಶಬಾನ.ಕಾಲೇಜು ಮೆಟ್ಟಿಲು ಹತ್ತಿದಂತಹ ಹುಡುಗಿ ಬೇರೆ ಧರ್ಮದವರು ನಡೆಸಿದ ಹಲ್ಲೆ ದೌರ್ಜನ್ಯಕ್ಕೆ ಒಳಗಾಗಿ ಅನ್ಯಾಯಗೊಂಡವಳು ಕೊನೆಗೆ ತನ್ನ ತಂದೆ ತಾಯಿಯರನ್ನು ಕಳೆದುಕೊಂಡು ಅರಳುವ ಮುನ್ನವೇ ಕಿತ್ತು ಹಾಕಿದ ಮೊಗ್ಗಿನಂತೆ ಶಬಾನಳ ಜೀವನ ಬಾಳಿ ಬದುಕಬೇಕದ್ದ ಹುಡಗಿ ಎಲ್ಲಾವನ್ನು ಕಳೆದುಕೊಂಡು ಮಾನಸಿಕ ಹಾಗೂ ದೈಹಿಕ ರೋಗಿಯಾಗಿ ನಿರಾಶ್ರಿತರ ಶಿಬಿರದಲ್ಲಿ ಬಾಳಬೇಕಾದ ಸ್ಥಿತಿಗೆ ಹೋಗುತ್ತಾಳೆ. ಘಟನೆ ನಡೆದಾಗ ಆಕೆಯ

ಕಣ್ಣುಗಳಲ್ಲಿದ್ದ ಆ ನೋಟವನ್ನು ದಯನೀಯ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಆಕೆಯ ಸುತ್ತಲೂ ನಿಂತದ್ದವರು ಆ ಗಳಿಗೆಯಲ್ಲಿ ಮನುಷ್ಯರಾಗಲಿಲ್ಲ.

'ಸತ್ತ ಮೃಗವನ್ನು ಕಾಡು ಪ್ರಾಣಿಗಳು ಎಳೆದಾಡಿ ಹರಿದು, ಹರಿದು ಮುಕ್ಕುವಂತೆ ಆಕೆಯ ದೇಹವನ್ನು ಬೆತ್ತಲೆ ಮಾಡಿದ ಆ ಗುಂಪು ತಮ್ಮ ಪೈಶಾಚಿಕ ಕಾಮನೆಗಳನ್ನು ತೀರಿಸಿಕೊಳ್ಳತೊಡಗಿದರು....ನಿಜಕ್ಕೂ ಈ ದೃಶ್ಯ ಬಹಳ ಕರುಣಾಜನಕವಾದದ್ದು. ೨೧ನೇ ಶತಮಾನದಲ್ಲಿ ಧರ್ಮದ ಹೆಸರಿನಲ್ಲಿ ಧರ್ಮಕ್ಕಾಗಿ ಮನುಷ್ಯ ಮಾನವೀಯತೆಯನ್ನು ಮರೆತು ಮನುಷ್ಯನನ್ನೇ ಪ್ರಾಣಿಗಳಂತೆ ತಿಂದು ಹಾಕುವ ಪ್ರವೃತ್ತಿ ಬಹಳ ಅಮಾನವೀಯವಾದದ್ದು. ಅಷ್ಟೇ ಅಲ್ಲದೆ ಅವಹೇಳನವೂ ಆದದ್ದು. ಈಗಲೂ ಒಂದು ಹೆಣ್ಣು ಈ ರೀತಿ ಅನ್ಯಾಯಕ್ಕೆ ಒಳಗಾಗಿ ಸಾಯುವ ಸ್ಥಿತಿಯನ್ನು ನೋಡಿದರೆ ಇಷ್ಟೆಲ್ಲಾ ಸಾಧನೆಗೆ ಅರ್ಥವೇ ಇಲ್ಲ.

ಮತ್ತೊಂದು ಕಥೆಯಾದಂತಹ 'ಕುಪ್ಪಸ ತೊಟ್ಟವಳು' ಎಂಬಲ್ಲಿ ಮತಾಂತರದ ಪ್ರಸಂಗ ಬರುತ್ತದೆ. ಭಟ್ಟರ ಮಗನಿಂದ ಅನ್ಯಾಯಕ್ಕೆ ಒಳಗಾದ ಮಾದೇವಿ ಕೆಳಜಾತಿಯ ಹೆಣ್ಣು. ಜೊತೆಗೆ ಅಸಾಹಯಕಳು. ಪುರುಷರಿಂದ ಅನ್ಯಾಯವಾಗಿದ್ದರೂ ಏನೂ ಮಾಡಲಾಗದೆ ಬದುಕುತ್ತಿದ್ದವಳು. ಹೀಗಿರುವಾಗ ಇವಳಿಗೆ ಒಬ್ಬ ಮುಸ್ಲಿಂ ವ್ಯಕ್ತಿಯ ಪರಿಚಯವಾಗುತ್ತವೆ. ಪರಿಚಯ ಬಹುಬೇಗ ಸ್ನೇಹಕ್ಕೆ ತಿರುಗುತ್ತದೆ. ಇಬ್ಬರನ್ನು ಇದು ಆಕರ್ಷಿಸುತ್ತದೆ. ಮಾದೇವಿ ಆಗ ಒಂದು ಧರ್ಮಕ್ಕೆ ಪುರುಷ ಪ್ರಧಾನ ವ್ಯವಸ್ಥೆಗೆ ಸವಾಲಾಗಿ ನಿಲ್ಲುತ್ತಾಳೆ. ಅಂದರೆ ಮುಸಲ್ಮಾನ ವ್ಯಕ್ತಿಯ ಜೊತೆ ಮದುವೆಯಾಗಲು ಒಪ್ಪುತ್ತಾಳೆ. ಆತನು ಸಹ ಒಪ್ಪಿಕೊಳ್ಳುತ್ತಾನೆ. ಆಗ ಮಾದೇವಿ ತನ್ನ ಧರ್ಮವನ್ನು ಬಿಟ್ಟು ಆ ಧರ್ಮಕ್ಕೆ ಸೇರುತ್ತಾಳೆ. ಕಾನೂನು ರೀತಿಯಲ್ಲಿಯೇ ಅವಳು ಮತಾಂತರ ಗೊಳ್ಳುತ್ತಾಳೆ. ಇದಕ್ಕೆ ಒಪ್ಪದ ಹಿಂದೂ ಧರ್ಮದವರು ಮಾದೇವಿಗೆ ಹಲವು ರೀತಿಯಲ್ಲಿ ಮನ ಒಲಿಸುತ್ತಾರೆ. ನೀನು ಮತಾಂತರ ಹೊಂದುವುದು ಬೇಡ ಎಂದು ಹಲವು ವಿಧದಲ್ಲಿ ಹೇಳುತ್ತಾರೆ ಹಲವು ಆಸೆ-ಆಮಿಷಗಳನ್ನು ತೋರಿಸುತ್ತಾರೆ. ಆದರೆ ಮಾದೇವಿ ಯಾವುದಕ್ಕೂ ಒಪ್ಪದೆ ತನ್ನ ನಿರ್ಧಾರವನ್ನು ಬದಲಾಯಿಸುವುದಿಲ್ಲ.

ಒಟ್ಟಿನಲ್ಲಿ ಗಮನಿಸಬೇಕಾದುವೆಂದರೆ ಜಾತಿ, ಧರ್ಮಗಳ ಅಂಧಕಾರದಲ್ಲಿ ಜನರು ಪ್ರೀತಿ-ಪ್ರೇಮ-ವಿಶ್ವಾಸಗಳನ್ನು ಮರೆತು ಅಂದಕಾರದಲ್ಲಿ ಮುಳುಗಿ ಮಾನವೀಯ ಮೌಲ್ಯಗಳಿಗೆ ಇಂದು ಬೆಲೆ ಇಲ್ಲದಂತಾಗಿದೆ. ಇವರಿಗೆ ಮನುಷ್ಯರಿಗಿಂತ ಧರ್ಮವೇ ಹೆಚ್ಚಾಗಿ ಅವರ ಉಳುವಿಗಾಗಿ ಏನು ಬೇಕಾದರೂ ಮಾಡಲು ಸಿದ್ಧರಾಗಿದ್ದಾರೆ.

''ನಿಯಮ ನಿಯಮಗಳ ನಡುವೆ'' ಎಂಬ ಕಥೆಯಲ್ಲಿಯೂ ಧಾರ್ಮಿಕ ನೆಲೆಯನ್ನು ನೋಡಬಹುದು. ಧರ್ಮದ ನಿಯಮಗಳ ಪಾಲನೆಯಲ್ಲಿ ಹೆಣ್ಣು ಹೇಗೆ ಆಸಕ್ತಳಾಗಿದ್ದಳು ಎಂಬುದನ್ನು ನೋಡಬಹುದು. ಅಷ್ಟೇ ಅಲ್ಲದೆ ಧರ್ಮದ ನಿಯಮಗಳ ಪಾಲನೆಗಾಗಿ ಪ್ರಕೃತಿ ನಿಯಮದ ವಿರುದ್ಧ ಹೋರಾಟ ನಡೆಸಿ ವಿಫಲರಾಗುವ ಚಿತ್ರಣವನು ಈ ಕಥೆ ಕಟ್ಟಿಕೊಡುತ್ತದೆ. ಕೃತಕವಾದ ಮತೀಯ ನಿಯಮಗಳನ್ನು ಪಾಲಿಸುವುದಕ್ಕಾಗಿ ಪ್ರಕೃತಿ ಸಹಜವಾದ ನಿಯಮಗಳನ್ನು ಗಾಳಿಗೆ ತೂರಿ ಪುರುಷ ದಬ್ಬಾಳಿಕೆ ಶೋಷಣೆಯ ದಾರಿಯನ್ನು ಅನುಸರಿಸುತ್ತದೆ. ಕಥೆಯ ಕೇಂದ್ರಪಾತ್ರ ಜೊಹರಾಳದು ಅವಳು ಬಡತನ, ದಬ್ಬಾಳಿಕೆಗೆ ಒಳಗಾದವಳು ಸಾರಾರವರು ಈ ಕತೆಯಲ್ಲಿ ಧರ್ಮದ ನಿಯಮಗಳಾದ ತಲಾಖ್, ಬಜ್ಜತ್, ಮೌಲ್ವಿಯರ ಚಿತ್ರಣ ನೀಡುವುದರ ಜೊತೆಗೆ ಹೇಗೆ ಮುಸ್ಲಿಂ ಧರ್ಮದಲ್ಲಿಲ್ಲಿನ ನಿಯಮಗಳು ಹೆಣ್ಣನ್ನು ಗಂಡಿನ ಮುಷ್ಠಿಯಲ್ಲಿ ಇಟ್ಟುಕೊಳ್ಳಲು ಅಥವಾ ಅವುಗಳನ್ನು ಶೋಷಿಸಲು ರೂಪಿತವಾಗಿದ್ದವು ಎಂಬುದನ್ನು ತಿಳಿಸುತ್ತಾರೆ. ಜೊಹರಾಳ ಗಂಡ ಖಾದರ್ ಸಣ್ಣ ಕಾರಣಕ್ಕಾಗಿ ತಲಾಖ್ ನೀಡುತ್ತಾನೆ. ಜೊಹರಾಳ ತಪ್ಪಿಲ್ಲದಿದ್ದರೂ ಶಿಕ್ಷೆ ಇವಳಿಗೆ ಸಿಗುತ್ತದೆ. ಮುಕ್ರಿ ತಲಾಖ್ ಪತ್ರವನ್ನು ತಂದು ಕೊಟ್ಟಾಗ ಅದನ್ನು ನೋಡಿ ಜೊಹರಾ ಚಿಂತಾಮಗ್ನಳಾಗುತ್ತಾಳೆ. ಬಹಳ ದುಃಖವೂ ಆಗುತ್ತದೆ. ಇಲ್ಲಿಂದ ಜೊಹರಾಳ ಜೀವನ ಅಂಧಕಾರದಲ್ಲಿ ಮುಳುಗಿತು. ಖಾದರ್‌ನ ದೌರ್ಜನ್ಯಕ್ಕೆ ಅನ್ಯಾಯದ ಕೆಲಸಕ್ಕೆ ಧರ್ಮ ಪರಿಪಾಲಕನಾದ ಮುಕ್ತಿಯು ಸಹಾಯ ಹಸ್ತ ನೀಡಿರುವುದನ್ನು ನೋಡಬಹುದು. ಜೊಹರ ಅಂಧಕಾರದಲ್ಲಿ ದುಃಖದ ಬಡತನದ ನಡುವೆ ಸಾಗಿಸುತ್ತಿದ್ದ ಸಂದರ್ಭದಲ್ಲಿ ಹಲವು ತಿಂಗಳುಗಳ ನಂತರ ಖಾದರ್‌ಗೆ ತನ್ನ ತಪ್ಪಿನ ಅರಿವಾಗಿ ಮತ್ತೆ ಜೊಹರಾಳ ಜೊತೆ ಸಂಸಾರ ಮಾಡಲು ಬಯಸುತ್ತಾನೆ. ಆದರೆ ಅದು ಸಾಧ್ಯವಿರಲಿಲ್ಲ. ಏಕೆಂದರೆ ಮುಸ್ಲಿಂ ಧರ್ಮದ ನಿಯಮಗಳ ಪ್ರಕಾರ ಒಂದು ಭಾರಿ ತಲಾಖ್ ನೀಡಿದಾಗ ಆ ಸಂಬಂಧ ಮದುವೆ ಎಲ್ಲಾ ವಿಧದಿಂದಲೂ ಮುರಿದು ಬೀಳುತ್ತದೆ. ಅವರಿಗೆ ಯಾವ ನಂಟು ಇರುವುದಿಲ್ಲ ಮತ್ತೊಮ್ಮೆ

ಸಂಬಂಧ ಬೆಳೆಸಬೇಕಾದರೆ ಧರ್ಮದ ಪ್ರಕಾರ ಒಜ್ಜತ್ ಮಾಡಬೇಕಾಗುತ್ತದೆ. (ಒಜ್ಜತ್ ಎಂದರೆ ಮರು ವಿವಾಹಕ್ಕಾಗಿ ಇರುವ ಒಂದು ನಿಯಮ)

ಮುಸ್ಲಿಂ ಧರ್ಮದಲ್ಲಿ ಸಮಾಜದ ಗಂಡಸರಿಂದ, ಮುಕ್ರಿಗಳಿಂದ, ಮಸೀದಿಯ ಮೌಲಾನಗಳಿಂದ ನಿರ್ಮಿತವಾದ, ಅಮಾನವೀಯ ಪದ್ಧತಿಯೇ ಒಜ್ಜತ್. ಮರುಮದುವೆ ಮಾಡಬೇಕಾದರೆ ವಿಚ್ಛೇದಿತಳಾದ ಹೆಣ್ಣು ಮದುವೆಗೆ ಒಪ್ಪಿಕೊಂಡಿದ್ದರೆ ಅವಳಿಗೆ ಒಂದು ದಿನದ ಮದುವೆ ಮಾಡಬೇಕಾಗುತ್ತದೆ. ಈ ಮದುವೆಯಲ್ಲಿ ಅವಳು ಒಂದು ರಾತ್ರಿಯಾದರೂ ಬೇರೆ ಗಂಡಿನ ಜೊತೆ ಕಳೆಯಲೇ ಬೇಕು. ನಂತರ ಇವಳಿಗೆ ತನ್ನ ಮೊದಲಿನ ಹುಡುಗನ ಜೊತೆ ಮದುವೆ ಮಾಡಲಾಗುತ್ತದೆ. ಇಂತಹ ಪದ್ಧತಿಗೆ ಸಾಮಾನ್ಯವಾಗಿ ಯಾವ ಹೆಣ್ಣುಮಕ್ಕಳು ಒಪ್ಪುವುದಿಲ್ಲ. ಆದರೆ ಇಲ್ಲಿ ಜೊಹರ ಒಪ್ಪಿಕೊಳ್ಳುತ್ತಾಳೆ. ಏಕೆಂದರೆ ಪರಿಸ್ಥಿತಿ ಬಡತನ, ತನ್ನ ತಾಯಿ ಮತ್ತು ತಮ್ಮನ ಮಾತುಗಳಿಗೆ ಬೇಸತ್ತು ಮತ್ತು ತನ್ನ ಮಕ್ಕಳ ಮುಂದಿನ ಭವಿಷ್ಯಕ್ಕಾಗಿ ಒಪ್ಪಿಕೊಳ್ಳುತ್ತಾಳೆ. ನಿಜಕ್ಕೂ ಇವೆಲ್ಲಾ ನಿಯಮಗಳು ಹೆಣ್ಣನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸಿಸಲು ಇರುವ ಕೃತಕ ಮತೀಯ ನಿಯಮ ಆದರೆ ಇದರಲ್ಲಿ ಜೊಹರ ತನ್ನ ಪರಿಸ್ಥಿತಿಯಿಂದ ಅನ್ಯಾಯಕ್ಕೆ ಒಳಗಾಗಿಯೇ ಬಿಡುತ್ತಾಳೆ. ಒಜ್ಜತ್ ಮಾಡಬೇಕಾದರೆ ಆ ರಾತ್ರಿಯ ಮುಂಚಿತವಾಗಿ ಋತುಸ್ನಾನವಾಗಿರಬೇಕು. ಅದಕ್ಕಾಗಿ ಕಾದು ಕುಳಿತರೆ ಎಲ್ಲಿ ಖಾದರ್ ಮತ್ತೆ ತನ್ನ ನಿರ್ಧಾರವನ್ನು ಬದಲಿಸುತ್ತಾನೋ ಎಂದು ಹೆದರಿ ಬೇಗನೆ ಋತುಸ್ನಾನವಾಗಲು ಹಕೀಮನ ಬಳಿ ಹೋಗಿ ಔಷಧಿಯನ್ನು ತಂದು ಜೊಹರಾಳಿಗೆ ನೀಡುತ್ತಾರೆ. ಆದರೆ ಇದು ಫಲಕಾರಿಯಾಗದೆ ಅಧಿಕ ರಕ್ತಸ್ರಾವದಿಂದ ಕೊನೆಗೂ ಜೊಹರಾ ನಿಶ್ಶಕ್ತಿಗೆ ಒಳಗಾಗಿ ಸಾವನ್ನಪ್ಪುತ್ತಾಳೆ. ನಿಜಕ್ಕೂ ಧರ್ಮದ ನಿಯಮವನ್ನು ಪಾಲಿಸುವುದಕ್ಕೆ ಜೊಹರಾಳ ಪ್ರಾಣವನ್ನೇ ಕೊಡಬೇಕಾಯಿತು. ಕೆಲವು ಅಮಾನವೀಯ ಮೌಲ್ಯಗಳನು ಪರಿಪಾಲಿಸಲು ಹೆಣ್ಣು ಆಸಕ್ತಳಾಗಿರುವುದು ಕಂಡುಬರುತ್ತದೆ. ಇದಕ್ಕೆ ಸಾಕ್ಷಿಯಾಗಿ ಜೊಹರಾಳ ತಾಯಿ ಕಂಡುಬರುತ್ತಾಳೆ. ಎಲ್ಲೋ ಒಂದೆಡೆ ಹೀಗಾಗಲೂ ಇವರಲ್ಲಿ ಇದ್ದಂತಹ ಬಡತನ ಅಸಾಹಯಕತೆ, ಅನಕ್ಷರತೆಯೂ ಕಾರಣ. ಇಂತಹ ನಿಯಮಗಳು ಸಮಾಜದಲ್ಲಿ ರೂಪಿತವಾಗಿದ್ದವೆಂದು ಹೇಳಬಹುದು. ಪುರುಷ ಪ್ರಧಾನ /ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಶೋಷಿಸಲೆಂದೇ ಕೆಲವು ನಿಯಮಗಳು ಹುಟ್ಟುತ್ತಿರುವುದನ್ನು ನೋಡಬಹುದು.

'ಓ ಗಂಡೇ...' ಎಂಬ ಕತೆಯಲ್ಲಿ ಧಾರ್ಮಿಕ ನಿಯಮವನ್ನು ನಂಬಿ ಪಾಲನೆ ಮಾಡಿಕೊಂಡು ಬಂದಂತಹ ಜನರು ಗಂಡು ಮಗುವೇ ಶ್ರೇಷ್ಠ ಎಂದು ಬಾವಿಸಿ ಹೆಣ್ಣನ್ನು ಕಡೆಗಣಿಸುವ ಅವಳಿಗೆ ಯಾವುದೇ ಪ್ರಾಶಸ್ತ್ಯ ನೀಡದಿರುವುದನ್ನು ನೋಡಬಹುದು. ಈ ಕತೆಯಲ್ಲಿ ಇಸ್ಲಾಂ ಧಾರ್ಮಿಕ ನಿಯಮದಂತೆ ಓರ್ವನಿಗೆ ಹೆಣ್ಣು ಮಕ್ಕಳು ಮಾತ್ರವಿದ್ದು ಅವರು ಬಡತನದಲ್ಲಿದ್ದರೂ ಆ ತಂದೆಯ ಅಣ್ಣತಮ್ಮಂದಿರು ಇವರಿಗೆ ಗಂಡು ಮಕ್ಕಳಿಲ್ಲ ಎಂಬ ಕಾರಣದಿಂದ ಧರ್ಮದ ಹೆಸರಿನಲ್ಲಿ ಆಸ್ತಿಯ ಪಾಲನ್ನು ಪಡೆದುಕೊಳ್ಳುತ್ತಾರೆ. ಇಂತಹ ವಿಲಕ್ಷಣ ಜಗತ್ತಿನ ಚಿತ್ರಣ ಈ ಕತೆಯಲ್ಲಿ ದೊರೆಯುತ್ತದೆ. ಈ ರೀತಿಯ ಸ್ಥಿತಿ ಮುಸ್ಲಿಂಧರ್ಮದಲ್ಲಿ ಬರುತ್ತವೆ. ಇತರ ಧರ್ಮದಲ್ಲಿಯೂ ಬೇರೆ ಸ್ವರೂಪದಲ್ಲಿರುವುದನ್ನು ನೋಡಬಹುದು.

ಕೇಂದ್ರಪಾತ್ರ ಸೌದಾಬಿಯದು. ಇವಳ ಗೆಳತಿ ವಾಸಂತಿ ಇವರಿಬ್ಬರು ಸುಮಾರು ವರ್ಷಗಳ ನಂತರ ಬೇಟಿಯಾಗುತ್ತಾರೆ. ಪರಸ್ಪರ ಇಬ್ಬರು ಮಾತಾಡುವಂತಹ ಸಂದರ್ಭದಲ್ಲಿ ಗಂಡು ಮಗುವಿನ ವಿಚಾರ ಬಂದಾಗ ವಾಸಂತಿ ಹೀಗೆ ಹೇಳುತ್ತಾಳೆ.

''ಹೌದು ಅದೇನೋ ಸರಿ, ವಾಸಂತಿ ನಡುವೆ ನುಡಿದಳು. ಆದರೆ ನಮಗೊಂದು ಸಂಪ್ರದಾಯವಿದೆ. ಗಂಡು ಮಕ್ಕಳಿಲ್ಲದಿದ್ದರೆ ಹಿರಿಯರು ಸ್ವರ್ಗಕ್ಕೆ ಹೋಗುವುದಿಲ್ಲಾಂತ. ಅವರು ಸ್ವರ್ಗಕ್ಕೆ ಹೋಗಬೇಕಾದರೆ ಗಂಡು ಮಕ್ಕಳೇ ಕರ್ಮಗಳನ್ನೆಲ್ಲಾ ಮಾಡ್ಬೇಕು ಅಂತ. ಹಾಗಾಗಿ ಈಗ ದಿನಾಲು ನನ್ನ ಅತ್ತೆಯ ಕಿರಿ ಕಿರಿ ಇದ್ದೇ ಇದೆ.''[೧]

ಮೇಲಿನ ಮಾತುಗಳಿಂದ ಧರ್ಮ ಸಂಪ್ರದಾಯಗಳಲ್ಲಿ ಮೂಢನಂಬಿಕೆಗಳು ಹೇಗೆ ಮನೆ ಮಾಡಿಕೊಂಡಿತ್ತು ಎಂಬುದನ್ನು ತಿಳಿಯಬಹುದು. ಅದನ್ನು ಜನರು ನಂಬಿ ಗಂಡಿಗಾಗಿ ಪರಿತಪಿಸುವ ರೀತಿ ಮುಖ್ಯವಾದದ್ದು. ಅದಕ್ಕಾಗಿ ಗಂಡು ಮಗುವಿಗೆ ಬೇಡಿಕೆ, ಪ್ರಾಶಸ್ತ್ಯ, ವಾಸಂತಿಯ ಮಾತಿನಲ್ಲಿ ವ್ಯಕ್ತವಾದ ಧೋರಣೆಯಂತೆ ಮುಸ್ಲಿಂ ಧರ್ಮದಲ್ಲಿಯೂ ಹಲವು ನಂಬಿಕೆಗಳು ಈ ರೀತಿಯದ್ದೇ ಇದೆ ಎಂಬುದನ್ನು ಸೌದಬಿಯ ಮಾತುಗಳಿಂದ ನಗಮನಿಸಬಹುದು.

---

೧ ಓ ಗಂಡೇ....ಗಗನಸಖಿ ಕಥಾಸಂಕಲನ. ಪುಟ-೯೯.

''ಆದರೆ ಗಂಡುಮಗುವಿಗಾಗಿ ಪರಿತಪಿಸುವ ಈ ರೋಗವಿದೆಯೆಲ್ಲ?
ಅದು ನಮ್ಮಲ್ಲೂ ಧಾರಾಳ ಇದೆ. ಗಂಡುಮಗುವಿಗಾಗಿ ಇನ್ನೊಬ್ಬಳನ್ನು
ಮದುವೆಯಾದದ್ದು ಇದೆ ಎಂದಳು''

ಸೌದಾಬಿಯ ಮಾತುಗಳಿಂದಲೇ ಗುರುತಿಸಬಹುದು.ನಮ್ಮ ಸಮಾಜದಲ್ಲಿ ಗಂಡು ಮಗುವಿನ ಸ್ಥಾನವೇನು ಅವನಿಗೆ ಕೊಡುವ ಪ್ರಾಶಸ್ತ್ಯ ಗೌರವವು ವಿಶಿಷ್ಟವಾದದ್ದು. ಇದರ ಅನುಭವ ಸೌದಬಿಗೂ ಬಹಳ ಬೇಗನೆ ಆಗಿರುತ್ತವೆ. ಸೌದಾಬಿಗೆ ಗಂಡು ಮಕ್ಕಳಿರಲಿಲ್ಲ. ಮೂವರು ಹೆಣ್ಣುಮಕ್ಕಳೆ ಇವಳು ಸಹ ಗಂಡು ಮಗುವಿಗಾಗಿ ಪರಿತಪಿಸುವುದು. ಉಂಟು. ಕೊನೆಗೆ ಆಸ್ತಿಯ ವಿಚಾರ ಬಂದಾಗ ಮೂರು ಜನ ಹೆಣ್ಣುಮಕ್ಕಳು ಪಾಲನ್ನು ಕೇಳುತ್ತಾರೆ. ಹೀಗಿರುವಾಗ ಸೌದಾಬಿಯ ಮೈದುನ ಧರ್ಮದ ನಿಯಮದಂತೆ ಈ ಆಸ್ತಿಯಲ್ಲಿ ಪಾಲನ್ನು ಕೇಳಿದ್ದಾನೆ. ''ಮುಸ್ಲಿಂ ಧರ್ಮದ ಪ್ರಕಾರ ಗಂಡು ಮಕ್ಕಳಿಲ್ಲದ ಕಾರಣ ತಂದೆಯ ಆಸ್ತಿಯಲ್ಲಿ ಮೂರನೇ ಒಂದುಪಾಲು ತಂದೆಯ ಸಹೋದರನಿಗೆ ಹೋಗಬೇಕು''. ಇದರ ಪ್ರಕಾರ ಆಸ್ತಿಯ ಹಕ್ಕುದಾರನಾಗಿ ಇಲ್ಲಿ ಸೌದಬಿಯ ಮೈದುನ ಕಂಡುಬರುತ್ತಾನೆ. ಮೊದಲೇ ಗಂಡನನ್ನು ಕಳೆದುಕೊಂಡು ಬಡತನದಲ್ಲಿನರಳುತ್ತಿದ್ದ ಸೌದಾಬಿಗೆ ಸಹಿಸಲಾರದಷ್ಟುನೋವಾಗುತ್ತದೆ. ಜೊತೆಗೆ ಬೇಸರವೂ ಆಗುತ್ತದೆ. ಬೇಸರ ಹಾಗೂ ನೋವು ಇದ್ದರೂ ಸೌದಾಬಿ ಧರ್ಮದ ವಿರುದ್ಧ ಸಾಗಲು ಪ್ರಯತ್ನಿಸುವುದಿಲ್ಲ. ಧರ್ಮದ ಪಾಲನೆಯಲ್ಲಿ ಸೌದಬಿಯು ತೊಡಗುತ್ತಾಳೆ. ಒಂದುದಿನ ಹೀಗೆ ಹೇಳುತ್ತಾಳೆ.

''ಹೌದು ನಿಯಮಗಳನ್ನು ಯಾರೂ ಪ್ರಶ್ನಿಸುವಂತಿಲ್ಲ. ಅನುಸರಣೆ ಮಾತ್ರ ನಮ್ಮ ಕರ್ತವ್ಯ'' ೧೩. ಸೌದಾಬಿಹೇಳುವಮಾತಿನಿಂದಲೇ ಗ್ರಹಿಸಬಹುದು. ಧರ್ಮವನ್ನು ಹೇಗೆ ಪಾಲಿಸುತ್ತಿದ್ದಳು. ಅದಕ್ಕಿಂತ ಹೆಚ್ಚಾಗಿ ಜನರ ಮೇಲೆ ಧರ್ಮವನ್ನು ಹೇರಿಸಲಾಗಿತ್ತು ಎಂದು. ಸೌದಾಬಿ ಧರ್ಮದ ನಿಯಮವನ್ನು ಪಾಲಿಸುವುದೇ ತನ್ನ ಕರ್ತವ್ಯವೆಂದು ನ ಂಬಿರುತ್ತಾಳೆ. ಅದರ ವಿರುದ್ಧ ಮಾತನಾಡುವ ಪ್ರಯತ್ನವೇ ಇಲ್ಲ.ಧರ್ಮ, ಪರಂಪರೆಯ ವಿರುದ್ಧ ಯಾವ ವಿರೋಧ ಇಲ್ಲ. ತನ್ನ ಮೈದುನ ಕೇಳುವ ಆಸ್ತಿಯ ಹಕ್ಕನ್ನು ಧರ್ಮದ ನಿಯಮವೆಂದು ಸೌದಾಬಿ ಒಪ್ಪಿಕೊಳ್ಳುತ್ತಾಳೆ. ಆದರೆ ಇವಳ ಮಕ್ಕಳು ಅದನ್ನು

ಒಪ್ಪುವುದಿಲ್ಲ. ತಾಯಿಯಲ್ಲಿ ವಿರೋಧವಿಲ್ಲದಿದ್ದರೂ ಮಕ್ಕಳಲ್ಲಿ ಧರ್ಮದ ಬಗ್ಗೆ ವಿರೋಧವಿದೆ. ಜೊತೆಗೆ ಪರಂಪರೆಯನ್ನು ಮುರಿಯುವ ಪ್ರಯತ್ನವೂ ಇದೆ. ಆಸ್ತಿಯಲ್ಲಿ ಪಾಲನ್ನು ಕೇಳಿದ ಚಿಕ್ಕಪ್ಪನ ಸಂಬಂಧವೇ ಬೇಡವೆಂದು ಅವನ ಮನೆಗೆ ಇದ್ದಂತಹ ಸೇತುವೆಯನ್ನು ಮುರಿದುಹಾಕುತ್ತಾರೆ. ಇಲ್ಲಿ ಪರಂಪರೆಯ ಸಂಕೇತವಾಗಿ ಸೌದಾಬಿಕಂಡುಬಂದರೆ ಮುರಿಯುವ ಹಾಗೂ ಬದಲಾವಣೆಯ ಸಂಕೇತವಾಗಿ ಮಗಳು ಕಂಡುಬರುತ್ತಾಳೆ. ಇಲ್ಲಿ ಸೇತುವೆಯನ್ನು ಮುರಿಯುವ ಪ್ರಯತ್ನದಿಂದ ವಿರೋಧವನ್ನು ಸೂಚಿಸುತ್ತಿದ್ದಾರೆ. ಇದನ್ನು ದೂರದಿಂದ ನೋಡುತ್ತಾ ಸೌದಾಬಿಯ ಮೈದುನ ಹೀಗೆ ಹೇಳುತ್ತಾನೆ.

'' ನೋಡು ನಾವೇನಾದರೂ ಧರ್ಮ ವಿರೋಧವಾದುದನ್ನು ಮಾಡಿದ್ದೇವೆಯೇ? ಧರ್ಮದ ನಿಯಮದಂತೆ ನಡೆದುಕೊಂಡದ್ದು ತಪ್ಪೆ. ನಾನು ಹಾಗೆ ನಡೆದುಕೊಳ್ಳದಿದ್ದರೆ ನ್ಯಾಯ ತೀರ್ಮಾನದ ದಿನ ಅಲ್ಲಾಹನ ಪ್ರಶ್ನೆಗೆ ಉತ್ತರಿಸಬೇಕಾಗುತ್ತದೆ ಎಂದನು. ಇವನ ಮಾತಿನಿಂದಲೇ ಗುರುತಿಸಬಹುದು. ಧರ್ಮವು ಮನುಷ್ಯರ ಮೇಲೆ ಹೇರಲಾಗಿತ್ತು. ಅಂದರೆ ಧರ್ಮ ಹಾಗೂ ದೇವರ ಬಗೆಗೆ ಮನುಷ್ಯನಲ್ಲಿ ಭಯವಿದೆ. ಭಯದಿಂದ ಆತ ಧರ್ಮದ ನಿಯಮಗಳನ್ನು ಪಾಲಿಸುತ್ತಿದ್ದಾನೆ. ಧರ್ಮವನ್ನು ಭಯಪಡಿಸುವುದರ ಜೊತೆಗೆ ಹೇರಲಾಗುತ್ತಿದೆ.

ಮತ್ತೊಂದು ಕತೆಯಾದಂತಹ' ಅಪಹರಣ' ಎಂಬಲ್ಲಿ ಧಾರ್ಮಿಕತೆಯ। ಚಿತ್ರಣ ನೋಡಬಹುದು. ಕತೆಯ ಕೇಂದ್ರಪಾತ್ರ ಒಬ್ಬ ಗಂಡಸಿನದು. ಆತ ಶಿಕ್ಷಕ. ಇವನು ಧರ್ಮಗ್ರಂಥಗಳನ್ನು ಕುರಿತು ಸಂಶೋಧನೆಯನ್ನು ನಡೆಸುತ್ತಿದ್ದ. ಈತ ಮೂರು ಧರ್ಮಗ್ರಂಥಗಳ ಅವಲೋಕನವನ್ನು ಮಾಡಿ ವಿಚಾರಗಳ ಶೋಧನೆಯನ್ನು ಮಾಡುತ್ತಿದ್ದನು. ಈತ ಧರ್ಮಗ್ರಂಥಗಳಲ್ಲಿ ತೇಲಾಡುತ್ತಾ ಟಿಪ್ಪಣಿ ಮಾಡುತ್ತಾ ಅದರಲ್ಲಿಯೇ ಮುಳುಗಿರುತ್ತಿದ್ದನು. ಇವನಿಗೆ ತನ್ನ ಮನೆ, ಸಂಸಾರ, ಹೆಂಡತಿ-ಮಕ್ಕಳು ಎಲ್ಲದಕ್ಕಿಂತ ಹೆಚ್ಚಾಗಿ ಧರ್ಮಗ್ರಂಥಗಳು. ಬೈಬಲ್-ಖುರಾನ್-ಭಗವದ್ಗೀತೆ ಇವುಗಳನ್ನು ಅರಗಿಸಿಕೊಂಡು ಅವುಗಳ ತುಲನಾತ್ಮಕವಾದ ಅಂಶಗಳನ್ನು ಎತ್ತಿಕೊಂಡು ಬರೆಯುತ್ತಾ ಸಾಗುತ್ತಿದ್ದನು. ಇವನ ಈ ಅಧ್ಯಯನಕ್ಕೆ ಆಗಾಗ ಸಮಾಜದಲ್ಲಿ ನಡೆಯುತ್ತಿದ್ದ ಕೋಮು ಘರ್ಷಗಳೇ ಕಾರಣವೆಂದು ಕತೆಯ ಸಂದರ್ಭದಲ್ಲಿ ತಿಳಿದುಬರುತ್ತದೆ.

ಜನರ ಮಧ್ಯೆ ಕೆಲವರು ಧರ್ಮದ ಹೆಸರಿನಲ್ಲಿ ಗೋಡೆ ಕಟ್ಟುತ್ತಿರುತ್ತಾರೆ. ಇಂತಹ ಗ್ರಂಥಗಳ ಸಾರವನ್ನು ತಿಳಿಯುವ ಪ್ರಯತ್ನ ಮಾಡುತ್ತಾನೆ. ಇವನ ಉದ್ದೇಶ ಧರ್ಮ ಧರ್ಮಗಳ ಬೇಧಭಾವ ದೂರವಾಗಿ, ಕೋಮು ಘರ್ಷಣೆಗಳು ಇಲ್ಲದಂತಾಗಿ ನಮ್ಮ ಮಕ್ಕಳಾದರೂ ತಮ್ಮ ಮುಂದಿನ ಜೀವನದಲ್ಲಿ ಸುಖವಾಗಿರಲಿ ಎಂಬುದೇ ಆಗಿತ್ತು. ಇದಕ್ಕಾಗಿ ಕಂಡಕಂಡ ವ್ಯಕ್ತಿಗಳ ಪಂಡಿತರಲ್ಲಿ ಭೇಟಿ ಮಾಡಿದ್ದನು. ಎಲ್ಲದಕ್ಕಿಂತ ಧರ್ಮದ ಕೆಲಸವೇ ಪ್ರಮುಖವಾಗಿತ್ತು.

'ಧರ್ಮ ಬಲೆ ಬೀಸಿದಾಗ' ಎಂಬ ಕತೆಯಲ್ಲಿ ಧರ್ಮದ ನಿಯಮ, ಪುರುಷ ಶಾಹಿ ವ್ಯವಸ್ಥೆಯ ದೇಗುಲವಾದ ಮಸೀದಿಯ ವರ್ತನೆ, ಮೌಲ್ವಿಗಳ ಕಾರುಬಾರು ಇವುಗಳ ವಿರುದ್ಧ ಧ್ವನಿಇದೆ. ಒಟ್ಟಾರೆಯಾಗಿ ಹೇಳುವುದಾದರೆ ಧರ್ಮದ ಹೆಸರಿನಲ್ಲಿ ಸಂಪ್ರದಾಯದ ಹೆಸರಿನಲ್ಲಿ ಹೆಣ್ಣನ್ನು ಶೋಷಿಸುವ ವಾತಾವರಣ ಇತ್ತು. ಮಹಿಳೆಯರಿಗೆ ಸಂಬಂಧಪಟ್ಟಂತೆ ಹೊಸ ದೃಷ್ಟಿಕೋನವೊಂದನ್ನು ಸಮಾಜ ಹೊಂದಬೇಕಾಗಿರುವುದು ಅನಿವಾರ್ಯವಾಗಿದೆ. ಧರ್ಮ, ಸಂಪ್ರದಾಯ, ಪರಂಪರೆ, ಮೂಢನಂಬಿಕೆಗಳ ಹೊದಿಕೆಯಲ್ಲೇ ಅಡಗಿರುವಂತಹ ಸ್ತ್ರೀಯರನ್ನು ಈ ಚಿಪ್ಪಿನಿಂದ ಮುಕ್ತರನ್ನಾಗಿಸಿ ಅವರ ಬಗ್ಗೆ ನಿರ್ಮಿಸಲಾಗಿರುವ ದಂತಕತೆಗಳು, ಊಹಾಪೋಹಗಳು ಮಿಥ್ಯತೆಗಳನ್ನು ಈಗ ಬಹಿರಂಗಪಡಿಸಬೇಕಾಗಿದೆ.

ಅಧ್ಯಾಯ -೬

ಸಾರಾರವರ ಕಥೆಗಳಲ್ಲಿ ಆಧುನಿಕತೆ ಮತ್ತು ಬಂಡಾಯದ ನೆಲೆ

ಸಾರಾರವರ ಕಥೆಗಳಲ್ಲಿ ಆಧುನಿಕತೆ

ಸಾರಾರವರು ಬಂಡಾಯ ಕಾಲಘಟ್ಟದ ಸಂದರ್ಭದಲ್ಲಿ ಬರೆಯಲು ಪ್ರಾರಂಭಿಸಿದರು. ಅಂದರೆ ಎಂಬತ್ತರ ದಶಕದಲ್ಲಿ ಇವರು ಸಾಹಿತ್ಯರಚನೆಯಲ್ಲಿ ತೊಡಗಿದ ಸಂದರ್ಭ ಬಹಳ ವಿಶಿಷ್ಟವಾದುದೆಂದು ಹೇಳಬಹುದು. ಏಕೆಂದರೆ ಆ ಹೊತ್ತಿಗೆ ಜಾಗತೀಕರಣ, ಕೈಗಾರೀಕರಣದ ಫಲವಾಗಿ ಆಧುನಿಕತೆ ಸಾಧ್ಯವಾಯಿತು. ಈ ಆಧುನಿಕತೆಯಿಂದ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಸಾಂಕೇತಿಕವಾಗಿಯೂ ಸಾಕಷ್ಟು ಬದಲಾವಣೆ ಉಂಟಾಯಿತು. ಜೊತೆಗೆ ಇವೆಲ್ಲಾ ಕ್ಷೇತ್ರಗಳಲ್ಲಿ ಬೆಳವಣಿಗೆಯೂ ಉಂಟಾಯಿತು.

ಸಾಹಿತ್ಯಕ್ಷೇತ್ರದಲ್ಲಿ ಉಂಟಾದ ಬದಲಾವಣೆ ಹಾಗೂ ಬೆಳವಣಿಗೆ ಮೊದಲು ಕಾಣಿಸಿಕೊಂಡಿದ್ದು ಬರವಣಿಗೆಯಲ್ಲಿ. ಜೊತೆಗೆ ವಸ್ತು ಹಾಗೂ ದೃಷ್ಟಿಕೋನದಲ್ಲಿ ಬದಲಾವಣೆಯಾಯಿತು. ಈ ಸಂದರ್ಭದಲ್ಲಿ ಸಾರಾರವರು ಬರೆದುದರಿಂದ ಇವರ ಸಾಹಿತ್ಯದ ಮೇಲೆಯೂ ಆಧುನಿಕತೆಯ ಪ್ರಭಾವವಾಗಿರುವುದು ಕಂಡುಬಂದಿದೆ. ಸಾರಾರವರ ಕಥೆಗಳಲ್ಲಿ ಹಲವು ಸಂವೇದನೆಗಳ ಜೊತೆಗೆ ಆಧುನಿಕತೆಯ ಎಳೆಯೂ ಕಾಣಿಸಿಕೊಂಡಿದೆ. ಇವರ ಒಂದೆರಡು ಕತೆಗಳನ್ನು ಹೊರತುಪಡಿಸಿದರೆ ಇನ್ನೆಲ್ಲಾ ಕಥೆಗಳಲ್ಲಿಯೂ ಆಧುನಿಕತೆಯ ಪ್ರಭಾವ ಕಾಣಿಸುತ್ತದೆ. ಸ್ವತಃ ಆಧುನಿಕತೆಗೇ ಒಳಗಾಗಿ ಆಧುನಿಕ ಯುಗದಲ್ಲಿ ಜೀವಿಸುತ್ತಿರುವ ಸಾರಾರವರು ತಮ್ಮ ಕತೆಗಳನ್ನು ಅದರಿಂದ ಹೊರತುಪಡಿಸಲಿಲ್ಲ. ಇವರ ಹೆಚ್ಚಿನ ಕತೆಗಳ ನಾಯಕಿಯರು ಆಧುನಿಕತೆಯ ಕಡೆಗೆ ವಾಲಿದ್ದಾರೆ. ಹಾಗೂ ಆಧುನಿಕತೆಯ ಹಾದಿಯಲ್ಲಿ ಸಾಗುತ್ತಿದ್ದಾರೆ. ವಿದ್ಯಾವಂತೆಯೂ, ವಿಚಾರಶೀಲಳೂ ಆಗಿದ್ದಾಳೆ. ಅಷ್ಟೇ ಅಲ್ಲದೆ ಉದ್ಯೋಗಸ್ತಳೂ ಆಗಿದ್ದಾಳೆ. ನಾಲ್ಕುಗೋಡೆಗಳ ಮಧ್ಯೆ ಇದ್ದಂತಹ ಹೆಣ್ಣು ಎಲ್ಲಾ ಕಟ್ಟುಪಾಡುಗಳನ್ನು ಮುರಿದು ಹೊರಗೆ ಬಂದು ಸ್ವತಂತ್ರವಾಗಿ ನಿಂತು ಶಿಕ್ಷಣ, ಉದ್ಯೋಗದ ಹಂಬಲದಲ್ಲಿರುವಂತೆ ಮಾಡಿರುವುದು ಆಧುನಿಕತೆ. ಈ ರೀತಿಯ ಜಗತ್ತು ಇವರ ಕತೆಯಲ್ಲಿ ಮೂಡಿಬಂದಿದೆ.

ಸಾರಾರವರ ಪ್ರಮುಖ ಕತೆಯಾದಂತಹ 'ವಿಜ್ಞಾನ ಭವಿಷ್ಯ ನುಡಿದಾಗ' ಎಂಬಲ್ಲಿ ಆಧುನಿಕತೆಯ ಸಂಪೂರ್ಣವಾದ ಚಹರೆಯನ್ನು ನೋಡಬಹುದು. ಆಧುನಿಕತೆಯ ಫಲವಾಗಿ ಹಲವು ಕ್ಷೇತ್ರಗಳಲ್ಲಿ ಬದಲಾವಣೆ ಜೊತೆಗೆ ಬೆಳವಣಿಗೆ ಸಾಧ್ಯವಾಯಿತು. ಇದರಿಂದ ಹೊಸ ಹೊಸ ಅವಿಷ್ಕಾರಗಳಾದವು. ವೈದ್ಯಕೀಯ ಕ್ಷೇತ್ರದಲ್ಲೂ ಇದು ಗಮನಾರ್ಹ ಬದಲಾವಣೆಯನ್ನು ಉಂಟು ಮಾಡಿತು. ಈ ಆಧುನಿಕತೆಯ ಉಪಯೋಗವನ್ನು ಈ ಕತೆಯಲ್ಲಿ ಗಂಡಸರು ಪಡೆದುಕೊಳ್ಳುತ್ತಾರೆ.

ಇಬ್ಬರೂ ಹೆಣ್ಣುಮಕ್ಕಳನ್ನು ಹೆತ್ತ ಮಾಲಿನಿಯು ಮತ್ತೊಮ್ಮೆ ಬಸಿರಾದಾಗ ತನ್ನ ಗರ್ಭದಲ್ಲಿರುವಂತಹ ಮಗು ಹೆಣ್ಣು ಅಥವಾ ಗಂಡು ಎಂದು ಪರೀಕ್ಷೆಯ ಮೂಲಕ ತಿಳಿದುಕೊಂಡು ಆ ಮಗು ಹೆಣ್ಣು ಎಂದು ತಿಳಿದಕೂಡಲೇ ಗರ್ಭಪಾತ ಮಾಡಿಸಿಕೊಳ್ಳುತ್ತಾಳೆ. ಇವಳು ಹೀಗೆ ಮಾಡಲು ಪರೋಕ್ಷವಾಗಿ ಕಾರಣನಾದವನು ಗಂಡು. ಏಕೆಂದರೆ ಇಬ್ಬರೂ ಹೆಣ್ಣುಮಕ್ಕಳೆಂದು ತನ್ನ ಗಂಡನ ದೃಷ್ಟಿಯಲ್ಲಿ ಅವಹೇಳನಕ್ಕೀಡಾದ ಮಾಲಿನಿಯು ಮತ್ತೆ ಹೆಣ್ಣುಮಗು ಹುಟ್ಟಿದರೆ ಸಮಸ್ಯೆಗಳು ಹೆಚ್ಚಾಗುತ್ತವೆ ಎಂದು ಹಾಗೂ ಗಂಡನ ದಬ್ಬಾಳಿಕೆಗೆ ಹೆದರಿ ಗರ್ಭಪಾತ ಮಾಡಿಸಿಕೊಳ್ಳುತ್ತಾಳೆ. ಆಧುನಿಕತೆಯನ್ನು ಪುರುಷ ದಬ್ಬಾಳಿಕೆಗೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

'ಕನ್ನ' ಎಂಬ ಕತೆಯಲ್ಲಿ ಆಧುನಿಕತೆಯ ಕುರುಹು ಕಾಣಿಸಿಕೊಂಡಿದೆ. ಈ ಕತೆಯಲ್ಲಿ ವಿದೇಶಿ ಗೊಬ್ಬರದ ಪ್ರಸಂಗ ಬರುತ್ತದೆ. ಹಿಂದೆ ರೈತರು ವ್ಯವಸಾಯ ಮಾಡಲು ತಮ್ಮ ಕೈಗೆಸಿಗುತ್ತಿದ್ದ ಸಾವಯವ ಗೊಬ್ಬರವನ್ನೇ ಉಪಯೋಗಿಸುತ್ತಿದ್ದರು. ಆಧುನಿಕತೆಯ ಪ್ರಭಾವದಿಂದ ಸಾಕಷ್ಟು ಬದಲಾವಣೆಯಾಗಿದ್ದುದರಿಂದ ವಿದೇಶಿ ವಸ್ತುಗಳ ಮೇಲೆ ಹಾಗೂ ವಿದೇಶಗಳ ಮೇಲೆ ವ್ಯಾಮೋಹ ಹೆಚ್ಚಾಗುತ್ತದೆ. ಇದರಿಂದಾಗಿ ವಿದೇಶಿ ಗೊಬ್ಬರದ ಮೇಲೆ ಇವರ ಗಮನ ಹೋಗಿ ಅವಕ್ಕೆ ಎಲ್ಲರೂ ಬೇಡಿಕೆಯನ್ನಿಟ್ಟರು. ಕತೆಯ ಕೇಂದ್ರ ಪಾತ್ರ ರಾಯರದ್ದು. ಇವರ ಮಗ ರಾಜಣ್ಣ. ವಿದೇಶದಲ್ಲಿದ್ದು ಬಂದವನು. ವಿದೇಶದಿಂದ ಬಂದ ರಾಜಣ್ಣ ತನ್ನ ಹೆಂಡತಿಯ ಮಾತಿನ ಮೇರೆಗೆ ಹಳ್ಳಿಯಲ್ಲೆಲ್ಲಾ ವಿದೇಶದಿಂದ ಗೊಬ್ಬರವನ್ನು ತರಿಸುವ ಸಲುವಾಗಿ ಮಾತನಾಡಿ ಆ ಗೊಬ್ಬರದ ಮಹತ್ವವನ್ನು ತಿಳಿಸಿ ಎಲ್ಲರ ಬಳಿಯೂ ಹಣ ವಸೂಲಿಮಾಡಿಕೊಂಡು ಗೊಬ್ಬರ ತರಿಸದೆ ಮೋಸ ಗೊಳಿಸುತ್ತಾನೆ. ಇಲ್ಲಿ ರಾಜಣ್ಣನು

ಆಧುನಿಕತೆಯ ಹೆಸರಿನಲ್ಲಿ ಜನರಿಗೆ ಮೋಸ ಮಾಡುವ ಪ್ರವೃತ್ತಿಯನ್ನು ನೋಡಬಹುದು. ಆಧುನಿಕತೆಗೆ ಮುಖಮಾಡಿ ನಿಂತ ರಾಜಣ್ಣ ಆಧುನಿಕತೆಯ ನೆಪದಲ್ಲಿ ಹಲವು ಮುಖವಾಡ ಧರಿಸಿ ಜನರಿಗೆ ಸ್ವತಃ ಅದೇ ಊರಿನವರಿಗೆ ನಂಬಿಸಿ ಮೋಸಗೊಳಿಸುತ್ತಾನೆ. ಇತ್ತ ಊರಿನ ಜನರು ದೂರದಬೆಟ್ಟ ನುಣ್ಣಗೆ ಎನ್ನುವಂತೆ ರಾಜಣ್ಣ ಹೇಳಿದ ಕೂಡಲೇ ಆಧುನಿಕತೆಯ ಸಂಕೇತವಾಗಿ ಇದ್ದಂತಹ ವಿದೇಶಿ ಗೊಬ್ಬರವನ್ನು ಮೆಚ್ಚಿಕೊಳ್ಳುತ್ತಾರೆ. ಇದರಿಂದ ಒಳ್ಳೆಯ ಬೆಳೆ ತೆಗೆಯಬಹುದು ಎಂಬ ಆಸೆಯಿಂದ ಹಣವನ್ನು ಕೊಟ್ಟು ಮೋಸಹೋಗಿದ್ದಾರೆ. ಕೊನೆಗೂ ರಾಜಣ್ಣ ಗೊಬ್ಬರ ತರಿಸದೆ ಜನರ ಹಣವನ್ನೆಲ್ಲಾ ತಾನೇ ಉಪಯೋಗಿಸಿ ಕೊಳ್ಳುತ್ತಾನೆ.

ಮತ್ತೊಂದು ಕತೆಯಾದಂತಹ '' ಹೊಸದಿಕ್ಕು ಎಂಬಲ್ಲಿ'' ಮುಸ್ಲಿಂ ಸಂವೇದನೆಯ ಜೊತೆಗೆ ಆಧುನಿಕತೆಯ ಚಿತ್ರಣವು ಮೂಡಿಬಂದಿದೆ. ಇಲ್ಲಿ ಕಂಡುಬರುವ ಕತೆಯ ಕೇಂದ್ರಪಾತ್ರ ಶಾಹಿನಾ. ಆಧುನಿಕತೆಗೆ ಒಳಗಾದವಳು.ಇವಳ ದೃಷ್ಟಿಕೋನ ಹಾಗೂ ನಿರ್ಧಾರವೆಲ್ಲವೂ ಪ್ರಸ್ತುತ ಸಂದರ್ಭಕ್ಕೆ ಸರಿಹೊಂದುವಂತಹದ್ದು. ಇವಳ ನಿಲುವು ಕೂಡ ಧೈರ್ಯವನ್ನು ತಂದುಕೊಡುವಂತದ್ದೇ ಆಗಿತ್ತು. ಇಲ್ಲಿ ಬರುವ ಆಧುನಿಕ ಸಂದರ್ಭವನ್ನು ಗುರುತಿಸುವುದಾದರೆ 'ಹೋಟೆಲ್ಲಿಗೆಲ್ಲಾ ಹೋಗಬೇಡ, ಹಾಗೇ ಬೀಚ್ ಕಡೆ ಹೋಗಿ ಬಂದುಬಿಡು' ಮುಸ್ಲಿಂ ಸಮಾಜವು ಗಂಡು-ಹೆಣ್ಣು ಮದುವೆಯಾಗುವುದಕ್ಕಿಂತ ಮೊದಲೇ ಓಡಾಡುವುದು, ಮಾತನಾಡುವುದನ್ನು ಒಪ್ಪುವುದಿಲ್ಲ. ಅದರಲ್ಲೂ ಪರ ಪುರುಷನ ಮುಂದೆ ಓಡಾಡುವುದನ್ನೇ ಒಪ್ಪದ ಸ್ಥಿತಿಯಿರುವಾಗ ಎಲ್ಲೋ ಒಂದೆಡೆ ಮದುವೆಯಾಗಬೇಕೆಂದಿರುವ ಶಾಹಿನಾ ತನ್ನ ಹುಡುಗ ಹೊರಗೆ ಏನೋ ಮಾತನಾಡಲು ಕರೆದಾಗ ಸುಲಭವಾಗಿ ಒಪ್ಪಿಕೊಳ್ಳುತ್ತಾಳೆ. ಅವಳ ತಾಯಿಯೂ ಅದಕ್ಕೆ ಒಪ್ಪಿಗೆ ನೀಡಿ ಮೇಲಿನ ಮಾತನ್ನು ಹೇಳುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿದ್ದರಿಂದ ಅವಳ ಯೋಚನಾ ಲಹರಿಯು ಬದಲಾಗಿತ್ತು. ಅಷ್ಟೇ ಅಲ್ಲದೆ ಸಂಕುಚಿತ ಮನೋಭಾವನೆಗಳಿರಲಿಲ್ಲ. ಕೆಲವೊಂದು ಸಂದರ್ಭಗಳನ್ನು ಹಾಗೂ ಮಾತುಗಳನ್ನು ವಿಶಾಲ ಮನೋಭಾವದಿಂದ ನೋಡಿ ಅದನ್ನು ಸ್ವೀಕರಿಸುತ್ತಿದ್ದರು. ಹಳೆಯ ಗೊಡ್ಡು ನಿಯಮಗಳ ಕಡೆ ಅಷ್ಟಾಗಿ ಗಮನಕೊಡುವುದಿಲ್ಲ.

'ಖೆಡ್ಡಾ'ಎಂಬ ಕತೆಯಲ್ಲಿ ಆಧುನಿಕತೆಗೆ ಒಳಗಾದಂತಹ ಸಂಕೇತಗಳು ಅಲ್ಲಲ್ಲಿ ಕಂಡುಬರುತ್ತದೆ. ಆಧುನಿಕತೆಗೆ ಸಂಕೇತವಾಗಿ ಪ್ರಭಾಕರನ ಯೋಚನೆಗಳು ಕಂಡುಬಂದಿದೆ. ಮುಖ್ಯವಾಗಿ ಪ್ರಭಾಕರನ ಆಲೋಚನೆಗಳು ಹಾಗೂ ಶೈಲಿನಿಯ ಆಲೋಚನೆಗಳು ಆಧುನಿಕತೆಯ ಕಡೆವಾಲಿರುವುದನ್ನು ನೋಡಬಹುದು. ಶೈಲಿನಿ ತನ್ನ ಅಣ್ಣನಿಗೆ ಕೆಳಜಾತಿಯ ಹುಡುಗಿಯಜೊತೆ ಮದುವೆಯಾಗಲು ಪ್ರಚೋದಿಸುತ್ತಾಳೆ. ಎಲ್ಲಿಯೂ ಶೈಲಿಯ ಆಲೋಚನೆಗಳು ಸಾಂಪ್ರದಾಯಕವಾಗಿವೆ ಎಂದು ತಿಳಿಯುವುದಿಲ್ಲ. ತನ್ನ ಅಣ್ಣ ಪ್ರೀತಿಸಿದ್ದ ಬೇರೆಜಾತಿಯ ಹುಡುಗಿಯ ಜೊತೆಯಲ್ಲೇ ಮದುವೆಯಾಗುವಂತೆ ಸಹಾಯಹಸ್ತ ನೀಡಿದ್ದಾಳೆ. ಇತ್ತ ಶೈಲಿನಿಯು ಸಾಕಷ್ಟು ಅಪವಾದಗಳನ್ನು ಹೊತ್ತುಕೊಂಡು ಬೇಸರದ ನಡುವೆ ತಂದೆ-ತಾಯಿಗೆ ಧೈರ್ಯವನ್ನು ತುಂಬುತ್ತಾಳೆ. ಆದರೆ ಪ್ರಭಾಕರ ವಿದ್ಯಾವಂತನಾಗಿದ್ದು ಪ್ರಸ್ತುತ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವನಾಗಿದ್ದಾನೆ. ಶೈಲಿನಿಯ ಸಮಸ್ಯೆಗಳಿಗೆ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಸ್ಪಂದಿಸುತ್ತಿದ್ದನು. ಅವನು ಶೈಲಿನಿಯ ಬೇಸರ ಕಳೆಯಲೆಂದು ಹಲವು ಮನರಂಜನೆಗಳತ್ತ ಆಕೆಯ ಮನಸೆಳೆಯುತ್ತಾನೆ. ಆಗಾಗ ಪ್ರಭಾಕರನು ಶೈಲಿನಿಗಾಗಿ ಕತೆ , ಕಾದಂಬರಿಗಳನ್ನು ಇತರೆ ನಿಯತಕಾಲಿಕೆಗಳನ್ನು ತಂದುಕೊಡುತ್ತಿದ್ದನು. ಹೀಗೆ ಪ್ರಭಾಕರ ತನ್ನ ನಿರ್ಧಾರವನ್ನು ಪರೋಕ್ಷವಾಗಿ ತಿಳಿಸಿ ಶೈಲಿನಿಯ ಮತ್ತು ಅವಳ ಮನೆಯವರ ನಿರ್ಧಾರಕ್ಕೆ ಕಾದು ನಂತರ ಅವರ ಒಪ್ಪಿಗೆಯಾದ ಮೇಲೆ ಶೈಲಿನಿಯ ಜೊತೆ ಮದುವೆಯಾಗುತ್ತಾನೆ. ಪ್ರಭಾಕರನು ಶೈಲಿನಿಯಮೇಲೆ ಇದ್ದಂತಹ ಅಪಮಾನಗಳನ್ನು ಹಾಗೂ ವಂಚನೆಗೊಳಗಾದ ಅವಳ ಸ್ಥಿತಿಯನ್ನು ಸಮಾನವಾಗಿ ಯೋಚಿಸಿ ಅವಳಿಗೆ ನ್ಯಾಯ ಒದಗಿಸುವಂತೆ ತೀರ್ಮಾನ ಕೈಗೊಳ್ಳುತ್ತಾನೆ.

ಮತ್ತೊಂದು ಕತೆಯಾದ 'ಸಲಹೆ' ಎಂಬಲ್ಲಿ ಆಧುನಿಕತೆಗೆ ಆಕರ್ಷಿತಾದ ವ್ಯಕ್ತಿ ಹಾಗೂ ಅವನ ತಿಳುವಳಿಕೆಯನ್ನು ನೋಡಬಹುದು. ಜೊತೆಗೆ ಪಟ್ಟಣದ ಚಿತ್ರಣವು ಸಿಗುತ್ತದೆ. ಕತೆಯ ಕೇಂದ್ರ ಪಾತ್ರ ಜಲಾಲುದ್ದೀನ್‌ನದು. ಇವನಿಗೆ ಊರಿನಲ್ಲಿ ಕೆಲಸ ಮಾಡುವುದಾಗಲೀ ಅಥವಾ ವ್ಯವಸಾಯ ಮಾಡುವುದಾಗಲೀ ಇಷ್ಟವಿರಲಿಲ್ಲ. ಇವನಿಗೆ ಪಟ್ಟಣದಲ್ಲಿ ಕೆಲಸಕ್ಕೆ ಸೇರಬೇಕೆಂಬ ಆಸೆ. ಜೊತೆಗೆ ತಾಯಿಯ ಆಸೆಯೂ ಇದೇ ಆಗಿತ್ತು. ತಾಯಿಯು ಒಮ್ಮೊಮ್ಮೆ ಮಗನ ಬಳಿ ಹೀಗೆ ಹೇಳುತ್ತಿದ್ದಳು. ನೀನು ತುಂಬಾ ಕಲಿತು ಪಟ್ಟಣದಲ್ಲಿ ಕೆಲಸದಲ್ಲಿರಬೇಕು.'' ಎಂದು ಜಲಾಲುದ್ದೀನನಿಗೆ ಪಟ್ಟಣದಲ್ಲಿ ಒಳ್ಳೆಯ

ಕೆಲಸ ಪಡೆದುಕೊಂಡು ಅಲ್ಲಿಯೇ ಇದ್ದು ಸೂಟುಬೂಟು ಹಾಕಿಕೊಂಡು ಕಾರಿನಲ್ಲೇ ಓಡಾಡಬೇಕೆಂಬ ಆಸೆ. ಆದರೆ ಇವನ ತಾಯಿಯ ಆಸೆಯೂ ಇದೇ ಆಗಿತ್ತು. ಈ ಆಸೆಯ ಹಿಂದೆ ಇದ್ದ ಉದ್ದೇಶ ಅಧಿಕ ವರದಕ್ಷಿಣೆಯನ್ನು ಪಡೆಯುವುದಾಗಿತ್ತು. ಒಮ್ಮೊಮ್ಮೆ ಸ್ವತಃ ತಾಯಿ ಯೋಚಿಸುತ್ತಿದ್ದಳು. ತನ್ನ ಮಗ ಪಟ್ಟಣದಲ್ಲಿ ಒಳ್ಳೆಯ ಕೆಲಸದಲ್ಲಿದ್ದರೆ ಶ್ರೀಮಂತರ ಮನೆಯಿಂದ ಹುಡುಗಿಯನ್ನು ತರಬಹುದು.ಇದರಿಂದ ಹೆಚ್ಚಾದ ಆಸ್ತಿಯು ಸಿಗುತ್ತದೆ. ಇದರಂತೆಯೇ ಜಲಾಲುದ್ದೀನ್ ಸರಿಯಾಗಿ ಓದದಿದ್ದರೂ ಪಟ್ಟಣದಲ್ಲಿ ಕೆಲಸವನ್ನು ಗಿಟ್ಟಿಸಿಕೊಳ್ಳುತ್ತಾನೆ. ಕೆಲಸ ಮಾಡುತ್ತಾ ಊರಿನಿಂದ ಪಟ್ಟಣಕ್ಕೆ ಓಡಾಡುತ್ತಿರುತ್ತಾನೆ.

''ನೀಲಿಚಿತ್ರದ ಕೆಂಪುಬಣ್ಣ. ಈ ಕತೆಯಲ್ಲಿ ಆಧುನಿಕತೆ ಹಾಗೂ ಸಾಂಪ್ರದಾಯಿಕತೆಯ ಮುಖಾಮುಖಿಯಾಗಿರುವುದನ್ನು ನೋಡಬಹುದು. ಆದರೆ ಸಾಂಪ್ರದಾಯಿಕತೆಯ ಮುಂದೆ ಆಧುನಿಕತೆಯ ಛಾಪು ಮೂಡಿದೆ. ಕತೆಯ ನಾಯಕಿ ರಫೀನಾ ದುರಂತಕ್ಕೆ ಈಡಾಗುವ ಹೆಣ್ಣು ಇವಳ ಸುತ್ತ ಆಧುನಿಕತೆಯ ಎಳೆಯಲ್ಲಿ ಕತೆಯನ್ನು ಹೆಣೆಯಲಾಗಿದೆ. ತಂದೆ ಅದ್ರಾಮನು ಮುಂಬಯಿಯಲ್ಲಿ ಕೆಲಸಕ್ಕಿದ್ದವನು. ಇವನ ಆಲೋಚನೆಗಳು ವಿಶಾಲವಾಗಿದ್ದವು. ಏಕೆಂದರೆ ನಗರೀಕರಣ, ಕೈಗಾರೀಕರಣ, ಜಾಗತೀಕರಣಕ್ಕೆ ಒಳಗಾದ ಮುಂಬಯಿ ನಗರವು ಅಭಿವೃದ್ಧಿಯಾದ ಪಟ್ಟಣ. ಇಲ್ಲಿ ಕೆಲಸ ಮಾಡುತ್ತಿದ್ದ ಅದ್ರಾಮನು ವಿಶಾಲವಾಗಿ ಯೋಚಿಸುತ್ತಾನೆ. ಅಂತೆಯೇ ತನ್ನ ಮಗಳು ವಿದ್ಯಾವಂತೆಯಾಗಬೇಕೆಂದು ಕನಸು ಕಾಣುತ್ತಾನೆ. ಒಮ್ಮೆ ತನ್ನಹೆಂಡತಿಯ ಬಳಿ ಪಟ್ಟಣದ ಹುಡುಗಿಯರ ವಿದ್ಯಾಭ್ಯಾಸವನ್ನು ಕುರಿತು ಹೇಳುತ್ತಾ ತನ್ನ ಮಗಳನ್ನು ಓದಿಸಬೇಕೆಂದು ನಿಶ್ಚಯಿಸುತ್ತಾನೆ. ಆದರೆ ಇದು ಫಲಕಾರಿಯಾಗುವುದಿಲ್ಲ. ಏಕೆಂದರೆ ರಫೀನಾ ಹತ್ತನೇ ತರಗತಿ ಮುಗಿಯುತ್ತಿದ್ದಂತೆ ಹಲವು ಕಾರಣಗಳಿಂದಾಗಿ ಕಾಲೇಜಿಗೆ ಸೇರದೆ ಮನೆಯಲ್ಲಿಯೇ ಉಳಿಯುವಂತಹ ಪ್ರಸಂಗ ಬರುತ್ತದೆ. ಶಾಲೆ ಬಿಟ್ಟರೂ ಅವಳು ಗ್ರಂಥಾಲಯದಿಂದ ಕತೆ, ಕಾದಂಬರಿಗಳನ್ನು ತ ಂದು ಓದುವಂತಹ ಹವ್ಯಾಸವನ್ನು ಇಟ್ಟುಕೊಂಡಿದ್ದಳು.

ಇನ್ನೊಂದು ಹಂತದಲ್ಲಿ ರಫೀನಾಳ ಚಿಕ್ಕಪ್ಪ ದುಬಾಯಿಂದ ಬಂದವನು. ಬರುವಾಗಟಿ.ವಿಸೆಟ್, ವಿ.ಸಿ.ಆರ್, ಚಲನಚಿತ್ರದ ಕೆಲವು ಕ್ಯಾಸೆಟ್‌ಗಳನ್ನು ತಂದನು. ಇಲ್ಲಿ ಟಿ.ವಿ.ವಿ.ಸಿ.ಆರ್ ಕ್ಯಾಸೆಟ್‌ಗಳು ಆಧುನಿಕತೆಯನ್ನು ಸೂಚಿಸುತ್ತಿವೆ.ಅಷ್ಟೇ ಅಲ್ಲದೆ ಜನರು ಈ ಆಧುನಿಕತೆಯ ಪ್ರಭಾವಕ್ಕೆ ಒಳಗಾಗುವುದನ್ನು ನೋಡಬಹುದು. ಇದು ಎಲ್ಲರಲ್ಲಿಯೂ ಸಾಮಾನ್ಯವಾಗಿ ಇರಲಿಲ್ಲ.ಅಲ್ಲಲ್ಲಿ ಅಪರೂಪಕ್ಕೆ ಕಂಡುಬರುತ್ತಿದ್ದವು. ಇವೆಲ್ಲವನ್ನೂ ನೋಡಿದ ರಫೀನಾ ಸಂತೋಷಗೊಂಡಳು. ಆ ಕ್ಯಾಸೆಟ್‌ನಲ್ಲಿನ ಚಲನಚಿತ್ರಗಳನ್ನು ನೋಡಿ ಆಗಾಗ ನಾಚಿಕೆಪಟ್ಟುಕೊಳ್ಳುತ್ತಿದ್ದಳು. ಜೊತೆಗೆ ಅಸಹ್ಯವೂ ಆಗುತ್ತಿತ್ತು.

'ಬಿಕರಿಯ ಮಾಲುಗಳು' ಕತೆಯಲ್ಲಿ ಆಧುನಿಕತೆಗೆ ಹತ್ತಿರವಾದ ಸನ್ನಿವೇಶಗಳು ಕಂಡುಬಂದಿವೆ. ಕತೆಯಲ್ಲಿ ಕಂಡುಬರುವ ಸಲ್ಮಾನ್ ವೈದ್ಯಕೀಯ ಕಾಲೇಜಿನಲ್ಲಿ ಓದುತ್ತಿದ್ದಾನೆ. ಇವನು ಆಧುನಿಕತೆಗೆ ಸಂಕೇತಿಕವಾಗಿ ಕಾಣಿಸಿದ್ದಾನೆ. ಇವನಲ್ಲಿ ಯಾವುದೇ ಬೇಧಭಾವಗಳಿಲ್ಲ. ಮೇಲು-ಕೀಳಿನ ಭಾವನೆಗಳಿಲ್ಲ. ಎಲ್ಲರಲ್ಲಿಯೂ ಸಮಾನವಾಗಿ ಬೆರೆಯುತ್ತಿದ್ದ. ಇವನ ಆಲೋಚನೆಗಳು ಆಧುನಿಕವಾಗಿತ್ತು. ಹೇಗೆಂದರೆ ಇವನ ತಂದೆ ಪರದೆ ಇಲ್ಲದೆ ಓಡಾಡುವ ಹುಡುಗಿಯರನ್ನು ಹಾಗೂ ಕಾಲೇಜು ಮೆಟ್ಟಿಲು ಹತ್ತಿದ ಹೆಣ್ಣುಮಕ್ಕಳ ನಡವಳಿಕೆಯನ್ನು ಸಹಿಸದವನು. ಆದರೆ ಸಲ್ಮಾನನ ನಿಲುವು ತಾನು ಕಾಲೇಜು ಮೆಟ್ಟಿಲನ್ನು ಹತ್ತಿದ ಹುಡುಗಿಯನ್ನೇ ಮದುವೆಯಾಗುತ್ತೇನೆ ಎಂಬುದು. ಒಂದು ದಿನ ಸಲ್ಮಾನ್‌ತನ್ನ ತಾಯಿಯ ಬಳಿ ಹೀಗೆ ಹೇಳುತ್ತಾನೆ.' ವಿದ್ಯೆಇಲ್ಲದ ಹುಡುಗಿಯನ್ನು ನಾನು ಮದುವೆಯಾಗುವುದಿಲ್ಲ'. ಇದರಿಂದಲೇ ಗುರುತಿಸಬಹುದು ಆಧುನಿಕತೆಗೆ ಒಳಗಾದ ಸಲ್ಮಾನ್ ಹೆಣ್ಣುಮಕ್ಕಳಿಗೂ ವಿದ್ಯಾಭ್ಯಾಸ ಎಂದು ತಿಳಿಯುವುದರ ಜೊತೆಗೆ ಸಮಕಾಲೀನ ಪರಿಸ್ಥಿತಿಯಲ್ಲಿ ಸರಿಯಾಗಿ ಬದುಕಲು ಗಂಡು ಮತ್ತು ಹೆಣ್ಣು ಇಬ್ಬರೂ ವಿದ್ಯಾವಂತರಾಗಬೇಕೆಂಬುದನ್ನು ಅರಿತಿದ್ದನು.ಅಷ್ಟೇ ಅಲ್ಲದೆ ಇವನು ಪಟ್ಟಣದ ಹಾಸ್ಟೆಲ್‌ನಲ್ಲಿ ಇದ್ದು ವೈದ್ಯಕೀಯ ಕಾಲೇಜಿನಲ್ಲಿ ಓದುತ್ತಿದ್ದನು.

ಸಾರಾರವರ ಇನ್ನೊಂದು ಕತೆಯಲ್ಲಿ ಬದಲಾವಣೆಯ ನೆಲೆ ಹಾಗೂ ಆಧುನಿಕ ನೆಲೆಯನ್ನು ಗುರುತಿಸಬಹುದು. ಕಾಲೇಜಿಗೆ ಹೋಗುತ್ತಿರುವ ಶಬಾನ ಗೆಳತಿಯರ ಜೊತೆ

ಯಾವ ಅಡ್ಡಿ ಆತಂಕಗಳಿಲ್ಲದೆ ಚಿತ್ರಮಂದಿರಕ್ಕೆ ಹೋಗಿ ಸಿನಿಮಾವನ್ನು ನೋಡಿ ಬರುತ್ತಾಳೆ. ಮೂವರು ಗೆಳತಿಯರು ಸೇರಿ ಬಹಳ ಸಂತೋಷದಿಂದ ಸಿನಿಮಾವನ್ನು ನೋಡಿ ಪ್ರಪಂಚವನ್ನೇ ಮರೆತಂತೆ ಕುಲುಕುತ್ತಾ , ನಗುತ್ತಾ ತಾವು ನೋಡಿದ ಚಿತ್ರದ ಪಾತ್ರದ ವಿಶ್ಲೇಷಣೆ ಮಾಡುತ್ತಾ ಬರುತ್ತಾನೆ. ಇವರೆಲ್ಲಾ ಗೆಳತಿಯರು ಚಿಕ್ಕವಯಸ್ಸಿನಿಂದಲೂ ಒಂದೇ ಮನೆಯವರಂತೆ ಬೆಳೆದವರು.

ಶಬಾನಳ ತಾಯಿಯ ಆಲೋಚನೆ ಗಹನವಾಗಿಯೇ ಇತ್ತು. ಆಕೆ ತನ್ನ ಮಗಳಿಗೆ ವೈದ್ಯನಿಗೆ ಕೊಟ್ಟು ಮದುವೆ ಮಾಡಿಸಬೇಕೆಂದು ಯೋಚಿಸುತ್ತಿದ್ದಳು. ಆದರೆ ಶಬಾನಳ ತಂದೆಗೆ ಸ್ವತಃ ತನ್ನ ಮಗಳಿಗೆ ವೈದ್ಯಕೀಯ ಕಾಲೇಜಿನಲ್ಲಿ ಓದಿಸಬೇಕೆಂಬ ಆಸೆ. ಒಂದು ದಿನ ಹೀಗೆ ಹೇಳಿದ್ದರು.

''ಅದೊಂದು ಸುಂದರವಾದ ಕನಸು. ..... ಉದ್ದವಾದ ಬಿಳಿನಿಲುವಂಗಿ ತೊಟ್ಟು ಸ್ಟೆಥೋಸ್ಕೋಪನ್ನು ಕತ್ತಿಗೆ ನೇತಾಡಿಸಿಕೊಂಡು ವೈದ್ಯಕೀಯ ಕಾಲೇಜಿನಲ್ಲಿ ಸಹಪಾಠಿಗಳೊಡನೆ ಓಡಾಡುತ್ತಾ ರೋಗದ ರೋಗಿಗಳ ಪರಿಚಯ ಮಾಡಿಕೊಳ್ಳುತ್ತಾ ಪ್ರಾಧ್ಯಾಪಕರ ಪಾಠ ಕೇಳುತ್ತಾ ..... ಬಳಿಕ ಒಂದು ದಿನ ತಾನೇ ವೈದ್ಯರಾಗಿ ' ಶಬಾನಾ ಡಾಕ್ಟರ ಬಳಿ ಹೋದರೆ ಖಂಡಿತಾ ವಾಸಿಯಾಗುತ್ತದೆ' ಎಂದು ಹೆಸರು ಪಡೆಯುವುದು. ಇವರ ಯೋಚನೆಗಳಿಂದಲೇ ತಿಳಿಯಬಹುದು. ಆಧುನಿಕತೆಯ ಪ್ರಭಾವಕ್ಕೆ ಒಳಪಟ್ಟ ಇವರು ತನ್ನ ಮಗಳ ಉನ್ನತ ವಿದ್ಯಾಭ್ಯಾಸದ ಬಗ್ಗೆ ಹೇಗೆ ಕನಸ್ಸು ಕಂಡಿದ್ದರು ಎಂದು.

'ಕುಪ್ಪಸ ತೊಟ್ಟವಳು' ಎಂಬ ಕತೆಯಲ್ಲಿ ಆಧುನಿಕತೆಯಿಂದಾಗಿ ಬದಲಾದ ನಿಲುವುಗಳು ಕಾಣಿಸಿಕೊಂಡಿದೆ. ಜಾತಿ, ಧರ್ಮವನ್ನೇ ಮುಖ್ಯವಾಗಿ ಇಟ್ಟುಕೊಂಡು ಒದ್ದಾಡುತ್ತಿದ್ದ ಸಂದರ್ಭದಲ್ಲಿ ಜಾತಿ ಮತ್ತು ಧರ್ಮವನ್ನು ಬಿಟ್ಟು ಹೊರಬಂದು ಪರಸ್ಪರ ಇಬ್ಬರೂ ಮೆಚ್ಚಿ ಮದುವೆಯಾಗುವಂತಹ ಸಂಗತಿ. ಇವನು ತಾನು ಮೆಚ್ಚಿದ ಹುಡುಗಿಯ ಮುಂದೆ ಬೆಂಗಳೂರಿನ ವರ್ಣನೆಯನ್ನು ಮಾಡುತ್ತಾ ಮಾದೇವಿ ನೀನೊಮ್ಮೆ ಬೆಂಗಳೂರು ನೋಡಬೇಕು. ಅದು ಸ್ವರ್ಗದಂತಹ ಊರು ಎಂದು ಪಟ್ಟಣದ ವರ್ಣನೆಯನ್ನು ನೀಡುತ್ತಾನೆ. ಮಾದೇವಿಯು ಬಹಳ ದಿನಗಳಿಂದ ಹಳ್ಳಿಯಲ್ಲಿಯೇ ಇದ್ದು ಯಾವುದರ

ಅರಿವೂ ಇಲ್ಲದೆ ಇದ್ದವಳು. ಪಟ್ಟಣದ ಕನಸನ್ನು ಕಾಣುತ್ತಿದ್ದಳು. ಎಲ್ಲೋ ಒಂದೆಡೆ ಈತ ಹೇಳಿದ್ದರಿಂದ ಆಕೆಗೆ ತುಂಬಾ ಆಶ್ಚರ್ಯ ಹಾಗೂ ಸಂತೋಷ ಆಗುತ್ತದೆ.

ಒಟ್ಟಾರೆಯಾಗಿ ಗಮನಿಸುವುದಾದರೆ ಆಧುನಿಕತೆಗೆ ಒಳಗಾದ ನಾಯಕಿಯರು, ಅಂತೆಯೇ ಎಲ್ಲಾ ಕ್ಷೇತ್ರಗಳಲ್ಲೂ ಆಧುನಿಕತೆಗೆ ಒಳಗಾಗಿ ಬದಲಾಗುತ್ತಿರುವ ಸ್ವರೂಪ ಹಾಗೂ ಸಂದರ್ಭಗಳು ಸಾರಾರವರ ಕಥೆಗಳಲ್ಲಿ ಕಂಡುಬಂದಿದೆ.,

ಸಾರಾರವರ ಕತೆಯಲ್ಲಿ ಬಂಡಾಯದ ನೆಲೆ

ಬಂಡಾಯಘಟ್ಟದ ಸಂದರ್ಭದಲ್ಲಿ ಬರೆಯಲು ಪ್ರಾರಂಭಿಸಿದ ಸಾರಾರವರು ಸಮಸ್ಯೆಗಳ ಬಗ್ಗೆ ವಿರೋಧಿಸಿ, ಅಸಮಾಧಾನ ವ್ಯಕ್ತಪಡಿಸಿ ಬರೆದರು. ಇವರ ಇಡೀ ಸಾಹಿತ್ಯವೇ ಬಂಡಾಯವೆನ್ನಬಹುದು. ಬಂಡಾಯದ ಬಗ್ಗೆ ಖ್ಯಾತ ಪರ್ತಕರ್ತ ಸಿ.ಜಿ.ಕೆ. ರೆಡ್ಡಿ ಹೀಗೆ ಅಭಿಪ್ರಾಯ ಪಡುತ್ತಾರೆ. 'ಪ್ರಜಾತಂತ್ರದಲ್ಲಿ ಬಂಡಾಯದ ಹಕ್ಕು ಎಲ್ಲರಿಗೂ ಇದೆ. ಆದರೆ ಬಂಡಾಯಕ್ಕೆ ಕಾರಣ ಎಲ್ಲರಿಗೂ ಇರಬೇಕಾಗಿಲ್ಲ. ಬಂಡಾಯದ ಹಕ್ಕು ಹಾಗೂ ಕಾರಣ ನಮ್ಮ ದೇಶದಲ್ಲಿ ಯಾರಿಗಾದರೂ ಇದ್ದರೆ ಅದು ದಲಿತವರ್ಗಕ್ಕೆ ಮಾತ್ರ. ಕ್ರಾಂತಿ ಸಮಗ್ರ ರೂಪ ತಾಳಬೇಕಾದರೆ , ಅದಕ್ಕೆ ನಿಜವಾದ ಅರ್ಥ ಮತ್ತು ಕಳೆ ಬರಬೇಕಾದರೆ ಅದು ಬಡವರ ನೆಲೆಗಟ್ಟಿನಿಂದ ವ್ಯಾಪಕವಾಗಿ ಹುಟ್ಟಬೇಕು. ಈ ದೇಶದಲ್ಲಿ ಯಾವುದೇ ಜನಾಂದೋಲನ ಯಶಸ್ವಿಯಾಗಬೇಕಾದರೆ ಅದು ದಲಿತರ ಶೋಷಿತರ, ನಿಮ್ನವರ್ಗದವರ ನಾಯಕತ್ವದಲ್ಲಿ ಮಾತ್ರ ನಡೆಯಬೇಕು''[೧]

ದಲಿತ ಬಂಡಾಯದ ಸಾಹಿತ್ಯದ ಚಳುವಳಿಯು ೭೦ರ ದಶಕದ ಉತ್ತರಾರ್ಧದಲ್ಲಿ ಹುಟ್ಟಿಕೊಂಡಿದ್ದು ಈ ದಶಕದಲ್ಲಿ ಘಟಿಸಿದ ಅನೇಕ ಸಾಮಾಜಿಕ, ರಾಜಕೀಯ ಘಟನೆಗಳು ಈ ಸಾಹಿತ್ಯಕ್ಕೆ ಪ್ರೇರಕವಾದವು. ಸಾಹಿತ್ಯ ಪ್ರವಾಹದ ದಿಕ್ಕು ಮೊಟ್ಟಮೊದಲ ಬಾರಿಗೆ ದಲಿತರ ಕೇರಿಗೆ, ದುಡಿಯುವ ರೈತನೆಡೆಗೆ ಗಣಿಕಾರ್ಮಿಕನಿರುವ ನೆಲೆದಾಳಕ್ಕೆ, ಕತ್ತಲಲೋಕದಲ್ಲಿ ಬಿಸಿಲುಕಾಣದೆ ಬಿಕ್ಕಳಿಸುತ್ತಿರುವ ಹೆಣ್ಣುಗಳೆಡೆಗೆ ತಿರುಗಿ ಅಲ್ಲಿರುವ ಜನರ ನೋವುಗಳನ್ನು, ಬೆವರನ್ನು, ಕಣ್ಣೀರನ್ನು ಹಸಿಹಸಿಯಾಗಿ ಮೊಟ್ಟಮೊದಲ ಬಾರಿಗೆಸಾಹಿತ್ಯ ಲೋಕದಲ್ಲಿ ಹಿಡಿದಿಟ್ಟಿತ್ತು.ಇಂತಹ ಉದ್ದೇಶವನ್ನಿಟ್ಟುಕೊಂಡು ಸಾಹಿತ್ಯ, ಸಾಮಾಜಿಕ, ಸಾಂಸ್ಕೃತಿಕ ಜವಾಬ್ದಾರಿಗಳನ್ನು ಹೊತ್ತುಕೊಂಡು ಸಂಘಟನೆಯ ಅಡಿಯಲ್ಲಿ ಬಂದ ಸಾಹಿತಿಗಳುಬೇರೆ ಬೇರೆ ಎಡಪಂಥೀಯ ಸಿದ್ಧಾಂತಗಳಲ್ಲಿ ಮನಸ್ಸಿಟ್ಟವರು.[೨]

---

೧ ಗಂಗಾಧರ ಮೊದಲಿಯಾರ್. ಬಂಡಾಯ ಸಾಹಿತ್ಯದ ನೆಲೆ-ಬೆಲೆ. ಪುಟ-೨೦

೨ ಬಂಡಾಯ ಸಾಹಿತ್ಯ ಸಂಘಟನೆಯ ಪ್ರಣಾಳಿಕೆ ಮತ್ತು ಸಂವಿಧಾನ.ಪುಟ-೨

ಎಂಭತ್ತರ ದಶಕದಲ್ಲಿ ಮಹಿಳೆಯರಾದಿಯಾಗಿ ಎಲ್ಲರೂ ಈ ಯಜಮಾನ ಸಂಸ್ಕೃತಿಯ ವಿರುದ್ಧ ತಿರುಗಿ ಬಿದ್ದಿರುವುದನ್ನು ಕಾಣಬಹುದು. ಸ್ತ್ರೀಯರ ಸಮಸ್ಯೆಗಳಿಗೆ ಪುರುಷರೇ ಕಾರಣ ಎನ್ನುವ ಅಭಿಪ್ರಾಯವನ್ನು ಮೊದಮೊದಲು ಲೇಖಕರಾದಿಯಾಗಿ ಲೇಖಕಿಯರಲ್ಲಿಯೂ ಇತ್ತು. ಚರಿತ್ರೆಯನ್ನು ಸೈದ್ಧಾಂತಿಕವಾಗಿ ಬಿಚ್ಚುತ್ತಾ ಹೋದ ಹಾಗೆ ಈ ಅಭಿಪ್ರಾಯ ಬದಲಾಗಿದೆ. ಇದನ್ನು ಆರ್ಕೆಯವರು ಹೀಗೆ ಗ್ರಹಿಸಿದ್ದಾರೆ. ''ಶೋಷಣೆಯ ಸಮಗ್ರ ಪರಿಜ್ಞಾನವನ್ನು ಹೊಂದುವುದು ಅಂದರೆ ಸ್ತ್ರೀಯರು ಪುರುಷ ಶಾಹಿಯ ವಿರುದ್ಧ ಹೋರಾಟ ಮಾಡುವುದರ ಅವಶ್ಯಕತೆಯನ್ನು ಮನದಟ್ಟು ಮಾಡಿಕೊಡುವುದಷ್ಟೇ ಅಲ್ಲ ಸ್ತ್ರೀಯರ ಶೋಷಣೆಯನ್ನು ಪುರುಷರಿಂದ ಮಾಡಿಸುತ್ತಾ ಬಂದಿರುವ ಹಾಗೂ ಪುರುಷರನ್ನು ಇನ್ನೊಂದು ಶ್ರೇಣಿಯಲ್ಲಿ ಶೋಷಣೆಗೊಳಪಡಿಸುವ ವರ್ಗವ್ಯವಸ್ಥೆಯನ್ನು ಸ್ತ್ರೀಯರು, ಪುರುಷರು ಜಂಟಿಯಾಗಿ ಹಾಗೂ ಸಾಮೂಹಿಕವಾಗಿ ಪ್ರಶ್ನಿಸುವಂತಹ ಕೊನೆಯಲ್ಲಿ ಕಿತ್ತೊಗೆಯುವಂತೆ ಸರಿಯಾದ ಮಾರ್ಗದರ್ಶನಗೊಳಿಸವುದು.''[೩] ಹೀಗೆ ಮಹಿಳಾ ಸಮಸ್ಯೆಗಳು ಈ ದೇಶದ ದಲಿತರು, ದಮನಕ್ಕೊಳಗಾದವರ ಜೊತೆಯಲ್ಲಿಯೇ ಬೆಸೆದುಕೊಂಡಿರುವುದರಿಂದ ಯಾವುದೇ ಯಾರದೇ ಸಮಸ್ಯೆಗಳನ್ನು ಏಕಮುಖವಾಗಿ ನೋಡಲಾಗದು. ದಲಿತರ ಬಿಡುಗಡೆಯ ಜೊತೆಗೆ ಮಹಿಳೆಯರ ಬಿಡುಗಡೆಯು ಇದೆ. ಒಟ್ಟು ಪುರುಷ ಶ್ರೇಷ್ಠತೆಯ ನಿರಸನದಲ್ಲಿ ಯಜಮಾನ ಸಂಸ್ಕೃತಿಯ ನಿರ್ಮೂಲನೆಯಲ್ಲಿ ಮಹಿಳೆಯರ ಬದುಕಿನ ಬದಲಾವಣೆಯ ಸೂಚನೆಗಳಿವೆ. ವ್ಯವಸ್ಥೆಯ ಬದಲಾವಣೆಯ ಒಡಲಲ್ಲಿಯೇ ಸ್ತ್ರೀಬದುಕಿನ ಬದಲಾವಣೆಯ ಆಶಯಗಳು ಇರುವುದರಿಂದ ವ್ಯವಸ್ಥೆಯ ಆಚೆಗೆ ಮಹಿಳೆಯರನ್ನಿಟ್ಟು ನೋಡಲು ಆಗದು. ಹೀಗಾಗಿ ದಲಿತರು ಮತ್ತು ಮಹಿಳೆಯರು ಪ್ರತಿಭಟಿಸಬೇಕಾದ ಬದುಕಿನ ಎರಡು ಆಯಾಮಗಳಿವೆ, ಸತ್ಯಗಳಿವೆ.

ಬಂಡಾಯ ಸಾಹಿತ್ಯವಿಂದು ಕಾವ್ಯ, ಕತೆ, ಕಾದಂಬರಿ, ನಾಟಕ ಎಲ್ಲಾ ಪ್ರಾಕಾರಗಳಲ್ಲಿಯೂ ಸಮೃದ್ಧವಾಗಿಯೇ ಬೆಳೆದಿದೆ. ಹೀಗೆ ವಿಶಿಷ್ಟವಾಗಿ ಬೆಳೆದು ಬಂದಿರುವ ಸಾಹಿತ್ಯದಲ್ಲಿ ಸ್ತ್ರೀ ಬದುಕಿನ ಬದಲಾವಣೆಯ ಆಶಯವನ್ನು ಗುರುತಿಸುವ ಸಂದರ್ಭದಲ್ಲಿ ಬದಲಾವಣೆ ಎಂದರೆ ಏನು? ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ.

---

೩. ಆರ್ಕೆ ; ಸಿದ್ಧಾಂತ ಮತ್ತು ಮಹಿಳೆ. ಪುಟ-೭.

ಈ ಸಂದರ್ಭದಲ್ಲಿ ಬಂದಿರುವ ಸಾಹಿತ್ಯದಲ್ಲಿ ಅಸಹಾಯಕತೆ, ಪ್ರತಿಭಟನೆ, ಬದಲಾವಣೆಯ ಆಶಯಗಳ ಹಿನ್ನೆಲೆಯಲ್ಲಿ ಸ್ತ್ರೀ ಬದುಕನ್ನು ಕುರಿತಂತೆ ಆಲೋಚನೆಗಳು ನಡೆದಿರುವುದನ್ನು ಕಾಣಬಹುದು. ಈ ಸಂದರ್ಭದಲ್ಲಿ ಹಾಗೂ ಈ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ಬರೆದವರು ಸಾರಾ ಅಬೂಬಕ್ಕರ್.ಇವರು ಬರೆದಿರುವ ಸಾಕಷ್ಟು ಕಾದಂಬರಿ ಹಾಗೂ ಕತೆಗಳಲ್ಲಿಯೂ ಬಂಡಾಯವಿದೆ. ಇವರ ಬಂಡಾಯ ನೆಲೆಯ ಶ್ರೇಷ್ಠ ಕಾದಂಬರಿ ಎಂದರೆ 'ಚಂದ್ರಗಿರಿಯ ತೀರದಲ್ಲಿ'. ಇಲ್ಲಿ ವ್ಯವಸ್ಥೆಯ ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಅದರಲ್ಲೂ ಮುಸ್ಲಿಂ ಧರ್ಮ ನಿಯಮ, ಆಚಾರ, ಪದ್ಧತಿಗಳ ವಿರುದ್ಧ ಸಾಕಷ್ಟು ಅಸಮಾಧಾನ ಇರುವುದನ್ನು ಗಮನಿಸಬಹುದು.ಹೀಗೆ ಇವರು ಬರೆದ ಸಾಹಿತ್ಯವೆಲ್ಲವೂ ಬಂಡಾಯವಾಗಿದೆ. ಈಗ ನನ್ನ ಉದ್ದೇಶ ಸಾರಾರವರ ಕೆಲವೊಂದು ಕತೆಯಲ್ಲಿ ಬಂಡಾಯದ ನೆಲೆ ಮನೋಧರ್ಮ ಹೇಗೆ ವ್ಯಕ್ತವಾಗಿದೆ ಎಂಬುದರ ಕಡೆ ಬೆಳಕನ್ನು ಹರಿಸುವುದು. ಉದಾಹರಣೆಗೆ ನೋಡುವುದಾದರೆ 'ಧರ್ಮ ಬಲೆಬೀಸಿದಾಗ' ಕತೆಯಲ್ಲಿ ಕತೆಯ ನಾಯಕಿ ಖತೀಜಾಬಿ. ಇವಳು ಮುಸ್ಲಿಂ ಗಂಡಸರು ಅಧಿಕಾರದ ಮದದಿಂದ ಹೆಣ್ಣಿನ ಮೇಲೆ ನಡೆಸುವ ಶೋಷಣೆಯ ವಿರುದ್ಧ ಹಾಗೂ ಮೌಲ್ವಿಗಳ, ಮಸೀದಿಯ ನಿಯಮಗಳ ವಿರುದ್ಧ ಬಂಡೇಳುತ್ತಾಳೆ. ಇವಳಲ್ಲಿ ಆಕ್ರೋಶವಿದೆ, ಬಂಡಾಯವಿದೆ.ಇಲ್ಲಿ ಖತೀಜಾಬಿ ದೃಢನಿರ್ಧಾರ ಮಾಡಿ ನಿಲ್ಲುತ್ತಾಳೆ. ಏನೇ ಆದರೂ ತನ್ನ ಮಗಳಿಗೆ ವಯಸ್ಸಾದ ಗಂಡಿಸಿಗೆ ಕೊಟ್ಟು ಮದುವೆ ಮಾಡುವುದಿಲ್ಲ. ಕೊನೆಗೆ ತನ್ನ ಹಠವನ್ನು ಸಾಧಿಸಿಯೇತೋರಿದ್ದಾಳೆ. ಇವಳು ಪೋಲೀಸರಿಗೆ ದೂರು ನೀಡುವುದರ ಮಸೀದಿಯ ಜಮಾತ್ ಅಧ್ಯಕ್ಷರ ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸಿದ್ದಾಳೆ.

'ಚಪ್ಪಲಿಗಳು' ಕಥಾಸಂಕಲನದ ಪ್ರಮುಖ ಕತೆಯಾದ ಚಪ್ಪಲಿಗಳು ಕತೆಯ ನಾಯಕಿ ಸಮೀರಾ ಮತ್ತು ಶಬೀರ್ ದಂಪತಿಗಳು ಕೊಲ್ಲಿರಾಷ್ಟ್ರದಲ್ಲಿರುವ ಶಬೀರ್‌ಊರಿಗೆ ಬಂದಿದ್ದವ ತಾಯಿ ತಮ್ಮಂದಿರ ಜೊತೆ ಪತ್ನಿಯನ್ನು ಕರೆದುಕೊಂಡು ಮಂಗಳೂರಿಗೆ ಹೋಗಿದ್ದ ಅಲ್ಲಿ ಅವರಿಗೆ ಬೇಕುಬೇಕಾದೆಲ್ಲ ತಿನ್ನಿಸಿ ಸಿನಿಮಾ ನೋಡೋಣವೆಂದ. ಹಳೆಯಸಂಪ್ರದಾಯದ ಉಮ್ಮ ಬರಲು ಒಪ್ಪದಿದ್ದಕ್ಕಾಗಿ

ತಮ್ಮಂದಿರನ್ನು ಉಮ್ಮನ ಜೊತೆ ಹೋಟೆಲ್ ರೂಮಿನಲ್ಲಿಯೇ ನಿಲ್ಲಿಸಿ ಶಬೀರ್ ಪತ್ನಿಯನ್ನು ಕರೆದುಕೊಂಡು ಹೋಗಿ ಸಿನಿಮಾ ನೋಡಿ ಬಂದರು. ಊರಿಗೆ ಹಿಂದಿರುಗಿದಾಗ ಸಮೀರಾಳ ತಂದೆ ಅಂಗಳದಲ್ಲಿ ಕಾಯುತ್ತಿದ್ದರು. ಮನೆ ಮಂದಿ ಮಂಗಳೂರಿಗೆ ಸಿನಿಮಾ ನೋಡಲು ಹೋಗಿದ್ದರೆಂಬ ಸುದ್ದಿ ಕೇಳಿ ಅವರ ಮೈ ಉರಿಯುತ್ತದೆ. ಅಳಿಯನಿಗೆ ಬುದ್ಧಿಮಾತನಾಡಿ ''ಸಮೀರಾ ಹೆಣ್ಣು. ಆಕೆಗೆ ಇಂತಹ ರುಚಿಹತ್ತಿಸಿದರೆ ಅವಳ ಬುದ್ಧಿ ಹಾಳಾಗುತ್ತದೆ. ಹೆಂಗಸರನ್ನು ಕಾಲಿನ ಚಪ್ಪಲಿಯಂತೆ ಬಳಸಿಕೊಳ್ಳಬೇಕು. ಬೇಕಾದಾಗ ಉಪಯೋಗಿಸಬೇಕು, ಬೇಡವಾದಾಗ ಮೂಲೆಯಲ್ಲಿ ಬಿಡಬೇಕು. ಅದುಬಿಟ್ಟು ತಲೆಯಮೇಲಿಟ್ಟುಕೊಂಡರೆ ಹೇಗೆ? ತಂದೆಯ ಮಾತನ್ನು ಕೇಳಿದ ಸಮೀರಾಳಿಗೆ ಬಹಳ ಕೋಪ ಬರುತ್ತದೆ. ಅವಳು ನೇರವಾಗಿ ವಿರೋಧಿಸದಿದ್ದರೂ ಪರೋಕ್ಷವಾಗಿ ತನ್ನ ಅಸಮಾಧಾನವನ್ನು ಬಂಡಾಯದ ರೀತಿಯಲ್ಲಿ ವ್ಯಕ್ತಪಡಿಸಿದ್ದಾಳೆ. ಅವಳು ಯಾವಾಗಲೂ ತನ್ನ ತಾಯಿಯ ವರುಷವೆಲ್ಲಾ ಮುಗಿಯದ ಬಸಿರುಬಾಣಂತನ ಮಾಡಿ ಬೇಸತ್ತಿದ್ದವಳು. ತನ್ನ ತಾಯಿ ಹೇಳಿದ ಮಾತಿಗೆ ಹೀಗೆ ತನ್ನ ಮನಸ್ಸಿನ ಅಸಮಾಧಾನವನ್ನು ವ್ಯಕ್ತಪಡಿಸುತ್ತಾಳೆ. ''ಸಾಕಮ್ಮ ಸುಮ್ಮನಿರು, ನನ್ನಿಷ್ಟ ಬಂದಂತೆ ನಾನಿರುತ್ತೇನೆ.ತಾತ್ಸಾರದಿಂದ, ತಿರಸ್ಕಾರದಿಂದ, ದ್ವೇಷದಿಂದ ಉರಿಯುತ್ತ ತಾಯಿಯನ್ನು ಗದರಿಸಿದಳು.''.ತನ್ನ ತಂದೆಯ ಮಾತಿನ ಬಗ್ಗೆ ಹಾಗೂ ವ್ಯವಸ್ಥೆಯ ಬಗ್ಗೆ ಇದ್ದಂತಹ ವಿರೋಧವನ್ನು ಮೇಲಿನ ಮಾತಿನ ರೂಪದಲ್ಲಿ ವ್ಯಕ್ತಪಡಿಸುತ್ತಾಳೆ. ಇಲ್ಲಿ ಬಂಡಾಯದ ನೆಲೆಯಿದೆ. ಅವಳು ತಂಗಿ ತಮ್ಮಂದಿರ ಜೊತೆ ಜಗಳ ಮಾಡುವುದು, ಮನೆಗೆಲಸವನ್ನು ಮಾಡದೆ ತಾಯಿ ಕರೆದರೆ ಸ್ಪಷ್ಟವಾಗಿ ನಿರಾಕರಿಸುತ್ತಿದ್ದಳು.'ನನ್ನಿಂದಾಗದು, ಬೇಕಾದರೆ ನೀನೇ ಮಾಡು' ಎಂದು ಹೇಳುತ್ತಿದ್ದಳು. ಇವಳ ನಡವಳಿಕೆಯಲ್ಲುಂಟಾದ ಬದಲಾವಣೆಯನ್ನು ನಾವು ಇಲ್ಲಿ ಗಮನಿಸುವ ಜೊತೆಗೆ ಅವಳಲ್ಲಿದ್ದಂತಹ ಬೇಸರ ಹಾಗೂ ಅಸಮಾಧಾನ ಬಂಡಾಯದ ಸ್ವರೂಪ ಪಡೆಯುವುದನ್ನು ನೋಡಬಹುದು. ಆದರೆ ಅವಳು ಇದನ್ನು ಪರೋಕ್ಷವಾಗಿ ವ್ಯಕ್ತಪಡಿಸುತ್ತಿರುತ್ತಾಳೆ.

''ಗಗನಸಖಿ'' ಎಂಬ ಕತೆಯ ನಾಯಕಿ ರಚನಾ.ಬಂಡಾಯದ ಮನೋಧರ್ಮದವಳು. ಕತೆಯ ಪ್ರಾರಂಭದಲ್ಲಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸಿದರೂ ಎಲ್ಲಾವನ್ನು ಸಹಿಸಿದ ರಚನಾ ಕೊನೆಗೆ ತನಗಾದ ಅನ್ಯಾಯದ ವಿರುದ್ಧ ಹಾಗೂ ಪುರುಷ ಜಗತ್ತಿನ ದೃಷ್ಟಿಕೋನದ ವಿರುದ್ಧ ಬಂಡೇಳುತ್ತಾಳೆ. ಕೊನೆಗೆ ಅವಳು ತನ್ನ ಆಕ್ರೋಶವನ್ನು ಮಾತಿನಲ್ಲಿಯೂ ತೋರಿಸುತ್ತಾಳೆ. ಹಾಗೂ ನಡವಳಿಕೆಯಲ್ಲಿಯೂ ಅದು ವ್ಯಕ್ತವಾಗುತ್ತದೆ. ಕೊನೆಗೆ ಅವಳು ತನ್ನ ಗಂಡ ಮಾಡಿದ ತಪ್ಪನ್ನು ಕ್ಷಮಿಸದೆ ಅವನನ್ನು ತಿರಸ್ಕರಿಸಿ ತನಗೆ ಇಷ್ಟವಾದವನ ಕೈ ಹಿಡಿಯುತ್ತಾಳೆ.ಇದನ್ನು ಅವಳು ಅಣ್ಣ ಮತ್ತು ಗಂಡ ಎನಿಸಿದವನ ಮುಂದೆಯೇ ಮಾಡುತ್ತಾಳೆ.

ಹೀಗೆ ಸಾರಾರವರು ಕತೆಗಳಲ್ಲಿ ಅಸಹಾಯಕ ಜನರ ಮೌಢ್ಯತೆ, ಸಣ್ಣತನ, ಅಮಾನವೀಯತೆಯ ವಿರುದ್ಧ ಬಂಡೇಳುವಂತಹ ಚಿತ್ರಣವನ್ನು ನೀಡಿದ್ದಾರೆ.

ಉಪಸಂಹಾರ

ಸಾರಾರವರು ಶ್ರೀಮಂತ ಕುಟುಂಬದಲ್ಲಿ ಒಬ್ಬಳೇ ಮಗಳಾಗಿ ಹುಟ್ಟಿ ಯಾವಸಮಸ್ಯೆಗಳೂ ಇಲ್ಲದಂತೆ ಬೆಳೆದರೂ ಅವರ ಕಣ್ಣಿಗೆ ಕಾಣಿಸಿದ್ದು ಬರಿಯ ಸಮಸ್ಯೆಗಳು ಮಾತ್ರ . ಮುಸ್ಲಿಂ ಸಮುದಾಯದಲ್ಲಿದ್ದಂತಹ ಪ್ರಧಾನ ಸಮಸ್ಯೆಗಳು ಇವರನ್ನು ಬಹುತೇಕವಾಗಿ ಆಕರ್ಷಿಸಿತು. ಈ ಸಮಸ್ಯೆಗಳೇ ಸಾರಾರವರು ಬರವಣಿಗೆಯಲ್ಲಿ ತೊಡಗುವಂತೆ ಮಾಡಿದವು ಎಂದರೆ ತಪ್ಪಾಗಲಾರದು.

ಕನ್ನಡ ಸಾಹಿತ್ಯದಲ್ಲಿ ಎಂಬತ್ತರ ದಶಕ ಬಂಡಾಯ ಮತ್ತು ಪ್ರತಿಭಟನೆಯ ಕಾಲ. ಹಲವು ಉಪಸಂಸ್ಕೃತಿಗಳಿಂದ ಬಂದ ಲೇಖಕ ಲೇಖಕಿಯರು ಪ್ರಧಾನವಾಗಿ ಬರವಣಿಗೆಯ ತಾತ್ವಿಕತೆಯನ್ನೇ ಪ್ರಶ್ನಿಸಿದರು. ದಲಿತ, ಬಂಡಾಯ, ಸ್ತ್ರೀವಾದಿ, ಮುಸ್ಲಿಂ ಸಂವೇದನೆಗಳ ಸಂದರ್ಭದಲ್ಲಿ ಸಾರಾರವರ ಬರಹಗಳು ಬಂದವು. ಇವರು ತೆರೆದಿಟ್ಟ ಅನುಭವಗಳು ಕನ್ನಡಕ್ಕೆ ಹೊಸದಾಗಿದ್ದವು ಎಂಬುದು ಒಂದು ಆಕರ್ಷಣೆಯಾಗಿದ್ದು ಜೊತೆಗೆ ಸಾಮಾಜಿಕ ಸಮಸ್ಯೆಗಳ ಆಳ ಅರಿವು ಮೂಡಿತು.

ತಮ್ಮ ಸಮಾಜದ ನ್ಯೂನತೆಗಳನ್ನು ಸರಿಪಡಿಸಬೇಕಾದರೆ ಲೇಖಕರ ವಸ್ತುಗಳು ಇದೇ ಬಗೆಯವು. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಚ್ಚಿನ ಸ್ಥಾನಮಾನದ ಚಿತ್ರಣ ಅಂಚಿನಲ್ಲಿರುವ ಸ್ತ್ರೀಯರು, ದಲಿತರು, ಧಾರ್ಮಿಕವಾಗಿ ಶೋಷಿತರು, ವಿದ್ಯಾವಂತ ಮುಸ್ಲಿಮರ ಜೀವನ, ವಿಚ್ಛೇದಿತ ಸ್ತ್ರೀಯರು, ಅಪ್ರಾಪ್ತವಯಸ್ಸಿನ ಮದುವೆ, ವರದಕ್ಷಿಣೆ ಸಮಸ್ಯೆ, ನವಶ್ರೀಮಂತಿಕೆ ತಂದ ಅಪಾಯ, ಕೊಲ್ಲಿರಾಷ್ಟ್ರಗಳಲ್ಲಿ ಕೆಲಸ ಮಾಡುವವರು ಹೀಗೆ ಹತ್ತು ಹಲವು ಮುಖಗಳ ಚಿತ್ರಣ ಸಾರಾರವರ ಕತೆಗಳಲ್ಲಿ ಕಂಡುಬಂದಿದೆ. ಕತೆಗಳ ಮೂಲಕ ಮುಸ್ಲಿಂ ಸಮಾಜದ ಸ್ತ್ರೀಯರ ಬದುಕಿನ ಅಂತರಂಗವನ್ನು ತೆರೆದವರಲ್ಲಿ ಸಾರಾರವರು ಪ್ರಮುಖರು. ಕನ್ನಡ ಕಥಾಲೋಕಕ್ಕೆ ಇವರ ಕೊಡುಗೆ ಅಪಾರ. ಇವರ ಕಥೆಗಳು ಕನ್ನಡ ಮಹಿಳಾ ಸಣ್ಣಕತೆಗಳ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸದವು. ಎಂಬತ್ತರ ದಶಕದಲ್ಲಿ ಏನೂ ಹೇಳಬೇಕೆಂಬುದು ಪ್ರಧಾನ ಕಳಕಳಿಯಾದರೆ ತೊಂಬತ್ತರ ದಶಕದ ಕತೆಗಳು ಹೇಗೆ ಹೇಳಬೇಕೆಂಬುದರ ಕಡೆಗೆ. ಅಂದರೆ ಪ್ರಧಾನರೂಪ, ಶಿಲ್ಪ, ಆಕೃತಿ, ರಚನೆಗಳ ನಿರ್ಮಾಣದತ್ತ ಕಣ್ಣುಅರಳಿಸಿದ್ದನ್ನು

ಗಮನಿಸಬಹುದು. ಇದೇ ನೆಲದಲ್ಲಿ ಹಿಂದೂ ಸಮಾಜದಲ್ಲಿ ಕತ್ತಲಿದ್ದರೂ ಮುಸ್ಲಿಂ ಹಾಗೂ ಹಿಂದೂ ಸಮಾಜಗಳೆರಡರ ನಡುವೆ ಸಾಕಷ್ಟು ಭಾವನಾತ್ಮಕ, ಸಾಂಸ್ಕೃತಿಕ ಅಂತರಗಳಿವೆ. ಆದರೆ ಮುಸ್ಲಿಂ ಜನಾಂಗದ ಹೆಣ್ಣುಮಕ್ಕಳ ಸಮಸ್ಯೆ ಹೇಳತೀರದು. ಮುಖಕ್ಕೆ ಪರದೆ ಎಳೆದುಕೊಂಡಿರುವ ಈ ಹೆಣ್ಣುಮಕ್ಕಳು ಹೊರಜಗತ್ತಿಗೂ ತಮಗೂ ಯಾವುದೇ ಬೌದ್ಧಿಕ ಸಂಬಂಧ ಸ್ಥಾಪಿಸಿಕೊಳ್ಳಲಾಗದೆ ಸೋಲುವಂತಹವರು. ಇದರೊಂದಿಗೆ ಬಡತನ, ಅವಿದ್ಯಾವಂತಿಕೆ ಇವು ಅವರ ಬಂಧನದ ಸ್ಥಿತಿಗೆ ಪೂರಕವಾಗಿ ದುಡಿಯುವಂತಹದು. ಇವರ ಕತೆಗಳು ಬುರ್ಖಾಗಳ ಹಿಂದೆ ಅಡಗಿರುವ ಮುಸ್ಲಿಂ ಹೆಣ್ಣುಗಳ ನೋವು ನಲಿವಿನ ಜೀವನವನ್ನು ಬಿಚ್ಚಿಕೊಡುತ್ತದೆ.

ತಮ್ಮ ಧರ್ಮದ ಬಗೆಗೆ ಅಪಾರ ಶ್ರದ್ಧೆ, ಗೌರವಗಳಿದ್ದರೂ ದೇವರು ಧರ್ಮಗಳುಂಟುಮಾಡುವ ಅಪಾಯಗಳ ಬಗೆಗೆ ಸ್ಪಷ್ಟ ವಿರೋಧವಿದೆ. ಅವಿದ್ಯಾವಂತಿಕೆಯ ಬಗ್ಗೆ ತೀವ್ರ ಸಿಟ್ಟಿದೆ. ತಮ್ಮ ಜನಾಂಗದ ಅಜ್ಞಾನ, ಮೂಢನಂಬಿಕೆ, ಧರ್ಮಾಂಧತೆ, ಸಾಂಪ್ರದಾಯಕತೆಗಳು ಹೆಣ್ಣಿನ ಬದುಕಿನಲ್ಲಿ ತಂದೊಡ್ಡುವ ಆತಂಕಗಳ ಬಗೆಗೆ ಲೇಖಕಿಯರು ವಿಷಾದ ವ್ಯಕ್ತಪಡಿಸುತ್ತಾರೆ. ಅಂತಹವರಲ್ಲಿ ಸಾರಾರವರು ಒಬ್ಬರು.

ಮುಸ್ಲಿಂಸಮಾಜದಲ್ಲಿ ಹೆಂಗಸರಿಗೆ ಕಾಡುತ್ತಿದ್ದ ಪ್ರಮುಖ ಸ ಮಸ್ಯೆ ತಲಾಖ್. ಇದನ್ನೇ ಸಾರಾರವರು ತಮ್ಮ ಕಾದಂಬರಿ ಹಾಗೂ ಕಥೆಗಳಿಗೆ ವಸ್ತುಗಳನ್ನಾಗಿ ಆಯ್ಕೆಮಾಡಿಕೊಂಡು ಬರೆದರು. ಅಷ್ಟೇ ಅಲ್ಲದೆ ಗಮನರ್ಹಾವಾಗಿ ಯೋಚಿಸಿದವರು. ಹಾಗೂ ಸಾರಾರವರು ಮೊದಲು ಪ್ರಶ್ನಿಸಿದ್ದು 'ಚಂದ್ರಗಿರಿಯ ತೀರದಲ್ಲಿ'. ಧರ್ಮದ ಸಂಕೇತವಾದ ಮಸೀದಿಯ ಕೊಳದಲ್ಲಿ ಹಾರಿ ಪ್ರಾಣ ಕಳೆದುಕೊಳ್ಳುವ ನಾದಿರಾ ಇಂತಹ ನಿಯಮವಿದೆ ಎಂದು ಧಾರ್ಮಿಕ ಸ್ಥಳದಲ್ಲಿ ಪ್ರಶ್ನಿಸುವುದು ಕಾದಂಬರಿಯಲ್ಲಿ ಧ್ವನಿತವಾಗಿದೆ. ಈ ಕಾದಂಬರಿ ಪ್ರಕಟವಾದನಂತರ ಮುಸ್ಲಿಂ ಸಮುದಾಯದೊಳಗೆ ತಲಾಖ್‌ನ್ನು ಕುರಿತು ಸಾಕಷ್ಟು ಚರ್ಚೆಗಳು ನಡೆದುದನ್ನು ನೋಡಬಹುದು. ಹಾಗೆಯೇ ಇವರ ಹಲವಾರು ಕತೆಗಳಲ್ಲಿ ತಲಾಖ್ ಪದ್ಧತಿಗೆ ಸಿಲುಕಿ ಹೆಣ್ಣು ಬಳಲುವ ರೀತಿಯ ಚಿತ್ರಣವಿದೆ.

ಅವಗಣನೆಗೆ ಒಳಗಾದ ಎರಡನೇ ವರ್ಗದ ಪ್ರಜೆಯಾಗಿ ಪರಿಗಣಿಸಲ್ಪಟ್ಟಿರುವ ಸ್ತ್ರೀ ಸಮುದಾಯ ಸಾರಾರವರ ಕಾಳಜಿಯ ವಲಯ. ಕಾಮದ ವಸ್ತುವಾಗಿ, ಹೆರುವ

ಯಂತ್ರವಾಗಿ, ನಾಲ್ಕುಗೋಡೆಗಳ ಆರ್ಥಿಕ ಪರಾವಲಂಬನೆಯಿಂದಾಗಿ ದಾಸ್ಯ ಪ್ರವೃತ್ತಿಯನ್ನು ಮೈಗೂಡಿಸಿಕೊಂಡು ಅಬಲೆ ಎಂದು ಹೀನಾಯವಾಗಿ ಬದುಕು ಸಾಗಿಸುತ್ತಿರುವ ಮಹಿಳೆ ಸಾರಾರವರ ಕಥೆಗಳಲ್ಲಿ ಕಾಣಿಸುತ್ತಾಳೆ. ಬರವಣಿಗೆಗೆ ತೊಡಗಿದ ಪ್ರಾರಂಭದಲ್ಲಿ ಸಾರಾ ಸಹಜವಾಗಿಯೇ ಪುರುಷ ಪ್ರಧಾನ ವ್ಯವಸ್ಥೆಯಡಿ ಬಲಿಪಶುಗಳಾಗಿರುವ ತನ್ನ ಸಮುದಾಯದ ಧ್ವನಿಯಾಗಿ ಅವರಿಗೊಂದು ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕೆಂಬ ಹುಮ್ಮಸ್ಸಿನಲ್ಲಿ ಬರೆದವರು. ಹೀಗೆ ಬರೆದು ಹಲವರ ವಿರೋಧ ಕಟ್ಟಿಕೊಂಡಾಗಲೂ ಎದೆಗುಂದಲಿಲ್ಲ. ಧರ್ಮದ ಬಗೆಗಿನ ಅಂಧಶ್ರದ್ಧೆ ಈ ಜನರನ್ನು ದಿಕ್ಕು ತಪ್ಪಿಸುತ್ತಿರುವ ಧರ್ಮದ ಚುಕ್ಕಾಣಿ ಹಿಡಿದ ದಿಗ್ಗಜರ ರೀತಿನೀತಿಗಳು ಸಾರಾರವರ ಕತೆಗಳಿಗೆ ವಸ್ತುಗಳಾದವು. ನಂತರದ ದಿನಗಳಲ್ಲಿ ಬಹುತೇಕ ಎಲ್ಲಾ ಸಮುದಾಯಗಳಲ್ಲೂ ಸ್ಥಿತಿ ಹೆಚ್ಚುಕಡಿಮೆ ಒಂದೇ ರೀತಿಯಿರುವುದು ಮನಗಂಡ ಇವರು ಕೋಮಿನ ಸಮಸ್ಯೆಗಳೊಂದಿಗೆ ಸ್ಪಂದಿಸುತ್ತಾ ಮಹಿಳೆಯರ ಸಮಸ್ಯೆಗಳ ಕಡೆ ಬೆಳಕು ಚೆಲ್ಲುವ ಮೂಲಕ ಸಮಾಜ ಮತ್ತು ಚಿಂತನೆಗೆ ಮಾರ್ಗರೂಪಿಯಾದರು. ಇದಕ್ಕೆ ಸಾಕ್ಷಿಯಾಗಿ ಸಾರಾರವರ ಓ...ರಾಮಾ ಮತ್ತು ಅಪಹರಣ ಎಂಬ ಕತೆಗಳನ್ನು ಗುರುತಿಸಬಹುದು. ಇವೆರಡರಲ್ಲಿ ಕೋಮು ಗಲಭೆಗಳನ್ನೇ ವಸ್ತುವನ್ನಾಗಿಸಿಕೊಂಡು ಕಥೆ ರಚನೆ ಮಾಡಿದವರು. ಪುರುಷನ ಮತಾಂಧಕಾರಕ್ಕೆ , ಕ್ರೌರ್ಯಕ್ಕೆ ಕುಟುಂಬ ಹಾಗೂ ಹೆಣ್ಣು ಹೇಗೆ ಬಲಿಯಾಗುತ್ತಿದ್ದಾಳೆ ಎಂಬ ಚಿತ್ರಣವು ಇಲ್ಲಿಕಂಡುಬಂದಿದೆ.

ಬಹುತೇಕ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕೈಯಾಡಿಸಿದ ಸಾರಾರವರು ಬೆರಳೆಣಿಕೆಯಷ್ಟು ಕವನಗಳನ್ನು ಬರೆದಿದ್ದಾರೆ. ಇವರು ಬರೆದ ಕವನಗಳು ಕಡಿಮೆಯಾದರೂ ದುಡಿಸಿಕೊಂಡಿದ್ದ ಪಕ್ಷದಲ್ಲಿ ಇವರು ಓರ್ವ ಉತ್ತಮ ಕವಯಿತ್ರಿಯಾಗಿ ಅರಳಬಹುದಾಗಿದ್ದ ಪಕ್ಷದಲ್ಲಿ ಓರ್ವ ಉತ್ತಮ ಕವಯಿತ್ರಿಯಾಗಿ ಅರಳಬಹುದಾಗಿದ್ದ ಸಾದ್ಯತೆಗಳನ್ನು ನಿರೂಪಿಸಿದ್ದಾರೆ.

'ಸಾರಾಅಬೂಬಕ್ಕರ್‌ರವರ ಕತೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು' ಎಂಬ ವಿಷಯವನ್ನು ಕುರಿತ ಅಧ್ಯಯನಕ್ಕೆ ತೊಡಗುವ ಮೊದಲು ಮಹಿಳಾ ಕಥಾಸಾಹಿತ್ಯ ಮತ್ತು ಅದರ ಸ್ವರೂಪ ಲಕ್ಷಣವನ್ನು ಗುರುತಿಸುವ ಕೆಲಸವನ್ನು ಇಲ್ಲಿ ಮಾಡಲಾಗಿದೆ. ನಂತರ

ಸಾರಾರವರ ಕತೆಗಳ ವಸ್ತು, ದೃಷ್ಟಿ, ಸಂವೇದನೆಗೆ ಅನುಗುಣವಾಗಿ ಅಧ್ಯಾಯಗಳ ವರ್ಗೀಕರಣವನ್ನು ಮಾಡಿಕೊಳ್ಳುವುದರ ಮೂಲಕ ಇವರ ಕತೆಗಳಲ್ಲಿನ ಹೆಣ್ಣು ವ್ಯಕ್ತಿಗತವಾಗಿ ಕ್ರಮೇಣ ವಿಕಾಸವಾಗುತ್ತಾ ಬಂದ ರೀತಿಯನ್ನು ಗುರುತಿಸಲಾಗಿದೆ. ಇಲ್ಲಿ ಅಧ್ಯಾಯಗಳ ಮುಖಾಂತರ ಸಾರಾರವರ ಕತೆಗಳಲ್ಲಿ ಕಾಣುವ ಸಾಮಾಜಿಕತೆ , ಪುರುಷ ಜಗತ್ತು, ಸ್ತ್ರೀ ಜಗತ್ತಿನ ಅನಾವರಣ, ಧಾರ್ಮಿಕ ನೆಲೆ , ಆಧುನಿಕತೆ ಮತ್ತು ಬಂಡಾಯದ ನೆಲೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಈ ಸ ಂದರ್ಭಗಳಲ್ಲಿ ಹಲವು ಸಂವೇದನೆ ಹಾಗೂ ಜಗತ್ತುಗಳ ಪರಿಚಯವಾಗಿದೆ.

ಹೆಣ್ಣು ಬರೆಯಬಲ್ಲಳೇ ಎಂಬ ವಾತಾವರಣ ಇದ್ದಂತಹ ಸಂದರ್ಭದಲ್ಲಿ ಈ ಪ್ರಶ್ನೆಗೆ ಉತ್ತರ ನೀಡುವಂತೆ ಬರೆಯಲು ಪ್ರಾರಂಭಿಸಿ ಮುಂದಿನ ಲೇಖಕಿಯರಿಗೂ ಮಾರ್ಗದರ್ಶನವನ್ನು ತೋರಿಸಿ ನಾನೂ ಬರಯಬಲ್ಲೆ, ಬರೆಯುತ್ತೇನೆ ಎಂಬ ನಿಲುವನ್ನು ವ್ಯಕ್ತಪಡಿಸುವ ಹಾಗೂ ಅದನ್ನು ತೋರಿಸುವ ಮಟ್ಟಕ್ಕೆ ಏರಿದವರು ತಿರುಮಲಾಂಬ. ಇವರು ಹಾಕಿದ ದಾಟಿಯಲ್ಲಿಯೇ ಮುಂದೆ ಬಂದಂತಹ ಲೇಖಕಿಯರು ಸಾಗಿರುವುದನ್ನು ನೋಡಬಹುದು. ಅಂತಹವರಲ್ಲಿ ಸಾರಾರವರು ಪ್ರಮುಖರು. ಇವರು ಮುಸ್ಲಿಂ ಜನಾಂಗದ ಪ್ರತಿನಿಧಿಯಾಗಿ ಬರೆಯಲು ಪ್ರಾರಂಭಿಸಿ ತಮ್ಮ ಸಂವೇದನೆಗಳ ಮೂಲಕ ಜನರ ಬಳಿ ಬಹುಬೇಗನೆ ತಲುಪುವಂತಾದರು. ಅಷ್ಟೇ ಅಲ್ಲದೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಸ್ಥಾನವನ್ನು ಹಾಗೂ ಗುರುತಿಸುವಿಕೆಯನ್ನು ಪಡೆದುಕೊಂಡವರು. ಅಷ್ಟೇ ಅಲ್ಲದೆ ಈ ಮಧ್ಯೆ ಹೆಚ್ಚು ಕಾಲ ಉಳಿಯಬಲ್ಲ ಲೇಖಕಿಯರ ಸ್ಥಾನಕ್ಕೆ ಸೇರಿದವರು. ಇವರ ಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಸಾಧನೆ ಅಪಾರ. ಅಂತೆಯೇ ಪ್ರಭಾವ ಬೀರಿರುವಂತಹ ಕ್ಷೇತ್ರಗಳು ಹಲವು. ಇವೆಲ್ಲಾ ಸಾಧನೆಗಾಗಿ ಇವರಿಗೆ ಸಂದಿರುವಂತಹ ಪ್ರಶಸ್ತಿಗಳು ಹಲವು.

ಗ್ರಂಥಋಣ

೧. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ : ಡಾ. ಎಚ್.ಎಸ್. ಶ್ರೀಮತಿ (ಸಂ.)
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ.

೨. ಕರ್ನಾಟಕದ ಕವಿಯತ್ರಿಯರು : ನಿರುಪಮಾ (ಸಂ.),
ಪ್ರಕಾಶಕರು : ಶ್ರೀ ಪ್ರಕಾಶಕರು,
ರಿ.ನಂ. ೧೫, ರಾಜಾಜಿನಗರ,
ಬೆಂಗಳೂರು.

೩. ಕನ್ನಡ ಸಾಹಿತ್ಯ ಮತ್ತು ಮಹಿಳೆ : ಡಾ. ಸಬಿಹಾ ಭೂಮಿಗೌಡ,
ಡಾ. ಮಲ್ಲಿಕಾ ಘಂಡಿ, ಟಿ
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು.

೪. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ : ಬರಗೂರು ರಾಮಚಂದ್ರಪ್ಪ, (ಪ್ರ.ಸಂ.)
ವಿವಿಧ ಲೇಖಕರು, ಕನ್ನಡ ಸಾಹಿತ್ಯ
ಅಕಾಡೆಮಿ, ಕನ್ನಡ ಭವನ, ಬೆಂಗಳೂರು.

೫. ಕಥೆ ಮತ್ತು ಕಥಾ ಸಾಹಿತ್ಯ : ಡಾ. ಎಸ್.ಎಲ್. ಭೈರಪ್ಪ,
ಸಾಹಿತ್ಯ ಪ್ರಕಾಶನ,
ಜಂಗಮ ಮೇಸ್ತ್ರಿ ಗಲ್ಲಿ, ಬಳೇಪೇಟೆ,
ಬೆಂಗಳೂರು-೫೩.

೬. ಕನ್ನಡ ಕಥನ ಸಾಹಿತ್ಯ : ಜಿ.ಎಸ್. ಅಮೂರ,
ಶ್ರೀ ಹರಿ ಪ್ರಕಾಶನ, ಭಾರತೀ
ನವೋದಯ ನಗರ, ಧಾರವಾಡ,-೨,
(೧೯೯೪)

೭. ಕನ್ನಡ ಲೇಖಕಿಯರ ನೆಲೆ-ಬೆಲೆ : ಬಿ.ಎಸ್.ವೆಂಕಲಕ್ಷ್ಮಿ,
ಎನ್.ಟಿ. ಶ್ಯಾಂ ಪ್ರಕಾಶನ, ಇಂದಿರಾನಗರ,
ಬೆಂಗಳೂರು, (೧೯೯೪)

೮.	ಚಹರೆ	: ಡಾ. ಎಚ್.ಎಸ್. ಶ್ರೀಮತಿ, ಇಳಾ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು
೯.	ದಶಕದ ಕನ್ನಡ ಸಾಹಿತ್ಯ	: ಸಂಪಾದಕರು, ಡಾ. ಎಫ್.ಟಿ. ಹಳ್ಳಿಕೇರಿ, ಡಾ. ಕೆ. ರವೀಂದ್ರನಾಥ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೦.	ದಶಕದ ಕನ್ನಡ ಸಾಹಿತ್ಯ	: ಸಂಪಾದಕರು, ಎಲ್.ಸಿ. ಸುಮಿತ್ರಾ (ಸಂ.) ಸಿ.ವಿ.ಜಿ. ಪಬ್ಲಿಕೇಶನ್ಸ್ ಬೆಂಗಳೂರು
೧೧.	ಬೈದವ್ವಾ ಕೇಳ ನನ ಮಾತಾ	: ಡಾ. ಡಿ. ಮಂಗಳಾ ಪ್ರಿಯದರ್ಶಿನಿ, ಸಚಿನ್ ಪಬ್ಲಿಷರ್ಸ್
೧೨.	ಮಹಿಳೆ ಬಿಡುಗಡೆಯ ಹಾದಿಯಲ್ಲಿ	: ಎನ್. ಗಾಯತ್ರಿ ನವ ಕರ್ನಾಟಕ ಪ್ರಕಾಶನ
೧೩.	ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ	: ಡಾ. ಡಿ. ಮಂಗಳಾ ಪ್ರಿಯದರ್ಶಿನಿ ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೪.	ಸ್ತ್ರೀವಾದಿ ಸಾಹಿತ್ಯ ವಿಮರ್ಶೆ	: ತೇಜಸ್ವಿನಿ ನಿರಂಜನ (ಸಂ.) ಸೀಮಂತಿನಿ ನಿರಂಜನ್ (ಸಂ.) ಕನ್ನಡ ಸಂಘ ಕ್ರೈಸ್ಟ್ ಕಾಲೇಜು ಬೆಂಗಳೂರು (೧೯೯೪)
೧೫.	ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ	: ಎಲ್.ಜಿ.ಮೀರಾ ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್ ರಿ.ನಂ. ೨೭೭?೧ ಎಂಟನೇ ಅಡ್ಡರಸ್ತೆ ಕವಿಧಾಮ ನಗರ, ಬೆಂಗಳೂರು-೫೮. (೨೦೦೪)
೧೬.	ಸಂವೇದನೆ	: ಶಶಿಕಲಾ ವೀರಸ್ವಾಮಿ (ಸಂ.) ಕನ್ನಡ ಸಾಹಿತ್ಯ ಪರಿಷತ್ತು ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ

೧೭. ಸ್ತ್ರೀ ವಾದ : ಪ್ರಸಾರಾಂಗ, ಡಾ. ಎಚ್.ಎಸ್. ಶ್ರೀಮತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೮. ಸಾರಾ ಅಬೂಬಕ್ಕರ್ : ಇಂದಿರಾ ಶಿವಣ್ಣ (ಪ್ರಸಂ.) ಅನನ್ಯ ಮಹಿಳಾ ಚೇತನ ಮಾಲಿಕೆ

೧೯. ಸ್ತ್ರೀವಾದ-ನೆಲೆಗಳು ಮತ್ತು ನಿಲಯಗಳು : ಪ್ರಸಾರಾಂಗ, ಅನನ್ಯ ಮಹಿಳಾ ಚೇತನ ಮಾಲಿಕೆ

೨೦. ಸ್ತ್ರೀ ಸಂವೇದನೆ : ಬಿ.ಎಂ. ರೋಹಿಣಿ ಹೇಮಾಂಶು ಪ್ರಕಾಶನ, ಡೇರೆಬೈಲು, ಮಂಗಳೂರು (೧೯೯೫)

೨೧. ಸೇರಿಕೊಂಡ ಎಳೆಗಳು : ಡಾ. ಎಚ್.ಎಸ್. ಶ್ರೀಮತಿ ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು (೨೦೦೩)